ರಂಜನೆ ಬೋಧನೆ ಪ್ರಚೋದನೆ
ಗೌರಿ

ಲಂಕೇಶ್

ಸೆಪ್ಟೆಂಬರ್ 3, 2008 ರೂ. 12/-



ಗೋಕರ್ಣ ಲೂಟಿ


ಮೆಂಟಲ್ ಯಡ್ಡಿ ಡಕಾಯಿತ ಸ್ವಾಮಿ

ಸ್ಟಾಲಿನ್ ನೆರಳಲ್ಲಿ ಸೈಲೆಂಟ್ ಸುನೀಲ

ರೇಂದ್ರಸ್ವಾಮಿಯ ಮರಳು ದಂಧೆ

ಕ್ಕೆ: 180 ಕೋಟಿ ಭೂರೀ ಭೋಜನ

ಳಗಾವಿ: ನಿರ್ಮಲಾ ಎಂಬ ಗುಳುಂ ಪ್ರವೀಣೆ



ಚಿರು ಎಂಬ ಬಿರುಗಾಳಿ




ಬಣಜಿಗ ಕತ್ತಿಗೆ ಗಾಣಿಗ ಬೆಳ್ಳುಬ್ಬಿ ಬಲಿ!





ಬಾಯ್‌ಫ್ರೆಂಡ್ ಯಾಕೆ ಫೋನ್ ಮಾಡಿಲ್ಲ?



"ಇಂಡಿಪೆಂಡೆನ್ಸ್ ಡೇ ದಿನ ಎಲ್ಲರಿಗೂ ರಜೆ ಇದ್ದಿದ್ದರಿಂದ ಶಾಂತನು, ಕಬೀರ್ ಮತ್ತು ನಾನು ನಮ್ಮ ಮನೆಯಲ್ಲಿ ಆರಾಮಾಗಿ ಕೂತು, ಯಾವುದರ ಚಿಂತೆಯೂ ಇಲ್ಲದೆ ರಮ್ಮಿ ಆಟ ಆಡುತ್ತಿದ್ದೆವು. ನಮ್ಮದು ಚಿಕ್ಕಪುಟ್ಟ ಜೂಜು. ಡ್ರಾಪ್‌ಗೆ ಐದು ರೂಪಾಯಿ, ಸೆಕೆಂಡ್ ಡ್ರಾಪ್‌ಗೆ ಹತ್ತು ರೂಪಾಯಿ, ಬುಕ್‌ಗೆ ಇಪ್ಪತ್ತು ರೂಪಾಯಿ. ಈ ಸ್ಟೇಕ್ಸ್‌ನಲ್ಲಿ ದಿನವಿಡೀ ಆಟ* ಆದಿ ಸೋತು ಸುಣ್ಣವಾದರೂ ಕೈಯಿಂದ ಐನೂರು ರೂಪಾಯಿ ಕೂಡ ಹೋಗಿರುವುದಿಲ್ಲ.

ಹೀಗೆ ಆಟವಾಡುತ್ತಾ, ಅಮ್ಮ ನಿರಂತರವಾಗಿ ಅಡುಗೆಮನೆಯಿಂದ ಸರಬರಾಜು ಮಾಡುತ್ತಿದ್ದ ಚಕ್ಕುಲಿ, ಚೌಚೌ, ಬರ್ಫಿ ತಿನ್ನುತ್ತಾ ಕಾಫಿ ಕುಡಿಯುತ್ತಾ ಹರಟೆ ಹೊಡೆಯುತ್ತಾ ಕಾಲ ಕಳೆಯುತ್ತಿದ್ದೆವು.

ಆಗ ನನ್ನ ತಮ್ಮ ಶಾಂತನು "ಶಾರೂ, ನಿನ್ನೆ ನಿನ್ನ ಗರ್ಲ್‌ಫ್ರೆಂಡ್ಸ್ ಜೊತೆ ಬರೀ ಹುಡುಗಿಯರ ಪಾರ್ಟಿಗೆ ಹೋಗಿದ್ದೆಯಲ್ಲಾ, ಹೇಗಿತ್ತು ಪಾರ್ಟಿ?" ಎಂದ.

"ಹುಡುಗಿಯರ ಪಾರ್ಟಿ ಅಂದ್ರೆ ಹೇಗಿರುತ್ತೋ, ಹಾಗಿತ್ತು" ಅಂದು ಸುಮ್ಮನಾದೆ.

"ಅಯ್ಯೋ, ಬರೀ ಗರ್ಲ್ಸ್ ಸೇರಿದಾಗ ಅವರೆಲ್ಲಾ ಏನು ಮಾತಾಡ್ತಾರೆ ಅಂತ ನಿನ್ನಂಥವರೂ ಹೇಳದಿದ್ದರೆ ನಮ್ಮಂತಹ ಬಡಪಾಯಿ ಹುಡುಗರು-ಹುಡುಗಿಯರನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಸ್ವಲ್ಪ ಡೀಟೈಲ್ಸ್ ಹೇಳು" ಎಂದು ಶಾಂತನು ಹೇಳಿದಾಗ ಕಬೀರ್ ಜೋರಾಗಿ ನಕ್ಕ.

"ಯಾಕೆ ನಗ್ತೀಯಾ ಕಬೀರ್?" ಎಂದು ಶಾಂತನು ಕೇಳಿದ್ದಕ್ಕೆ "ಆಮೇಲೆ ಹೇಳ್ತೀನಿ, ಈಗ ಶಾರು ಮಾತಾಡಲಿ" ಎಂದು ಕಬೀರ್ ಉತ್ತರಿಸಿದ.

"ಹುಡುಗಿಯರು ಸೇರಿದಾಗ ಹೆಚ್ಚಾಗಿ ಯಾವುದರ ಬಗ್ಗೆ ಮಾತಾಡ್ತಾರೆ ಅಂದ್ರೆ ಮದುವೆ ಆಗಿದ್ರೆ ಗಂಡನ ಬಗ್ಗೆ, ಆಗಿಲ್ಲ ಅಂದ್ರೆ ಬಾಯ್‌ಫ್ರೆಂಡ್ ಬಗ್ಗೆ, ಅದೂ ಇಲ್ಲಾಂದ್ರೆ ಕೊನೆಗೆ ಬಾಯ್ಸ್ ಬಗ್ಗೆ.... ಇಂಥದ್ದರಲ್ಲೇ ಟೈಮ್ ಕಳೆಯುತ್ತಾರೆ" ಅಂದೆ.

"ಬಾಯ್ಸ್ ಬಗ್ಗೆ ಏನಂತಾರೆ?" ಶಾಂತನು ಪ್ರಶ್ನೆ.

"ಒಂದು ನಿಮಿಷ ಹೇಳ್ತೇನೆ. ಸದ್ಯಕ್ಕೆ ನನ್ನದು ಶೋ" ಎಂದು ನನ್ನ ಎಲೆಗಳನ್ನು ಇಟ್ಟು ಅವರಿಬ್ಬರಿಂದ ಬರಬೇಕಿದ್ದ ಹಣವನ್ನು ಸಂಗ್ರಹಿಸಿದೆ. ಮುಂದಿನ ಆಟವನ್ನು ಕಬೀರ್ ಡೀಲ್ ಮಾಡಲಾರಂಭಿಸಿದಾಗ ತನ್ನ ಕುತೂಹಲವನ್ನು ತಡೆಯಲಾರದೆ ಶಾಂತನು "ಹೇಳು" ಅಂದ.

"ಇದೊಳ್ಳೆ ಕತೆ ಆಯ್ತಲ್ಲಾ ಇವನದ್ದು. ಅದೆಲ್ಲ ಇವನಿಗೆ ಹೇಗೆ ವಿವರಿಸೋದು ಕಬೀರ್?" ಎಂದು ಆತನ ಸಹಾಯವನ್ನು ಕೋರಿದೆ.

"ಯಾಕೋ? ಯಾವುದಾದರೂ ಹುಡುಗಿಗೆ ಲೈನ್ ಹೊಡೀತಿದ್ದೀಯಾ, ಇಷ್ಟೊಂದು ಪ್ರಶ್ನೆ ಕೇಳ್ತಿದ್ದೀಯಲ್ಲಾ?" ಎಂದು ಕಬೀರ್ ಅವನನ್ನು ಚುಡಾಯಿಸಿದ.

"ಹಂಗೇನಿಲ್ಲ, ಒಬ್ಬಳು ಫ್ರೆಂಡ್ ಇದ್ದಾಳೆ. ಆದರೆ ಆಕೆ ನನಗೆ ಅರ್ಥಾನೇ ಆಗಲ್ಲ. ಒಂದು ದಿನ ಸರಿ ಇರ್‍ತಾಳೆ, ಎರಡು ದಿನ ಫೋನ್ ಮಾಡಲಿಲ್ಲ ಅಂದ್ರೆ ಅದ್ಯಾಕೋ ಗುರ್‌ಗುರ್ ಅಂತಿರ್‍ತಾಳೆ. ಬಾಯ್ಸ್ ಜೊತೆ ಇಂಥ ಸಮಸ್ಯೆನೇ ಇರಲ್ಲ... ಅದಕ್ಕೆ ಕೇಳಿದೆ ಅಷ್ಟೆ" ಅಂದ.

ಅದನ್ನು ಕೇಳಿ ನಾನು ಮತ್ತು ಕಬೀರ್ ಇಬ್ಬರೂ ನಗಲಾರಂಭಿಸಿದೆವು. ನಾವ್ಯಾಕೆ ನಗುತ್ತಿದ್ದೇವೆ ಎಂದು ಅರ್ಥವಾಗದೆ ಶಾಂತನು ನಮ್ಮಿಬ್ಬರನ್ನು ತಬ್ಬಿಬ್ಬಾಗಿ ನೋಡಿದ. "OK ಶಾರು, ಇವನಿಗೆ ಹುಡುಗರು ಮತ್ತು ಹುಡುಗಿಯರು ಯೋಚಿಸುವ, ವರ್ತಿಸುವ ರೀತಿಯಲ್ಲಿ ಇರುವ ವ್ಯತ್ಯಾಸದ ಬಗ್ಗೆ ಒಂದು ಚಿಕ್ಕ ಲೆಕ್ಚರ್ ಕೊಡೋಣವಾ?" ಎಂದು ಕಬೀರ್ ನನ್ನನ್ನು ಕೇಳಿದ.

"OK" ಎಂದ ನಾನು "ನೋಡು ಶಾಂತನು ನಿನ್ನ ಗರ್ಲ್‌ಫ್ರೆಂಡ್‌ಗೆ ನಿನ್ನ ಬಗ್ಗೆ ಆಸಕ್ತಿ ಇದ್ದರೆ ನಿನ್ನನ್ನು ಭೇಟಿ ಆಗಬೇಕೆಂದಿರುವಾಗ, ನೀವಿಬ್ಬರೂ ಒಂದು ಸಿನಿಮಾಗೊ, ಹೋಟೆಲ್‌ಗೆ ಹೋಗಬೇಕೆಂದಿರುವಾಗ ಆಕೆ ಸ್ಪೆಷಲ್ ಆಗಿ ನಿನಗೆಂದೇ ಚಂದವಾಗಿ ಡ್ರೆಸ್ ಮಾಡಿಕೊಂಡಿರುತ್ತಾಳೆ" ಎಂದೆ.

"ಇವತ್ತು ಎಲ್ಲಾ ಹುಡುಗಿಯರು ಪ್ರತಿದಿನ ಫ್ಯಾನ್ಸಿಯಾಗೇ ಡ್ರೆಸ್ ಮಾಡುತ್ತಾರೆ ಗೊತ್ತಾ? ಅದರಲ್ಲಿ ಸ್ಪೆಷಲ್ ಅಂತ ಗೊತ್ತಾಗೋದು ಹೇಗೆ?"

"ಡ್ರೆಸ್‌ನಿಂದ ಗೊತ್ತಾಗದಿದ್ದರೂ ಆಕೆಯ ವರ್ತನೆಯಿಂದ ಗೊತ್ತಾಗುತ್ತೆ" ಎಂದ ಕಬೀರ್. ಅದು ಶಾಂತನುಗೆ ಅರ್ಥವಾಗದೆ ಆತ ಹುಬ್ಬೇರಿಸಿದಾಗ "ನಿನ್ನತ್ತ ಆಕೆ ನೋಡುವ ರೀತಿಯಲ್ಲಿ, ಮಾತನಾಡುವ ಶೈಲಿಯಲ್ಲಿ ವ್ಯಕ್ತ ಆಗುತ್ತೆ" ಎಂದು ಕಬೀರ್ ವಿವರಿಸಿದ.

"ನೀನು SMS ಮಾಡಿದರೆ ತಕ್ಷಣ ಉತ್ತರಿಸುತ್ತಾಳೆ, ನಿನ್ನಿಂದ ಮಿಸ್ಡ್ ಕಾಲ್ ಇದ್ದರೆ ಕೂಡಲೇ ಕಾಲ್ ಮಾಡ್ತಾಳೆ. ಹಾಗೆ ನೀನೂ ಆಕೆಗೆ ಮಾಡ್ತಿಯಾ?" ಅಂದೆ ನಾನು.

"ಟೈಮಿದ್ರೆ ಮಾಡ್ತಿನಿ. ಇಲ್ಲಾಂದ್ರೆ ಆಮೇಲೆ ಟೈಮ್ ಸಿಕ್ಕಾಗ ಮಾಡ್ತಿನಿ" ಅಂದ ಅವನು.

"ಇಲ್ಲೇ ಹುಡುಗರಿಗೂ, ಹುಡುಗಿಯರಿಗೂ ಇರೋ ವ್ಯತ್ಯಾಸ" ಎಂದ ಕಬೀರ್. "ಒಂದು example ಕೊಡ್ತೀನಿ ಕೇಳು. ನೀನು ಮತ್ತು ನಿನ್ನ ಹುಡುಗಿ ಥಿಯೇಟರ್‌ಗೆ ಹೋಗಿರ್‍ತಿರಾ, ಒಂದು ಸಿನಿಮಾ ನೋಡ್ತಿರಾ, ಐಸ್‌ಕ್ರೀಮ್ ತಿನ್ನುತ್ತೀರಾ, ಪರಸ್ಪರರ ಕಂಪನಿಯನ್ನು ಎಂಜಾಯ್ ಮಾಡ್ತಿರಾ, ಆಮೇಲೆ ನಿಮ್ಮ ನಿಮ್ಮ ಮನೆಗೆ ಹಿಂದಿರುಗುತ್ತೀರಾ. ಆದರೆ ಆಮೇಲೆ ಏನಾಗುತ್ತೆ ಗೊತ್ತಾ?" ಎಂದು ಕಬೀರ್ ಕೇಳಿದ.

"ಏನಾಗುತ್ತೇ?"

"ಆಮೇಲೆ ಏನಾಗುತ್ತೆ ಅನ್ನೋದಕ್ಕೆ ಮೊದಲು ಅದಕ್ಕೂ ಮುಂಚೆ ಏನಾಗಿರುತ್ತೆ ಅಂತ ನಾನು ಹೇಳ್ತೀನಿ ಇರು. ನೀನು ಅವಳನ್ನು ಸಿನಿಮಾಗೆ ಕರೆದದ್ದನ್ನು ಅವಳು ಆಗಲೇ ತನ್ನ ಕ್ಲೋಸ್ ಫ್ರೆಂಡ್ಸ್‌ಗೆ ಹೇಳಿರುತ್ತಾಳೆ. ನಿನ್ನ ಬಗ್ಗೆ ಅವಳಿಗೆ ಆಸಕ್ತಿ ಇದೆ ಅಂತ ಅವರಿಗೆಲ್ಲಾ ಗೊತ್ತಿರೋದ್ರಿಂದ ಅವಳಿಗೆ ಅವರೆಲ್ಲಾ ಯಾವ ಡ್ರೆಸ್ ಹಾಕಿಕೊಳ್ಳಬೇಕು ಎಂಬುದರಿಂದ ಹಿಡಿದು ಹಲವಾರು ಸಲಹೆಗಳನ್ನು ನೀಡಿರುತ್ತಾರೆ. ಆದರೆ ನೀನೇನು ಮಾಡಿರ್ತೀಯಾ ಗೊತ್ತಾ? ನಿನಗೆ ಆಸಕ್ತಿ ಇರುವ ಹುಡುಗಿಯೊಬ್ಬಳೊಂದಿಗೆ ಭೇಟಿ ಆಗುತ್ತಿರುವುದನ್ನು ನನಗಿರಲಿ, ನಿನ್ನ ಕ್ಲೋಸ್ ಫ್ರೆಂಡ್‌ಗೂ ಹೇಳಿರಲ್ಲ, ಅದೆಂತಹದೋ ಬಟ್ಟೆಯನ್ನು ತಗುಲಿ ಹಾಕಿಕೊಂಡು 'ಇಲ್ಲೇ ಹೋಗಿಬರ್ತೇನೆ' ಅಂತ ಹೋಗಿರುತ್ತಿ" ಎಂದು ನಾನು ತಮಾಷೆ ಮಾಡಿದೆ.

"ಆಮೇಲೇನಾಗುತ್ತೆ ಅಂದ್ರೆ ಆಕೆಯ ಫ್ರೆಂಡ್ಸ್ ಎಲ್ಲಾ ಕಾಯುತ್ತಿರುತ್ತಾರೆ ಏನೇನಾಯಿತು ಅಂತ ತಿಳಿದುಕೊಳ್ಳೋದಕ್ಕೆ. ನಿನ್ನ ಹುಡುಗಿ ಮನೆಗೆ ಹಿಂದಿರುಗುತ್ತಿದ್ದಂತೆ ಅವರೆಲ್ಲರಿಗೆ ಫೋನ್ ಮಾಡಿ "ಶಾಂತನು ಹಾಗಂದ, ನಾನು ಹೀಗಂದೆ, ಆಮೇಲೆ ನಾವಿಬ್ಬರೂ ಹೋಟೆಲ್‌ಗೆ ಹೋಗಿದ್ವೀ. ನಾನು ಬಿಲ್ ಕೊಡಲು ಹೋದಾಗ ಅವನ ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದು ನನ್ನನ್ನು ತಡೆದ" ಅಂತೆಲ್ಲಾ ಪ್ರತಿಕ್ಷಣವನ್ನು, ಪ್ರತಿ ಸಂಭಾಷಣೆಯನ್ನು ಅವರೊಂದಿಗೆ ಹಂಚಿಕೊಳ್ಳುತ್ತಾರೆ" ಎಂದ ಕಬೀರ್ ಮುಗುಳ್ನಗುತ್ತಾ.

"ಅಷ್ಟೇ ಅಲ್ಲ, ಅವರೆಲ್ಲಾ ಪ್ರತಿಯೊಂದನ್ನು detailed ಆಗಿ ವಿಮರ್ಶಿಸುತ್ತಾರೆ. ಒಬ್ಬಳು 'ಅಲ್ಲಾ, ಶಾಂತನು ಯಾವ ಹೋಟೆಲ್ ಆದರೂ ಪರವಾಗಿಲ್ಲ ಅಂದಿದ್ದು ಅವನಿಗೆ ಆಸಕ್ತಿ ಇಲ್ಲಾ ಅನ್ನೋದನ್ನು ಸೂಚಿಸುತ್ತಿರಬಹುದೇ' ಅಂತ ಅಂದರೆ, ಇನ್ನೊಬ್ಬಳು 'ಅವನು ಅವಳ ಕೈಯನ್ನು ಗಟ್ಟಿಯಾಗಿ ಹಿಡಿದ ಅನ್ನೋದನ್ನು ಮರೀಬಾರದು' ಅಂತಾಳೆ. ಕೊನೆಗೆ ನಿನ್ನೊಂದಿಗೆ ಕಳೆದ ಸಮಯ ಹುಡುಗಿಗೆ ಸಂತೋಷ ನೀಡಿದ್ದರೆ, ನಿನ್ನ ಬಗ್ಗೆ ಅವಳಲ್ಲಿ ಆಸಕ್ತಿ ಹೆಚ್ಚಾಗಿದ್ದರೆ, ಅವಳಿಗೊಂದಷ್ಟು ಎಚ್ಚರ ಮತ್ತು ಸಲಹೆಗಳೊಂದಿಗೆ ಪ್ರೋತ್ಸಾಹವನ್ನು ನೀಡುತ್ತಾರೆ. ನಾಳೆ ಶಾಂತನು ಫೋನ್ ಮಾಡಿ ಮತ್ತೆ ನಿನ್ನನ್ನು ಭೇಟಿ ಆಗಬೇಕು ಅಂದರೆ ತುಂಬಾ ಆತುರ ತೋರಿಸಬೇಡ. ಯಾಕೆಂದರೆ ಆತುರ ತೋರಿಸಿದರೆ ನಿನಗೆ ಬೇರೆ ಯಾವ ಸ್ನೇಹಿತರೇ ಇಲ್ಲ ಅಂಥ ಅವನು ಅರ್ಥ ಮಾಡಿಕೊಳ್ಳಬಹುದು. ಅದಕ್ಕೆ ಸ್ವಲ್ಪ ಬಿಗುಮಾನದಿಂದಿರು ಎಂಬುದರಿಂದ ಹಿಡಿದು ಎಲ್ಲವನ್ನು ಸಾಮೂಹಿಕವಾಗಿ ನಿರ್ಧರಿಸುತ್ತಾರೆ" ಎಂದೆ.

"ಆ ನಿರ್ಧಾರ ಒಂದು ಯುದ್ಧ ತಂತ್ರವಿದ್ದಂತೆ" ಎಂದು ಕಬೀರ್ ಹೇಳಿದಾಗ ಶಾಂತನು ತನ್ನ ಇಸ್ಪೀಟು ಎಲೆಗಳನ್ನು ಪಕ್ಕಕ್ಕಿಟ್ಟು ತನ್ನ ತಲೆ ಮೇಲೆ ಕೈಗಳನ್ನಿಟ್ಟುಕೊಂಡು ನಿಟ್ಟುಸಿರು ಬಿಟ್ಟ.

"ಇದೆಲ್ಲ ನಿನಗೆ ಅರ್ಥವಾಗುವುದಿಲ್ಲ, ಏಕೆಂದರೆ ಹುಡುಗರು..." ಎಂದು ನಾನು ವಿವರಿಸಲು ಯತ್ನಿಸಿದಾಗ ಮಧ್ಯಪ್ರವೇಶಿಸಿದ ಕಬೀರ್ "ಅದರ ಬಗ್ಗೆ ನಾನು ಹೇಳ್ತೇನೆ" ಎಂದ.

"ಶಾಂತನು ಹೇಗೆ ತನಗೆ ಆಸಕ್ತಿ ಇರುವ ಹುಡುಗಿಯನ್ನು ಭೇಟಿ ಆಗುತ್ತಿರುವ ಬಗ್ಗೆ ತನ್ನ ಎಲ್ಲಾ ಆಪ್ತ ಸ್ನೇಹಿತರಿಗೆ ಹೇಳುವುದಿಲ್ಲವೋ ಹಾಗೆ ಬಹಳಷ್ಟು ಹುಡುಗರೂ ಹೇಳಿಕೊಂಡಿರುವುದಿಲ್ಲ. ಅಕಸ್ಮಾತ್ ಆತನ ಒಂದೆರಡು ಸ್ನೇಹಿತರಿಗೆ ಗೊತ್ತಾಗಿದ್ದರೂ ಅವರು ಅದನ್ನು ಚರ್ಚಿಸಲು ಮುಂದಾಗುವುದಿಲ್ಲ, ಹೆಚ್ಚೆಂದರೆ 'ಹೇಗಿತ್ತು?' ಎಂದು ಕೇಳಬಹುದು. ಅದಕ್ಕೆ ಹುಡುಗ 'ಚೆನ್ನಾಗಿತ್ತು' ಎಂದು ಉತ್ತರಿಸಬಹುದು ಅಷ್ಟೇ. ಯಾವುದೇ ಕಾರಣಕ್ಕೂ ಹುಡುಗಿಯರಂತೆ ಹುಡುಗರು ಪ್ರತಿಕ್ಷಣ, ಪ್ರತಿ ಸಂಭಾಷಣೆ, ಪ್ರತಿ ಸಂದರ್ಭವನ್ನು ಚರ್ಚಿಸಿ, ವಿಮರ್ಶಿಸುವುದಿಲ್ಲ" ಎಂದ ಕಬೀರ್.

"ಹುಡುಗಿಯರು ಯಾಕೆ ಹಾಗೆ, ಹುಡುಗರು ಯಾಕೆ ಹೀಗೆ?" ಎಂದು ಬ್ರಹ್ಮಾಂಡದ ಬಗ್ಗೆ ಪ್ರಶ್ನೆ ಕೇಳುತ್ತಿರುವವನಂತೆ ಶಾಂತನು ಕೇಳಿದ.

"ಯಾಕೆ ಹಾಗೆ ಅಂದ್ರೆ ಹುಡುಗಿಯರಿಗೆ ಎಲ್ಲವನ್ನು ಹಂಚಿಕೊಳ್ಳುವ ಆಪ್ತತೆ ಮುಖ್ಯ, ಮಾತಿನ ಮೂಲಕ ಅರ್ಥ ಮಾಡಿಕೊಳ್ಳುವುದು ಆಕೆಗೆ ಬೇಕು. ಆದರೆ ಹುಡುಗರು ಹಾಗಲ್ಲ, ಅವರು ನಿಶಬ್ಧದಲ್ಲಿ ಆಪ್ತತೆ, ಮೌನದಲ್ಲಿ ಅರ್ಥ ಹುಡುಕುವವರು.

"ಅದೆಲ್ಲ ನನಗೆ ಅರ್ಥ ಆಗಲ್ಲ. ಆದರೆ ನಾನು ಒಂದೆರಡು ದಿನ ಫೋನ್ ಮಾಡ್ಲಿಲ್ಲ ಅಂದ್ರೆ ಒಂಥರಾ ಕೋಪ ಮಾಡ್ಕೊತ್ತಾಳೆ, ಯಾಕೆ?"

"ಎ ಪೆದ್ದು ಮಾರನೆ ಮಾತ್ರವಲ್ಲ ಪ್ರತಿ ದಿನ ನೀನು ಫೋನ್ ಮಾಡಬೇಕು ಅಂತ ಆಸೆ ಅವಳಿಗೆ. ಅದಕ್ಕೆ ನೀನು ಫೋನ್ ಮಾಡ್ತೀಯಾ ಅಂತ ಕಾಯುತ್ತಿರುತ್ತಾಳೆ. ನೀನು ಮಾಡ್ಲಿಲ್ಲ ಅಂದ್ರೆ ಅವಳಿಗೆ ಕೋಪ ಬಾರದೆ ಇರುತ್ತಾ?" ಅಂದೆ.

"ಅಯ್ಯೋ ಹಿಂದಿನ ದಿನಾನೇ ಅಷ್ಟೊಂದು ಟೈಮ್ ಕಳೆದಿದ್ದೇವೆ, ಅಷ್ಟೊಂದು ಮಾತಾಡಿದ್ದೇವೆ. ಮಾತಾಡೋದಕ್ಕೆ ಏನೂ ಇಲ್ಲಾ ಅಂದ್ರೆ ಯಾಕೆ ಫೋನ್ ಮಾಡಬೇಕು?" ಶಾಂತನು ಪ್ರಶ್ನೆ.

"ನಿನಗೆ ಹೇಳಕ್ಕೆ ಏನೂ ಇಲ್ಲಾ ಅಂದ್ರೂ ಅವಳಿಗೆ ಏನನ್ನೋ ಹೇಳಬೇಕು ಅನ್ನಿಸಿರುತ್ತೆ" ಎಂದೆ.

"ಹಾಗಾದರೆ ಅವಳೇ ಫೋನ್ ಮಾಡ್ಲಿ."

"ಛೆ, ಹುಡುಗಿಯರು ಹಾಗೆ ಫೋನ್ ಮಾಡೋದಕ್ಕೆ ಹಿಂಜರಿಯುತ್ತಾರೆ. ಅವರಿಗೆ ಲಜ್ಜೆ ಬಿಗುಮಾನ ಅಂತೆಲ್ಲಾ ಇರುತ್ತೆ. ಹುಡುಗರಿಗೆ ಅದೆಲ್ಲಾ ಇರಲ್ಲ ನೋಡು ಅದಕ್ಕೆ ಅವರೇ ಫೋನ್ ಮಾಡಲಿ ಅಂತ ಕಾಯುತ್ತಿರುತ್ತಾರೆ."

"ಸಾರಾಂಶದಲ್ಲಿ ಹುಡುಗಿಯರನ್ನು ಅರ್ಥ ಮಾಡಿಕೊಳ್ಳುವುದೂ ಒಂದೇ, ಡಾಕ್ಟರೇಟ್ ಪಡೆಯುವುದೂ ಒಂದೇ" ಎಂದ ಶಾಂತನು ಆಗಲೇ ಸೋತಿರುವಂತೆ.

"ಆದರೆ ಏನು ಗೊತ್ತಾ ಶಾಂತನು? ಹುಡುಗಿಯರ ವಿಷಯದಲ್ಲಿ ಡಾಕ್ಟರೇಟ್ ಪಡೆಯುವುದಕ್ಕಿಂತ ಅದಕ್ಕೆ ಪ್ರಯತ್ನಿಸುವುದರಲ್ಲೇ ಹೆಚ್ಚು ಮಜಾ ಇದೆ" ಎಂದ ಕಬೀರ್.

■ ಶಾರದೆ

Quote - Unquote

ಬೇರೆ ಎಲ್ಲಾ ರಾಜ್ಯಗಳಿಗಿಂತಲೂ ಉತ್ತರಪ್ರದೇಶ ಹೆಚ್ಚು ಹಾರುವ ಯಂತ್ರಗಳನ್ನು ಹೊಂದಿದೆ. ಪ್ರಸ್ತುತ ಸರಕಾರದ ಒಡೆತನದಲ್ಲಿ ಐದು ವಿಮಾನಗಳು ಹಾಗೂ ಮೂರು ಹೆಲಿಕಾಪ್ಟರ್‌ಗಳಿವೆ. ಆದರೆ ಮುಖ್ಯಮಂತ್ರಿ ಮಾಯಾವತಿಯವರಿಗೆ ಬೀಚ್‌ಕ್ರಾಫ್ಟ್ ಪ್ರೀಮಿಯರ್ ಐ.ಎ.ಗಿಂತಲೂ ದೊಡ್ಡದಾದ ವಿಮಾನ ಬೇಕಂತೆ.

-ತೆಹೆಲ್ಕಾ ವರದಿ

"ತನ್ನ ಬೀಳ್ಕೊಡುಗೆ ಭಾಷಣದಲ್ಲಿ ಮುಷರಫ್ ಇನ್ನು ಮುಂದೆಯೂ ತಮ್ಮ ಸೇವೆ ಮತ್ತು ಸಲಹೆಗಳನ್ನು ಸರಕಾರಕ್ಕೆ ನೀಡಲು ಸಿದ್ಧ ಎಂದಿರುವುದು ಒಂದು ದೊಡ್ಡ ಜೋಕ್."

-ನವಾಜ್ ಷರೀಫ್, ಪಾಕಿಸ್ತಾನದ ಮಾಜಿ ಪ್ರಧಾನಿ



"ದೀಪ್ತಿ ನಾವಲ್‌ರವರ ಚಿತ್ರದಲ್ಲಿ ನನ್ನ ಪಾತ್ರ ಸಾಮಾನ್ಯ ಹುಡುಗಿಯದ್ದು. ಆ ಪಾತ್ರಕ್ಕಾಗಿ ನಾನು ಹಲವೊಮ್ಮೆ ಕುರೂಪಿಯಾಗಿಯೂ ಕಾಣಿಸಬೇಕು. ಅದು ಅಷ್ಟು ಸುಲಭವಲ್ಲ"

-ಹಿಂದಿ ಚಿತ್ರನಟಿ ಮೊನಿಷಾ ಕೊಯಿರಾಲಾ

ನಿವೃತ್ತ ಐಪಿಎಸ್ ಅಧಿಕಾರಿ ಕಿರಣ್‌ಬೇಡಿ ಈಗ ಸ್ಟಾರ್‌ಪ್ಲಸ್ ಟಿ.ವಿ.ಚಾನೆಲ್‌ಗಾಗಿ 'ಆಪ್ ಕೀ ಕಚೇರಿ' ಎಂಬ ಕಾರ್ಯಕ್ರಮವನ್ನು ನಿರ್ವಹಿಸಲಿದ್ದಾರೆ. ಅದರಲ್ಲಿ ಅವರು ನಿಜ ಜೀವನದ ಸಮಸ್ಯೆಗಳನ್ನು ಬಗೆಹರಿಸುತ್ತಾರೆ.

-ಪತ್ರಿಕಾ ವರದಿ



"ತಮಿಳುನಾಡಿನ ರೋಗ ಈಗ ಆಂಧ್ರಕ್ಕೂ ಹರಡಿರುವಂತಿದೆ."

- ನಟ ಚಿರಂಜೀವಿ ರಾಜಕೀಯಕ್ಕೆ ಪ್ರವೇಶಿಸುತ್ತಿರುವುದನ್ನು ಕುರಿತು ಮಾಜಿ ನಟಿ ಕಂ ಮಾಜಿ ಮುಖ್ಯಮಂತ್ರಿ ಜಯಲಲಿತಾ

"ಬೇರೆ ಯಾವುದೇ ಸಂಸ್ಥೆಗಿಂತ ಪಾಕಿಸ್ತಾನದ ಗೂಢಚರ್ಯ ಸಂಸ್ಥೆಯಾದ ಐಎಸ್‌ಐ ಅತಿ ಹೆಚ್ಚು ಭಯೋತ್ಪಾದಕರನ್ನು ಸೆರೆ ಹಿಡಿದಿದೆ ಅಥವಾ ಕೊಂದಿದೆ."

-ರಿಚರ್ಡ್ ಬೌಶರ್, ಅಮೆರಿಕದ ಅಧಿಕಾರಿ

ಕಾಶ್ಮೀರಿಯರಿಗೆ ಕೊಡಬೇಕು ಸ್ವಾತಂತ್ರ್ಯ



ಕಂಡಹಾಗೆ

■ಗೌರಿ ಲಂಕೇಶ್

ಕಾಶ್ಮೀರ ಹೊತ್ತಿ ಉರಿಯುತ್ತಿದೆ. ಒಂದೆಡೆ ಕಾಶ್ಮೀರದ ಸಾಮಾನ್ಯ ಮುಸಲ್ಮಾನರು ಅಹಿಂಸಾತ್ಮಕ ಹೋರಾಟ ನಡೆಸುತ್ತಿದ್ದರೆ, ಇನ್ನೊಂದೆಡೆ ಜಮ್ಮುವಿನ ಹಿಂದೂಗಳು ತ್ರಿಶೂಲ, ಖಡ್ಗ, ಚೂರಿ ಇತ್ಯಾದಿ ಹಿಡಿದು ಪ್ರತಿಭಟಿಸುತ್ತಿದ್ದಾರೆ. ಕಾಶ್ಮೀರದ ಸಮಸ್ಯೆ ಏನು, ಅಲ್ಲಿನ ಪ್ರಸ್ತುತ ಪರಿಸ್ಥಿತಿ ಎಂತಹದ್ದು ಎಂಬುದನ್ನು ಖ್ಯಾತ ಲೇಖಕಿ ಅರುಂಧತಿ ರಾಯ್ 'ಔಟ್‌ಲುಕ್' ಪತ್ರಿಕೆಗೆ ಬರೆದಿರುವ ಲೇಖನದಲ್ಲಿ ಸೆರೆ ಹಿಡಿದಿದ್ದಾರೆ. ಈ ಲೇಖನದ ಸಂಪೂರ್ಣ ಅನುವಾದವನ್ನು ಪ್ರಕಟಿಸಲು ಈ ಸಂಚಿಕೆಯಲ್ಲಿ ಸ್ಥಳಾಭಾವ ಇರುವುದರಿಂದ ಅದರ ಹಲವು ಆಯ್ದ ಭಾಗಗಳನ್ನು ಈ ಅಂಕಣದಲ್ಲೇ ನೀಡುತ್ತಿದ್ದೇನೆ....

'ಕಾಶ್ಮೀರಿಗಳಿಗೆ ಬೇಕಿರುವುದು ಒಂದೇ. ಆಜಾದಿ. ಇದನ್ನು ನಿರಾಕರಿಸುವುದು ವಂಚನೆಯಾಗುತ್ತದೆ.'

ಇದು ಅರುಂಧತಿ ರಾಯ್‌ರವರ ಲೇಖನದ ಶೀರ್ಷಿಕೆ.

ಕಳೆದ ಅರವತ್ತು ದಿನಗಳಿಂದ ಕಾಶ್ಮೀರದ ಜನ ಸ್ವತಂತ್ರರಾಗಿದ್ದಾರೆ. ಜಗತ್ತಿನಲ್ಲೇ ಅತಿಹೆಚ್ಚು ಸೈನ್ಯೀಕರಿಸಲ್ಪಟ್ಟಿರುವ ಪ್ರದೇಶದಲ್ಲಿ, ಐದು ಲಕ್ಷ ಸೈನಿಕರ ಬಂದೂಕುಗಳ ಭೀತಿಯಡಿ ತಮ್ಮ ಬದುಕನ್ನು ಸಾಗಿಸಿರುವ ಜನ ತಮ್ಮ ಭಯವನ್ನು ಕೊಡವಿಕೊಂಡು ಎದ್ದು ನಿಂತಿದ್ದಾರೆ.

ಹದಿನೆಂಟು ವರ್ಷಗಳ ಕಾಲ ತನ್ನ ಸೈನ್ಯದ ಮೂಲಕ ಈ ಪ್ರದೇಶವನ್ನು ಆಕ್ರಮಿಸಿಕೊಂಡು ಆಡಳಿತ ನಡೆಸುತ್ತಿದ್ದ ಭಾರತ ಸರ್ಕಾರ ಎಂದೂ ನಿರೀಕ್ಷಿಸದಿದ್ದ ಘೋರ ಸ್ವಪ್ನವೊಂದು ಇವತ್ತು ವಾಸ್ತವವಾಗಿದೆ. ಸಶಸ್ತ್ರ ಹೋರಾಟವನ್ನು ಬಗ್ಗು ಬಡಿದಿದ್ದೇವೆ ಎಂದಿದ್ದ ಸರ್ಕಾರ ಇವತ್ತು ತಾನು ಸುಲಭವಾಗಿ ನಿರ್ವಹಿಸಲಾಗದಂತಹ ಅಹಿಂಸಾತ್ಮಕ ಜನರ ಪ್ರತಿಭಟನೆಯನ್ನು ಎದುರಿಸುತ್ತಿದೆ. ಈ ಹೋರಾಟವನ್ನು ಪೋಷಿಸುತ್ತಿರುವುದು ಹಲವಾರು ವರ್ಷಗಳಿಂದ ದೌರ್ಜನ್ಯವನ್ನು ಸಹಿಸಿರುವ ಜನರ ನೆನಪುಗಳು; ಆ ಅವಧಿಯಲ್ಲಿ ಸತ್ತ ಲಕ್ಷಾಂತರ ಜನರ, ನಾಪತ್ತೆಯಾದ ಸಾವಿರಾರು ಜನರ, ಚಿತ್ರಹಿಂಸೆ, ಬಲಾತ್ಕಾರ, ಅವಮಾನಕ್ಕೆ ತುತ್ತಾದವರ ನೆನಪುಗಳು. ಇವೆಲ್ಲವುಗಳು ಈಗ ಆಕ್ರೋಶಭರಿತ ರೀತಿಯಲ್ಲಿ ವ್ಯಕ್ತವಾಗುತ್ತಿದೆಯಲ್ಲದೆ, ಇದನ್ನು ಸುಲಭವಾಗಿ ಪಳಗಿಸಿ ವಾಪಸ್ಸು ಕಳುಹಿಸುವಂತ ಸದ್ದಾಗಿ ಉಳಿದಿಲ್ಲ.



ಹಲವಾರು ವರ್ಷಗಳಿಂದ ಭಾರತದ ಪ್ರಭುತ್ವವು- ಅದನ್ನು ಗಹನವಾದ ಪ್ರಭುತ್ವ ಎಂದು ಬಲ್ಲವರು ಕರೆಯುವುದುಂಟು- ಕಾಶ್ಮೀರಿ ಜನರ ದನಿಯನ್ನು ಅಡಗಿಸಲು ಧ್ವಂಸ, ದಮನ, ಮಿಥ್ಯೆ ವರ್ಣನೆ, ಅಪಕೀರ್ತಿ, ಲಂಚ, ಬೆದರಿಕೆ ತರಹದ ಹಲವಾರು ತಂತ್ರಗಳನ್ನು ಪ್ರಯೋಗಿಸಿದೆ. ಬಹಳಷ್ಟು ಹಣವನ್ನು, ಬಹಳಷ್ಟು ಹಿಂಸೆಯನ್ನು, ತಪ್ಪು ಮಾಹಿತಿಯನ್ನು, ಪ್ರಚಾರವನ್ನು, ಭಯೋತ್ಪಾದನೆಯನ್ನು, ಬಾತ್ಮೀದಾರರ ಮತ್ತು ಜತೆಗೆಮ್ಮೆಗಾರರ ಜಾಲವನ್ನು, ಬಂಧನವನ್ನು, ಬ್ಲಾಕ್‌ಮೇಲ್ ಅನ್ನು, ಮೋಸದ ಚುನಾವಣೆಗಳನ್ನು ಉಪಯೋಗಿಸಿಕೊಂಡು ಪ್ರಜಾಪ್ರಭುತ್ವವಾದಿಗಳು ಯಾವುದನ್ನು 'ಜನರ ಇಚ್ಛೆ' ಎಂದು ಕರೆಯುತ್ತಾರೋ ಅದನ್ನು ದಮನಿಸಲು ಭಾರತದ ಪ್ರಭುತ್ವ ಯತ್ನಿಸಿದೆ.

ಅಂತಹ ವ್ಯವಸ್ಥೆಯಡಿ ಸಾಮಾನ್ಯವಾಗಿ ಆಗುವುದೇ ಈಗ ಆಗಿದೆ. ಬಂದೂಕಿನ ಕೋವಿಯಿಂದ ಬಲವಂತವಾಗಿ ಸ್ಥಾಪಿಸಿದ್ದ 'ಯಥಾಸ್ಥಿತಿ'ಯೇ ನಿಜವಾದ ಯಥಾಸ್ಥಿತಿ, ಜನರ ತೂಷ್ಣೀಂತೆಯ ಮೌನವೇ ಅವರ ಸಮ್ಮತಿ ಎಂದು ಭಾವಿಸಿದ್ದು ತಪ್ಪಾಗಿದೆ.

ಆದರೆ ಪ್ರಶ್ನೆಗಳನ್ನು ಕೇಳುವ ಕಾಳಜಿ ಇದ್ದವರಿಗೆ, ಅದಕ್ಕಿಂತಲೂ ಮುಖ್ಯವಾಗಿ, ಕೇಳಿಸಿಕೊಳ್ಳುವ ತಾಳ್ಮೆ ಇದ್ದವರಿಗೆ ಒಂದಂತೂ ಸ್ಪಷ್ಟವಾಗಿತ್ತು, ಅದೇನೆಂದರೆ ಕಾಶ್ಮೀರದ ಜನ ತಮ್ಮ ಕಗ್ಗತ್ತಲಿನ ಕ್ಷಣಗಳಲ್ಲೂ ತಾವು ಬಯಸುತ್ತಿದ್ದ ಶಾಂತಿ ಮತ್ತು ಅದರೊಂದಿಗೆ ಸ್ವಾತಂತ್ರ್ಯದ ಬೆಂಕಿಯ ಕಿಡಿ ಆರದಂತೆ ಕಾಪಾಡಿಕೊಂಡಿದ್ದರು.

ವಿಧಿಯಲ್ಲಿ ಒಂದು ಅನಿರೀಕ್ಷಿತ ತಿರುವು ಮತ್ತು ವಿವೇಚನೆಯನ್ನು ಉಪಯೋಗಿಸದೆ ನೂರು ಎಕರೆಗಳನ್ನು ಅಮರನಾಥ್ ಬೋರ್ಡ್‌ಗೆ ಕೊಟ್ಟಿದ್ದು, ಇವೆರಡೂ ಜೊತೆಗೂಡಿ ಪೆಟ್ರೋಲ್ ತುಂಬಿದ್ದ ಬ್ಯಾರಲ್‌ಗೆ ಬೆಂಕಿಯ ಕಿಡಿಯನ್ನು ಬಿಸಾಡಿದಂತಾಯಿತು. ತಪ್ಪೋ, ಒಪ್ಪೋ, ಈ ಒಡಿವಾದವು ಇಸ್ರೇಲ್ ರೀತಿಯ ಕಾಲೋನಿಗಳನ್ನು ನಿರ್ಮಿಸುವ, ನಿಧಾನವಾಗಿ ಕಾಶ್ಮೀರಿ ಕಣಿವೆಯ ಜನಸಂಖ್ಯೆಯನ್ನೇ ಬದಲಾಯಿಸುವ ಷಡ್ಯಂತ್ರದ ಮುನ್ಸೂಚನೆಯಂತೆ ಕಾಶ್ಮೀರಿಗಳಿಗೆ ಭಾಸವಾಯಿತು. ಕಣಿವೆಯಲ್ಲಿ ಆರಂಭವಾದ ಪ್ರತಿಭಟನೆಗಳು ನಗರದಿಂದ ಹಳ್ಳಿಹಳ್ಳಿಗೂ ಹರಡಿತು. ಅದೆಷ್ಟೋ ಯುವಕರು ಪೊಲೀಸರ ಗುಂಡೇಟಿಗೆ ಬಲಿಯಾದರು. ವಾರಗಳ ಕಾಲ ಪ್ರತಿಭಟನೆ, ಹರತಾಳ ಮತ್ತು ಗೋಲಿಬಾರ್‌ಗಳ ನಡುವೆಯೂ ಐದು ಲಕ್ಷ ಅಮರನಾಥ್ ಯಾತ್ರಾರ್ಥಿಗಳು ಯಾವ ಕಷ್ಟವನ್ನೂ ಅನುಭವಿಸದೆ, ಬದಲಾಗಿ ಸ್ಥಳೀಯರ ಆತಿಥ್ಯ ಸ್ವೀಕರಿಸಿ ತಮ್ಮ ಯಾತ್ರೆಯನ್ನು ಸಂಪೂರ್ಣಗೊಳಿಸಿದರು.

ಜನರ ಪ್ರತಿಕ್ರಿಯೆಯ ತೀವ್ರತೆಯಿಂದ ಅಚ್ಚರಿಗೊಂಡ ಸರ್ಕಾರ ಆ ಭೂಮಿಯನ್ನು ಹಿಂದೆ ಪಡೆಯಿತಾದರೂ ಜಮ್ಮುವಿನ ಜನ ಪ್ರತಿಭಟಿಸಲಾರಂಭಿಸಿದರು. ಹಿಂದೂಗಳು ಭಾರತದ ಸರ್ಕಾರದಿಂದ ತಮಗೆ ಅನ್ಯಾಯವಾಗಿದೆ, ಪಕ್ಷಪಾತ ಮಾಡಲಾಗಿದೆ ಎಂದು ದೂರಲಾರಂಭಿಸಿದರು. ಅದಕ್ಕೆಲ್ಲ ಕಾಶ್ಮೀರಿಗಳೇ ಕಾರಣ ಎಂದು ಅವರು ದೂರಿದ್ದು ವಿಚಿತ್ರವಾಗಿತ್ತು, ಕಾಶ್ಮೀರ ಮತ್ತು ಭಾರತದ ನಡುವೆ ಇರುವ ಒಂದೇ ಒಂದು ಲಿಂಕ್ ರಸ್ತೆಯಾದ ಜಮ್ಮು-ಶ್ರೀನಗರ ಹೆದ್ದಾರಿಯನ್ನು ಬಂದ್ ಮಾಡಿದರು.

ಸರ್ಕಾರವು ಹೆದ್ದಾರಿಯನ್ನು ತೆರವುಗೊಳಿಸಿರುವುದಾಗಿ ಹೇಳಿತಾದರೂ ಕಾಲ ಮಿಂಚಿತ್ತು, ಕಾಶ್ಮೀರಿಗಳಿಗೆ ಅರ್ಥವಾಗಿತ್ತು. ಹೇಳಿದಂತೆ ಅವರು ಮಾಡದಿದ್ದರೆ ಅವರ ವಿರುದ್ಧ ಮುತ್ತಿಗೆ ಹಾಕಿ, ಅಗತ್ಯವಸ್ತುಗಳು ಸಿಗದಂತೆ, ಔಷಧಿಗಳು ಲಭ್ಯವಾಗದಂತೆ, ಹಸಿವಿನಿಂದ ಸಾಯುವಂತೆ ಮಾಡಲಾಗುತ್ತದೆ ಎಂಬ ಸಂದೇಶ ಅವರಿಗೆ ರವಾನೆಯಾಗಿತ್ತು. ನಿಜವಾದ ದಿಗ್ಬಂಧನ ಮಾನಸಿಕ ದಿಗ್ಬಂಧನವಾಗಿ ಪರಿವರ್ತನೆಗೊಂಡಿತ್ತು.

ಯಾವ ಕಾಶ್ಮೀರಿಗಳ ದನಿಯನ್ನು ಅದುಮಿಡಲು ಭಾರತದ ಸರ್ಕಾರ ಪ್ರಯತ್ನಿಸಿತ್ತೋ, ಅದೇ ದನಿ ಕಿವಿಗಡಚ್ಚುವ ಆರ್ಭಟವಾಗಿದ್ದು ಅಚ್ಚರಿ ಏನಲ್ಲ. ಲಕ್ಷಾಂತರ ನಿರಾಯುಧ ಜನ ಹೊರಬಂದು ತಮ್ಮ ನಗರ, ತಮ್ಮ ರಸ್ತೆ ತಮ್ಮ ಮೊಹಲ್ಲಾಗಳನ್ನು ವಾಪಸ್ಸು ಪಡೆಯಲೆತ್ನಿಸಿದರು. ಅಸಂಖ್ಯಾತ ಸಂಖ್ಯೆಯಲ್ಲಿದ್ದ ಅವರ ಹಸಿ ಧೈರ್ಯದ ಮುಂದೆ ಅಪಾರ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಸೈನ್ಯವನ್ನೇ ಕುಂದಿತು.

ಸೈನ್ಯದ ಕ್ಯಾಂಪ್‌ಗಳು, ಚೆಕ್‌ಪೋಸ್ಟ್‌ಗಳು, ಬಂಕರ್‌ಗಳು ತುಂಬಿರುವ ಮೈದಾನದಲ್ಲಿ ಆಡುತ್ತಾ, ಚಿತ್ರಹಿಂಸೆ ನೀಡುವ ಕೊಠಡಿಗಳಿಂದ ತೇಲಿ ಬಂದ ಕೂಗಿನ ಸೌಂಡ್ ಟ್ರ್ಯಾಕ್ ಕೇಳುತ್ತಾ ಬೆಳೆದ ಯುವ ಜನತೆಗೆ ಸಾಮೂಹಿಕ ಪ್ರತಿಭಟನೆಯ ಶಕ್ತಿ ಗೊತ್ತಾಗಿದೆ. ಅದಕ್ಕಿಂತ ಮುಖ್ಯವಾಗಿ ತಮ್ಮ ಎದೆಯುಬ್ಬಿಸಿ, ತಮ್ಮ ಪರವಾಗಿ, ತಮ್ಮ ಜನರ ಪ್ರತಿನಿಧಿಗಳಾಗಿ ನಿಲ್ಲುವ ಘನತೆ ಅರ್ಥವಾಗಿದೆ. ಅದರ ಪಾಲಿಗೆ ಅದೇ ಸಾಕ್ಷಾತ್ಕಾರ. ಈಗ ಸಾವಿನ ಭಯವೂ ಅವರನ್ನು ಹಿಡಿದಿಡುತ್ತಿಲ್ಲ. ಆ ಭಯವೇ ಮಾಯವಾದ ನಂತರ ಜಗತ್ತಿನ ಎರಡನೇ ದೊಡ್ಡ ಸೈನ್ಯವನ್ನು ಇಟ್ಟುಕೊಂಡೂ ಏನು ಪ್ರಯೋಜನ? ಅದೆಂತಹ ಭೀತಿ ಹುಟ್ಟಿಸಬಲ್ಲದು? ಹೊಸ ಮಾರ್ಗದಿಂದ ತಮ್ಮ ಸ್ವಾತಂತ್ರ್ಯವನ್ನು ಗೆದ್ದ ಭಾರತಕ್ಕೆ ಮಿಕ್ಕೆಲ್ಲರಿಗಿಂತಲೂ ಈ ಪ್ರಶ್ನೆಗೆ ಉತ್ತರ ಗೊತ್ತಿರಬೇಕಲ್ಲಾ?

ಇವತ್ತು ಕಾಶ್ಮೀರಿ ಜನರನ್ನು ಪ್ರತಿನಿಧಿಸುತ್ತಿರುವವರು ಮುಖ್ಯವಾಹಿನಿಯಲ್ಲಿರುವ ರಾಜಕೀಯ ಪಕ್ಷಗಳಲ್ಲ, ಹುರಿಯತ್ ಅಲ್ಲ, ಮುಸ್ಲಿಮ್ ಕಾನ್ಫರೆನ್ಸ್ ಅಲ್ಲ, ಉಗ್ರಗಾಮಿಗಳಲ್ಲ, ಬದಲಾಗಿ ಜನರೇ ಇವತ್ತು ತಮ್ಮನ್ನು ಪ್ರತಿನಿಧಿಸುತ್ತಿದ್ದಾರೆ. ಇವತ್ತು ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ಭಾರತದ ಪ್ರಭುತ್ವದ ನೆರವು ಪಡೆದು ಕಪಟ ಚುನಾವಣೆಗಳ ಮೂಲಕ ಅಧಿಕಾರಕ್ಕೇರಿದ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಪೀಪಲ್ಸ್ ಡೆಮಾಕ್ರೆಟಿಕ್ ಪಾರ್ಟಿಯ ನಾಯಕರು, ಭಾರತದ ಮಾಧ್ಯಮದ ಕೃಪೆಯಿಂದ ಟಿವಿ ಚಾನೆಲ್‌ಗಳ ಚರ್ಚೆಗಳಲ್ಲಿ ಮಿಂಚುವ ರಾಜಕೀಯ ನಾಯಕರು ಇವತ್ತು ಕಾಶ್ಮೀರದ ರಸ್ತೆಗಳಲ್ಲಿ ಕಾಲಿಡಲೂ ಹೆದರುತ್ತಿದ್ದಾರೆ. ಹಾಗೆಯೇ ಸ್ವಾತಂತ್ರ್ಯಕ್ಕಾಗಿ ಹಲವಾರು ವರ್ಷಗಳಿಂದ ಸಶಸ್ತ್ರ ಹೋರಾಟ ಮಾಡಿಕೊಂಡು ಬಂದಿರುವ ಉಗ್ರಗಾಮಿಗಳು ಕೂಡ ಇವತ್ತು ಹಿಂದೆ ಸರಿದು ಜನರೇ ತಮ್ಮ ಹೋರಾಟವನ್ನು ಮುಂದುವರೆಸಲು ಬಿಟ್ಟಿದ್ದಾರೆ. ಹಾಗೆಯೇ ವಿವಿಧ ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದ ನಾಯಕರೂ ಇವತ್ತು ಜನರ ಹಿಂಬಾಲಕರಾಗಿದ್ದಾರೆ. ಅವರೆಲ್ಲ ಮಾಡಬೇಕಿರುವುದು ಒಂದನ್ನು ಮಾತ್ರ. ಜನರ ಆಶಯಂತೆ ನಡೆದುಕೊಳ್ಳಬೇಕು. ನಮಗೆ ಇದು ಇಷ್ಟವಾಗುತ್ತದೋ, ಇಲ್ಲವೋ, ಇದು ಪ್ರಜಾಪ್ರಭುತ್ವ. ಇದನ್ನು ಯಾವ ಪ್ರಜಾಪ್ರಭುತ್ವವಾದಿಯೂ ನಿರಾಕರಿಸಲಾಗುವುದಿಲ್ಲ.

ಇವತ್ತು ಕಾಶ್ಮೀರದ ಕಣಿವೆಯಲ್ಲಿ ಪ್ರತಿ ದಿನ ಮೊಳಗುತ್ತಿರುವ 'ನಮಗೆ ಬೇಕು ಸ್ವಾತಂತ್ರ್ಯ' ಮತ್ತು 'ಪಾಕಿಸ್ತಾನ ಜಿಂದಾಬಾದ್' ಎಂಬ ಘೋಷಣೆಗಳು ಬಹಳಷ್ಟು ಭಾರತೀಯರಿಗೆ ಹಿತಕರವಾಗಿ ಕೇಳಿಸುವುದಿಲ್ಲ, ಆದರೆ ಇದು ನಿರಾತಂಕವಾಗಿ ಮುಂದೂಡಲ್ಪಟ್ಟ 'ಜನಮತ'ದ ನಿರಾಕರಣೆಯ ಅಭಿವ್ಯಕ್ತಿ.

ಆಗಸ್ಟ್ 15 ರಂದು ಶ್ರೀನಗರದ ಲಾಲ್‌ಚೌಕ್‌ನಲ್ಲಿ ರಾಜ್ಯಪಾಲ ಎನ್.ಎನ್. ವೋಹ್ರಾರವರು ಪೊಲೀಸ್ ಮತ್ತು ಸೈನ್ಯದ ಬಂದೋಬಸ್ತಿನಲ್ಲಿ ಭಾರತದ ರಾಷ್ಟ್ರಧ್ವಜವನ್ನು ಹಾರಿಸಿದರು. ಅದಾದ ಕೆಲ ಗಂಟೆಗಳ ನಂತರ ಲಾಲ್ ಚೌಕ್‌ಗೆ ಮುತ್ತಿಗೆ ಹಾಕಿದ ಸಾವಿರಾರು ಜನ ಭಾರತದ ಧ್ವಜವನ್ನು ಇಳಿಸಿ, ಅಲ್ಲಿ ಪಾಕಿಸ್ತಾನದ ಧ್ವಜವನ್ನು ಹಾರಿಸಿದರು. ಅದೇ ಸಂದರ್ಭದಲ್ಲಿ 'ತಡವಾಗಿ ಸ್ವಾತಂತ್ರ್ಯದ ಶುಭಾಶಯ' ಎಂದು ಪರಸ್ಪರ ಅಭಿನಂದಿಸಿದರು (ಪಾಕಿಸ್ತಾನಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ಆಗಸ್ಟ್ 14 ರಂದು). ಇನ್ನು ಕೆಲವರು 'ಗುಲಾಮಗಿರಿ ದಿನದ ಶುಭಾಶಯ'ಎಂದು ಹಾಸ್ಯವಾಡಿದರು. ಕಾಶ್ಮೀರದ ಚಿತ್ರಹಿಂಸಾ ಕೊಠಡಿಗಳೂ ಹಾಸ್ಯ ಪ್ರಜ್ಞೆಯನ್ನು ನಶಿಸಿಲ್ಲ.

ಜಮ್ಮು-ಶ್ರೀನಗರ ರಸ್ತೆಯನ್ನು ಬಂದ್ ಮಾಡಿದ್ದರಿಂದ ಜನರ ಅಗತ್ಯ ವಸ್ತುಗಳಿಗೆ ಶ್ರೀನಗರ-ಮುಜಾಫರ್ ಬಾದ್ (ಇದು ಪಾಕಿಸ್ತಾನದಲ್ಲಿದೆ) ರಸ್ತೆಯನ್ನು ತೆರವುಗೊಳಿಸಬೇಕೆಂದು ಪ್ರತಿಭಟನೆ ನಡೆದ ಸಂದರ್ಭದಲ್ಲಿ ಹುರಿಯತ್ ನಾಯಕ ಶೇಕ್ ಅಬ್ದುಲ್ ಅಜೀಜ್ ಅವರನ್ನು ಭಾರತದ ಪೊಲೀಸರು ಗುಂಡು ಹಾರಿಸಿ ಕೊಂದರು. ಆಗಸ್ಟ್ 16 ರಂದು ಅಜೀಜ್ ಅವರ ಹಳ್ಳಿಗೆ ಮೂರು ಲಕ್ಷ ಜನ ಭೇಟಿ ನೀಡಿದರು.

ಅದೇ ಸಂಖ್ಯೆಯಲ್ಲಿ ಆಗಸ್ಟ್ 18 ರಂದು ಶ್ರೀನಗರದಲ್ಲಿರುವ ವಿಶ್ವಸಂಸ್ಥೆಯ ಕಚೇರಿ ಮುಂದೆ ಜನ ಹಾಜರಾದರು. ಅಂದು ಅವರು ಸಲ್ಲಿಸಿದ ಮನವಿಯಲ್ಲಿ ಮೂರು ಅಂಶಗಳು ಮಾತ್ರ ಇದ್ದವು. ಅವು: ಭಾರತದ ಆಡಳಿತಕ್ಕೆ ಅಂತ್ಯ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯ ನಿಯೋಜನೆ ಮತ್ತು ಎರಡು ದಶಕಗಳಿಂದ ಭಾರತದ ಸೈನ್ಯ ಮತ್ತು ಪೊಲೀಸರು ನಿರ್ಭಯದಿಂದ ಎಸಗಿರುವ ಯುದ್ಧ ಅಪರಾಧಗಳ ತನಿಖೆ.

ಅವತ್ತು ಎಲ್ಲೆಡೆ ಹಸಿರು ಬಾವುಟಗಳು ಹಾರಾಡುತ್ತಿದ್ದವು. ಪ್ರತಿಯೊಬ್ಬರೂ ಬ್ಯಾನರ್‌ಗಳನ್ನು ಹಿಡಿದಿದ್ದರು. ಎಲ್ಲಾ ಮೈಲಿಗಲ್ಲುಗಳ ಮೇಲೆ ರಾವಲ್ಪಿಂಡಿ ಅಥವಾ ಪಾಕಿಸ್ತಾನ್ ಎಂದು ಬರೆಯಲಾಗಿತ್ತು. 'ಪಾಕಿಸ್ತಾನದೊಂದಿಗೆ ನಮ್ಮ ನಂಟೇನು? ಆರಾಧನೆಗೆ ಅಲ್ಲಾಹು ಅಲ್ಲದೆ ಬೇರೊಬ್ಬನಿಲ್ಲ' ಎಂಬ ಘೋಷಣೆಗಳು ಮೊಳಗಿದವು.

ಆದರೆ ಪಾಕಿಸ್ತಾನದ ಬಗೆಗೆ ಸಾರ್ವಜನಿಕವಾಗಿ ವ್ಯಕ್ತವಾಗುವ ಮಮತೆಯನ್ನು ಕಂಡು ಅವರೆಲ್ಲಾ ಪಾಕಿಸ್ತಾನ ಸೇರಲು ಬಯಸುತ್ತಾರೆ ಎಂಬ ನಿರ್ಧಾರಕ್ಕೆ ಬರುವುದು ಸುಲಭ ತರ್ಕವಾಗುತ್ತದೆ.

ಇದಕ್ಕೆ ಕಾರಣ ಯಾವುದನ್ನು ಭಾರತದ ಸರ್ಕಾರ ಭಯೋತ್ಪಾದನೆ ಎಂದು ಕರೆಯುತ್ತದೋ ಅದನ್ನೇ ಪಾಕಿಸ್ತಾನದ ಸರ್ಕಾರ ಸ್ವಾತಂತ್ರ್ಯ ಸಂಗ್ರಾಮ ಎಂದು ಕರೆಯುತ್ತದೆ. ಆದ್ದರಿಂದ ಪಾಕಿಸ್ತಾನದ ಬಗ್ಗೆ ಕಾಶ್ಮೀರಿಗಳಿಗೆ ಕೃತಜ್ಞತಾ ಭಾವವಿದೆ. ಅದರೊಂದಿಗೆ ಭಾರತಕ್ಕೆ ಮುಜುಗರಪಡಿಸುವ ಕಿತಾಪತಿಯೂ ಸೇರಿದೆ. (ಭಾರತದಂತಹ ಪ್ರಜಾಪ್ರಭುತ್ವ ದೇಶವನ್ನು ತೊರೆದು ಹೆಚ್ಚಿನ ಕಾಲ ಸೈನ್ಯಾಡಳಿತಕ್ಕೆ ಒಳಪಟ್ಟಿರುವ ಪಾಕಿಸ್ತಾನದಂತಹ ದೇಶದೊಂದಿಗೆ ಗುರುತಿಸಿಕೊಳ್ಳುವ ಈ 'ಸ್ವಾತಂತ್ರ್ಯ ಸಂಗ್ರಾಮ' ಎಂತದದ್ದಿರಬಹುದು ಎಂದು ಲೇವಡಿ ಮಾಡುವುದು ಸುಲಭ. ಆದರೆ ಸದ್ಯಕ್ಕೆ ಅದಕ್ಕಿಂತಲೂ ಮುಖ್ಯವಾದ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕಿದೆ. ಅದೇನೆಂದರೆ ಕಾಶ್ಮೀರಿಗಳು ಇಷ್ಟೊಂದು ದ್ವೇಷಿಸುವಂತಹ ಏನನ್ನು ಪ್ರಜಾಪ್ರಭುತ್ವವೆಂಬ ಭಾರತ ಮಾಡಿದೆ ಎಂಬುದು).

ಮುಸಲ್ಮಾನರಲ್ಲದ ನನ್ನಂಥವರಿಗೆ ಅಂದಿನ ರ್‍ಯಾಲಿಯಲ್ಲಿನ ಜನರ ಸ್ವಾತಂತ್ರ್ಯ ಕಲ್ಪನೆ ಅರ್ಥವಾಗಲಿಲ್ಲ. ಆದ್ದರಿಂದ ರ್‍ಯಾಲಿಯಲ್ಲಿದ್ದ ಯುವತಿಯೊಬ್ಬಳನ್ನು "ಕಾಶ್ಮೀರದ ಸ್ವಾತಂತ್ರ್ಯವೆಂದರೆ ಮಹಿಳೆಯಾದ ನಿನಗೆ ಕಡಿಮೆ ಸ್ವಾತಂತ್ರ್ಯ ಎಂದೇ ಅರ್ಥವಲ್ಲವೇ" ಎಂದು ಕೇಳಿದೆ. ಆದಕ್ಕೆ ಆಕೆ "ಈಗ ನಮಗಿರುವ ಸ್ವಾತಂತ್ರ್ಯವಾದರೂ ಎಂತಹದ್ದು? ಭಾರತದ ಸೈನಿಕರಿಂದ ಅತ್ಯಾಚಾರಕ್ಕೊಳಗಾಗುವ ಸ್ವಾತಂತ್ರ್ಯವೇ?" ಎಂದು ಹೇಳಿದಳು. ಆಕೆಯ ಉತ್ತರ ನನ್ನನ್ನು ನಿರುತ್ತರಳಾಗಿಸಿತು.

ಎಲ್ಲಾ ಸ್ವಾತಂತ್ರ್ಯ ಹೋರಾಟಗಳಂತೆ ಇದು ಕೂಡ ಕ್ರೌರ್ಯ, ಅಸ್ತವ್ಯಸ್ತತೆ ಮತ್ತು ನ್ಯೂನತೆಗಳಿಂದ ಕೂಡಿದೆ. ಹಾಗೆಯೇ ಪ್ರಾರಂಭದ ದಿನಗಳಲ್ಲಿ ಕಾಶ್ಮೀರಿ ಪಂಡಿತರ ಮಾರಣಹೋಮ ನಡೆದು ಆ ಇಡೀ ಸಮುದಾಯ ಕಣಿವೆಯನ್ನೇ ತೊರೆದು ಹೋಗುವಂತೆ ಮಾಡಿದ ಈ ಸಂಗ್ರಾಮ ಸ್ವಚ್ಛ ಸಂಗ್ರಾಮವಂತೂ ಅಲ್ಲವೇ ಅಲ್ಲ.

ಪ್ರಸ್ತುತ ಬಂಡಾಯದ ಹಿಂದೆ ಇಸ್ಲಾಮಿಕ್ ಪ್ರೇರಣೆ ಇದೆ ಎಂಬುದನ್ನು ನಿರಾಕರಿಸಲಾಗುವುದಿಲ್ಲ, ಆದರೆ ಇವತ್ತು ಸ್ವಸಂಕಲ್ಪವನ್ನು ಕೇಳುತ್ತಿರುವ ಕಾಶ್ಮೀರಿಗಳು ನಾಳೆ ಅಲ್ಪಸಂಖ್ಯಾತ ಹಿಂದೂಗಳಿಗೂ ಸ್ವಸಂಕಲ್ಪ ನೀಡಲು ಒಪ್ಪುತ್ತಾರೆಯೇ? ಇವತ್ತು ಬಡತನದಲ್ಲಿ ಜೀವಿಸುತ್ತಿರುವ ಕಾಶ್ಮೀರಿ ಪಂಡಿತರಿಗೆ ವಾಪಸ್ಸು ಬರಲು ಅನುವು ಮಾಡಿಕೊಡುತ್ತಾರೆಯೇ? ಅಥವಾ 61 ವರ್ಷಗಳಿಂದ ಭಾರತ ಕಾಶ್ಮೀರಿಗಳಿಗೆ ಮಾಡಿದ್ದನ್ನೇ ಅವರೂ ಅಲ್ಪಸಂಖ್ಯಾತರಿಗೆ ಮಾಡುತ್ತಾರೆಯೇ? ಅವರ ಕನಸಿನ ಕಾಶ್ಮೀರ ಹೇಗಿರುತ್ತೆ? ಅಲ್ಜೀರಿಯಾ? ಇರಾನ್? ದಕ್ಷಿಣ ಆಫ್ರಿಕಾ? ಅಥವಾ ಪಾಕಿಸ್ತಾನ?

ಅದೇನೆ ಇರಲಿ, ಸ್ಥಳೀಯರಿಗೆ ಆಡಳಿತ ನಡೆಸಲು ಬಾರದೆಂಬ ಕಾರಣಕ್ಕೆ ಅವರಿಗೆ ಸ್ವಾತಂತ್ರ ನೀಡಬಾರದೆಂಬ ಹಿಂದಿನ ವಸಾಹತುಶಾಹಿಗಳ ವಾದವನ್ನು ಹೇಗೆ ಸಮರ್ಥಿಸಲಾಗುವುದಿಲ್ಲವೋ ಹಾಗೆಯೇ ಒಂದು ಸಮುದಾಯದ ಮೇಲೆ ಸೈನ್ಯದ ಬಲ ಉಪಯೋಗಿಸಿ ಅವರನ್ನು ವಶದಲ್ಲಿ ಇಟ್ಟುಕೊಳ್ಳುವುದೂ ಸಮರ್ಥನೀಯವಲ್ಲ.


ಭಾರತದ ಪ್ರಭುತ್ವಕ್ಕೆ ಕಾಶ್ಮೀರವನ್ನು ತನ್ನ ಹಿಡಿತದಲ್ಲೇ ಇಟ್ಟುಕೊಳ್ಳಲು ಹಲವಾರು ಮಾರ್ಗಗಳಿವೆ. ಅದಕ್ಕೀಗ ರೂಢಿಯಾಗಿರುವಂತೆ ಅದು ಕೆಲ ಸಮಯ ಕಾಯಬಹುದು. ಆ ಅವಧಿಯಲ್ಲಿ ಒಂದು ನಿಶ್ಚಿತ ಯೋಜನೆ ಇಲ್ಲದೆ ಜನರ ಉತ್ಸಾಹ ಕುಗ್ಗುತ್ತದೆ ಎಂದು ಆಶಿಸಬಹುದು. ಈಗ ರೂಪಗೊಳ್ಳುತ್ತಿರುವ ಒಕ್ಕೂಟದಲ್ಲಿ ಬಿರುಕುಗಳನ್ನು ಮೂಡಿಸಲು ಪ್ರಯತ್ನಿಸಬಹುದು. ಪ್ರಸ್ತುತ ಅಹಿಂಸಾತ್ಮಕ ಚಳವಳಿಯನ್ನು ಬಗ್ಗುಬಡಿದು ಮತ್ತೆ ಉಗ್ರಗಾಮಿಗಳ ಸಶಸ್ತ್ರ ಹೋರಾಟಕ್ಕೆ ಮರುಸೃಷ್ಟಿ ನೀಡಬಹುದು. ಸದ್ಯದ ಐದು ಲಕ್ಷ ಸೈನ್ಯವನ್ನು ಒಂದು ಮಿಲಿಯನ್ ಸಂಖ್ಯೆಗೆ ಏರಿಸಬಹುದು. ಹಲ ಮಾರಣ ಹೋಮಗಳನ್ನು ನಡೆಸಿ, ಕೆಲ ಕಗ್ಗೊಲೆಗಳನ್ನು ಮಾಡಿಸಿ, ಹಲವರನ್ನು ನಾಪತ್ತೆ ಮಾಡಿ, ಸಹಸ್ರಾರು ಜನರನ್ನು ಬಂಧಿಸಿ ಇನ್ನೂ ಹಲವು ವರ್ಷಗಳ ಕಾಲ 'ಯಥಾಸ್ಥಿತಿ'ಯನ್ನು ಭಾರತ ಮುಂದುವರಿಸಬಹುದು.

ಕಾಶ್ಮೀರವನ್ನು ಭಾರತದ ಸೈನ್ಯ ಆಕ್ರಮಿಸಿಕೊಂಡಿರುವುದು ನಮ್ಮನ್ನೆಲ್ಲ ರಾಕ್ಷಸರನ್ನಾಗಿಸಿದೆ. ಕಾಶ್ಮೀರದ ಮುಸಲ್ಮಾನರು ನಡೆಸುತ್ತಿರುವ ಹೋರಾಟದಿಂದಾಗಿ ಭಾರತದಲ್ಲಿನ ಮುಸಲ್ಮಾನರ ವಿರುದ್ಧ ಬೀಳಲು ಹಿಂದೂ ಮೂಲಭೂತವಾದಿಗಳಿಗೆ ನೆಪ ನೀಡಿದಂತಾಗಿದೆ.

ಇದರ ಅಂತರಾಳದಲ್ಲಿ ಒಂದು ನೈತಿಕ ಪ್ರಶ್ನೆ ಅಡಗಿದೆ. ಯಾವುದೇ ಸಮುದಾಯದ ಸ್ವಾತಂತ್ರ್ಯವನ್ನು ಸೈನ್ಯದ ಮೂಲಕ ಕಿತ್ತುಕೊಳ್ಳುವ ಅಧಿಕಾರ ಯಾವ ಸರ್ಕಾರಕ್ಕೆ ಇದೆ?


ಭಾರತಕ್ಕೆ ಕಾಶ್ಮೀರದಿಂದ ಎಷ್ಟು ಆಜಾದಿ ಬೇಕಿದೆಯೋ, ಅದಕ್ಕಿಂತ ಹೆಚ್ಚಿನ ಆಜಾದಿ ಭಾರತದಿಂದ ಕಾಶ್ಮೀರಕ್ಕೆ ಬೇಕಿದೆ...

■


ಎಸ್.ಕೆ. ಬೆಳ್ಳುಬ್ಬಿ

ಬಣಜಿಗ ಕತ್ತಿಗೆ ಗಾಣಿಗ ಬೆಳ್ಳುಬ್ಬಿ ಬಲಿ!

ಇದು ಲಿಂಗಾಯತರಲ್ಲೇ ಬಹುಸಂಖ್ಯಾತರಾಗಿರುವ ಪಂಚಮಸಾಲಿ ಮತ್ತು ಗಾಣಿಗರ ಮೇಲೆ ಬೆರಳೆಣಿಕೆಯಷ್ಟಿರುವ ಬಣಜಿಗರು ನಿರಂತರವಾಗಿ ನಡೆಸುತ್ತಿರುವ ಅನ್ಯಾಯದ ಮುಂದುವರೆದ ಭಾಗ. 60 ಲಕ್ಷದಷ್ಟಿರುವ ಗಾಣಿಗರಲ್ಲಿ ಎಮ್ಮೆಲ್ಲೆ ಅಂತ ಆಗಿರೋದು ಈಗ ಮೂರು ಜನ ಮಾತ್ರ. ಅದರಲ್ಲಿ ಮಂತ್ರಿ ಅಂತ ಆಗಿರೋದು ಬೆಳ್ಳುಬ್ಬಿ ಮಾತ್ರ. ಉಮೇಶ್ ಕತ್ತಿ ಎಂಬ ಬಣಜಿಗ ಬಜೆಪಿಗೆ ಬಂದ ತಕ್ಷಣ ಇದ್ದ ಒಂದು ಮಂತ್ರಿ ಸೀಟನ್ನೂ ಗಾಣಿಗರಿಂದ ಕಿತ್ತುಕೊಂಡು ಕತ್ತಿಗೆ ಧಾರೆ ಎರೆಯುತ್ತಿದ್ದಾರೆ.


ಉಮೇಶ್ ಕತ್ತಿ


ಅಂತೂ ಯಡ್ಡಿ ಮತ್ತೊಂದು ವಿಕೆಟ್ ಉರುಳಿಸಿದ್ದಾರೆ. ಯಡ್ಡಿಯ ಮಾರಕ ಸೇಡಿನ ಬೌಲಿಂಗ್‌ಗೆ ಈ ಬಾರಿ ಬಲಿಯಾದವರು ಬಜಾಪುರ ಜಿಲ್ಲೆಯ ಏಕೈಕ ಮಂತ್ರಿ ಎಸ್.ಕೆ. ಬೆಳ್ಳುಬ್ಬಿ. ಈ ಹಿಂದೆ ಜಗದೀಶ್ ಶೆಟ್ಟರ್‌ಗೆ ಮಂತ್ರಿ ಪದವಿ ನೀಡದೇ ಮೂರು ನಾಮ ಹಾಕಿದ್ದರು. ಈ ಬಾರಿ ಕೊಟ್ಟಿರುವ ಮಂತ್ರಿಪದವಿಯನ್ನು ಕಿತ್ತುಕೊಳ್ಳುವ ಮೂಲಕ ಬೆಳ್ಳುಬ್ಬಿಯ ವಿಕೆಟ್ ಉರುಳಿಸಿದ್ದಾರೆ. ಆದರೆ, ಇದು ಯಡ್ಡಿಗೆ ಮಾತ್ರವಲ್ಲ, ಇಡೀ ಬಜೆಪಿಗೆ ತಿರುಗುಬಾಣವಾಗುವ ಸಾಧ್ಯತೆಯೇ ಜಾಸ್ತಿಯಾಗಿ ಕಾಣುತ್ತಿದೆ.

ಇದು ಯಡ್ಡಿಯ ಸೇಡಿನ ರಾಜಕಾರಣದ ಮುಂದುವರೆದ ಭಾಗ. ಈ ಹಿಂದೆ ಉತ್ತರ ಕರ್ನಾಟಕದಲ್ಲಿ ತನಗೊಬ್ಬ ಪರ್ಯಾಯ ಲಿಂಗಾಯತ ಲೀಡರ್ ಎಂಬಂತೆ ಬೆಳೆಯುತ್ತಿದ್ದ ಜಗದೀಶ್ ಶೆಟ್ಟರ್ ಎಂಬ ವಿಕೆಟ್ ಅನ್ನು ಬಸವರಾಜ್ ಬೊಮ್ಮಾಯಿ ಎಂಬ ಮತ್ತೊಂದು ಲಿಂಗಾಯತ ಕೌಂಟರ್ ವೇಯಿಟ್ ಇಟ್ಟು ಉರುಳಿಸಿದ್ದರು. ಬಿಜಾಪುರ-ಬೆಳಗಾಂ ಭಾಗದಲ್ಲಿ ಯಡ್ಡಿ ವಿರೋಧಿ ಅನಂತೂ ಬಣದಲ್ಲಿ ಗುರುತಿಸಿಕೊಳ್ಳುತ್ತಿದ್ದ ಬೆಳ್ಳುಬ್ಬಿಯೀಗ ಯಡ್ಡಿಯ ಸೇಡಿನ ಬೌಲಿಂಗ್‌ಗೆ ಬಲಿಯಾದ ಎರಡನೇ ವಿಕೆಟ್.

ಬಜೆಪಿ ಸರ್ಕಾರವೆಂಬ ಬಲೂನು ಬೇರೆ ಪಕ್ಷಗಳಿಂದ ಬರುತ್ತಿರುವ ಪಕ್ಷಾಂತರಿಗಳಿಂದ ದಿನೇದಿನೇ ಉಬ್ಬುತ್ತಿದೆ. ಅದು ಯಾವಾಗ ಢಬ್ ಅಂತ ಒಡೆದುಕೊಳ್ಳುತ್ತೋ ಗೊತ್ತಿಲ್ಲ. ಪಕ್ಷಾಂತರಿಗಳಿಗೆ ಮಣೆ ಹಾಕುವುದಕ್ಕಾಗಿ ಮೂಲ ಬಜೆಪಿಗರಿಗೆ ಕೊಕ್ ನೀಡಲಾಗುತ್ತಿದೆ. ಇದರಿಂದ ಸರ್ಕಾರ ಗಟ್ಟಿಗೊಳ್ಳುತ್ತದೆ ಎಂದು ಯಡ್ಡಿ ಮತ್ತು ರೆಡ್ಡಿ ಇಬ್ಬರೂ ಭಾವಿಸಿದ್ದಾರೆ. ಆದರೆ, ಆಗುತ್ತಿರುವುದೇ ಬೇರೆ. ಬಜೆಪಿಯೊಳಗೇ ಯಡ್ಡಿ-ರೆಡ್ಡಿಗಳ ವಿರೋಧಿ ಬಣ ಗಟ್ಟಿಗೊಳ್ಳುತ್ತಾ, ದೊಡ್ಡದಾಗುತ್ತಾ ಹೋಗುತ್ತಿದೆ.


ಬಸವನಗೌಡ ಪಾಟೀಲ್


ಮೂಲ ಬಜೆಪಿಗರಿಗೆ ಕೊಕ್ ನೀಡುವಾಗಲೂ ಯಡ್ಡಿ-ರೆಡ್ಡಿಗಳು ಒಂದು ತಂತ್ರವನ್ನು ಅನುಸರಿಸುತ್ತಿದ್ದಾರೆ. ಅದೇನೆಂದರೆ, ಸರ್ಕಾರವನ್ನು ಗಟ್ಟಿಗೊಳಿಸುವ ನೆಪದಲ್ಲಿ ಪಕ್ಷದೊಳಗೆ ತಮ್ಮ ಆಧಿಪತ್ಯವನ್ನು ಪ್ರಶ್ನಿಸುತ್ತಿರುವವರನ್ನು, ತಮಗೆ ವಿರೋಧವಾಡುವವರನ್ನು, ಅನಂತ್‌ಕುಮಾರ್ ಬಣದಲ್ಲಿರುವವರನ್ನು ಬಲಿಪಶು ಮಾಡುವುದು.


ಅಪ್ಪಸಾಹೇಬ

ಈಗ ಬೆಳ್ಳುಬ್ಬಿಯನ್ನೇ ತೆಗೆದುಕೊಳ್ಳಿ. ಯಾವ ದೃಷ್ಟಿಯಿಂದ ವಿಶ್ಲೇಷಿಸಿದರೂ ಇವರನ್ನು ಕೈಬಿಡುವುದಕ್ಕೆ ಸೇಡಿನ ರಾಜಕಾರಣ ಬಿಟ್ಟರೆ ಬೇರೇನೂ ಕಾಣುವುದಿಲ್ಲ. ಒಂದು ಕಾಲದಲ್ಲಿ ಅಖಂಡ ಬಜಾಪುರ ಜಿಲ್ಲೆಯಲ್ಲಿ ಬಜೆಪಿ ಎಂಬ ಪಕ್ಷ ಜನರಿಗೆ ಗೊತ್ತೇ ಇರಲಿಲ್ಲ, ಅಂತಹ ನಾಡಿನಲ್ಲಿ ಕಮಲ ಅರಳುವಂತೆ ದುಡಿದ ಏಕೈಕ ವ್ಯಕ್ತಿ ಎಂದರೆ ಬೆಳ್ಳುಬ್ಬಿ. ಯಾವುದೇ ಸ್ವಂತ ಹಿತಾಸಕ್ತಿಯನ್ನು ಪರಿಗಣಿಸದೇ ಆಲಮಟ್ಟಿ ಯೋಜನೆಗಾಗಿ, ಬಜಾಪುರ ಜಿಲ್ಲೆಯ ಏತನೀರಾವರಿ ಯೋಜನೆಗಾಗಿ ರೈತರೊಂದಿಗೆ ಹಗಲಿರಳು ಹೋರಾಡಿದ ವ್ಯಕ್ತಿಯೀತ.


ಲಕ್ಷ್ಮಣ್ ಸವದಿ

ಇನ್ನೊಂದು ವಿಚಾರ ಎಂದರೆ ಇನ್ನಿತರ ರಾಜಕಾರಣಿಗಳಂತೆ ಬೆಳ್ಳುಬ್ಬಿ ಭ್ರಷ್ಟಾಚಾರವೆಸಗಿ, ಸಾರ್ವಜನಿಕ ದುಡ್ಡು ತಿಂದು ಮೈಕೈ ಹೊಲಸು ಮಾಡಿಕೊಂಡವರಲ್ಲ, ತನ್ನ ಹೋರಾಟ ಮತ್ತು ನಿಷ್ಕಳಂಕಿತ ಚಾರಿತ್ರ್ಯದಿಂದಾಗಿಯೇ ಜನಪ್ರಿಯವಾಗಿರುವ ಬೆಳ್ಳುಬ್ಬಿಗೆ ಇಡೀ ಜಿಲ್ಲೆಯಲ್ಲಿ ತನ್ನದೇ ಆದ ವರ್ಚಸ್ಸಿದೆ. ಕಳೆದ ಚುನಾವಣೆಯಲ್ಲಿ ಜಾತಿ, ಮತ ಎನ್ನದೇ ಇಡೀ ಕ್ಷೇತ್ರದ ಜನ ಅವರ ಬೆನ್ನಿಗೆ ನಿಂತಿದ್ದರು. ದೊಡ್ಡ ಪ್ರಮಾಣದಲ್ಲಿರುವ ಕುರುಬರೂ ಕೂಡ ಬೆಳ್ಳುಬ್ಬಿಯನ್ನು ಅಮೋಘವಾಗಿ ಬೆಂಬಲಿಸಿದ್ದರು. ಈ ಹೊತ್ತು ಬಜಾಪುರ ಜಿಲ್ಲೆಯಿಂದ ನಾಲ್ಕು ಬಜೆಪಿ ಎಮ್ಮೆಲ್ಲೆಗಳಿದ್ದಾರೆಂದರೆ ಅದು ಬೆಳ್ಳುಬ್ಬಿಯ ಸಾಧನೆ ಎಂದೇ ಹೇಳಬೇಕು. ಬೆಳ್ಳುಬ್ಬಿಗೆ ಇಡೀ ಬಜಾಪುರದಲ್ಲಿ ಎಷ್ಟರಮಟ್ಟಿಗೆ ಬೆಂಬಲವಿದೆ ಎಂದರೆ ಮೊನ್ನೆ ಅವರು ಮಂತ್ರಿಪದವಿ ತ್ಯಾಗಮಾಡಬೇಕು ಎಂದು ಮುಖ್ಯಮಂತ್ರಿ ಹೇಳಿದಾಕ್ಷಣ ಇಡೀ ಬಜಾಪುರವೇ ಹೊತ್ತಿ ಉರಿಯಿತು; ಕಾಂಗ್ರೆಸ್, ಜೆಡಿಎಸ್ ಮತ್ತು ಬಜೆಪಿ ಕಾರ್ಯಕರ್ತರು ಪಕ್ಷಭೇದ ಮರೆತು ಬೆಳ್ಳುಬ್ಬಿಯ ಬೆಂಬಲಕ್ಕೆ ನಿಂತರು; ವಕೀಲರ ಸಂಘದವರೂ ಪ್ರತಿಭಟನೆ ನಡೆಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.


ಯಡ್ಡಿ

ಇಂತಹ ಬೆಳ್ಳುಬ್ಬಿಯನ್ನು ಮಂತ್ರಿಸ್ಥಾನದಿಂದ ಕೈಬಿಡುವುದಕ್ಕೆ ಕಾರಣವಾದರೂ ಏನಿತ್ತು?

ಅಸಲಿಗೆ ಬೆಳ್ಳುಬ್ಬಿ ನಿಷ್ಠೂರಿಯಾಗಿರುವ ಕಾರಣದಿಂದಲೇ, ಅವರು ಭ್ರಷ್ಟಾಚಾರಿಯಾಗಿರದ ಕಾರಣದಿಂದಲೇ ಪಕ್ಷದೊಳಗೇ ಶತ್ರುಗಳನ್ನು ಸೃಷ್ಟಿಸಿಕೊಂಡಿದ್ದರು. ಮೊದಲನೇ ಶತ್ರು ಎಂದರೆ ಲಿಂಗಾಯತರಲ್ಲಿನ ಬಣಜಿಗ ಒಳಪಂಗಡಕ್ಕೆ ಸೇರಿದ ಅಪ್ಪು ಪಟ್ಟಣಶೆಟ್ಟಿ ಮತ್ತು ಜಗದೀಶ್ ಶೆಟ್ಟರ್. ಇನ್ನು ಎರಡನೇ ಶತ್ರು ಎಂದರೆ ಸಾಕ್ಷಾತ್ ಯಡ್ಡಿ-ಶೋಭ-ರೆಡ್ಡಿ ಕಾಂಬಿನೇಶನ್.


ಅನಂತಕುಮಾರ್

ಲಿಂಗಾಯತ ಒಳಪಂಗಡವಾದ ಗಾಣಿಗ ಸಮುದಾಯಕ್ಕೆ ಸೇರಿದ ಬೆಳ್ಳುಬ್ಬಿಯವರು ಈ ಸಮುದಾಯದ ಏಕೈಕ ಲೀಡರ್ ಕೂಡ. ಲಿಂಗಾಯತರಲ್ಲಿ 78 ಲಕ್ಷದಷ್ಟಿರುವ ಪಂಚಮಸಾಲಿಗಳನ್ನು ಬಿಟ್ಟರೆ ಎರಡನೇ ಅತಿದೊಡ್ಡ ಲಿಂಗಾಯತ ಒಳಪಂಗಡ ಎಂದರೆ 60 ಲಕ್ಷದಷ್ಟಿರುವ ಗಾಣಿಗರು. ಇಷ್ಟು ದೊಡ್ಡ ಜನಸಂಖ್ಯೆಯಿದ್ದರೂ ಅವರಿಗೆ ರಾಜಕೀಯದಲ್ಲಿ ಪ್ರಾತಿನಿಧ್ಯವೇ ಇಲ್ಲ. ಲಿಂಗಾಯತ ಜಾತಿಯೊಳಗೆ ಹಿಡಿಯಷ್ಟಿರುವ ಬಣಜಿಗರದ್ದೆ ಕಾರುಬಾರು. ರಾಜ್ಯದಲ್ಲಿ ಪಂಚಮಸಾಲಿ ಪಂಗಡದಿಂದ 14 ಜನ ಎಮ್ಮೆಲ್ಲೆಗಳಾಗಿದ್ದಾರೆ. ತೀರಾ ಬೆರಳೆಣಿಕೆಯಷ್ಟಿರುವ ಬಣಜಿಗ ಪಂಗಡದಿಂದ 13 ಜನ ಎಮ್ಮೆಲ್ಲೆಯಾಗಿದ್ದಾರೆ. ಆದರೆ, ಎರಡನೇ ಅತಿದೊಡ್ಡ ಪಂಗಡವಾಗಿರುವ ಗಾಣಿಗ ಪಂಗಡದಿಂದ ಎಮ್ಮೆಲ್ಲೆ ಗಾದಿಗೇರಿದವರು ಕೇವಲ 3 ಜನ ಮಾತ್ರ!


ಜಗದೀಶ್ ಶೆಟ್ಟರ್


ಶೋಭಾ


ಲಿಂಗಾಯತ ಸಮುದಾಯವನ್ನು ಬಣಜಿಗರೇ ಎನ್‌ಕ್ಯಾಶ್ ಮಾಡಿಕೊಂಡು ಬಹುಸಂಖ್ಯಾತ ಪಂಚಮಸಾಲಿ ಮತ್ತು ಗಾಣಿಗರನ್ನು ತುಳಿಯುತ್ತಿರುವುದನ್ನು ಬೆಳ್ಳುಬ್ಬಿ ವಿರೋಧಿಸುತ್ತಿದ್ದರು. ಈ ಕಾರಣಕ್ಕಾಗಿಯೇ ಅಪ್ಪು ಪಟ್ಟಣಶೆಟ್ಟಿ ಎಂಬ ಬಣಜಿಗನ ವಿರೋಧ ಕಟ್ಟಿಕೊಂಡಿದ್ದರು. ಬೆಳ್ಳುಬ್ಬಿ ರಾಜಕೀಯವಾಗಿ ಬೆಳೆದಷ್ಟೂ ಅದು ಅಪ್ಪು ಪಟ್ಟಣಶೆಟ್ಟಿಗೆ ಅಪಾಯವೇ. ಈಗಾಗಲೇ ಉತ್ತರ ಕರ್ನಾಟಕದ ಆ ಭಾಗ ಬೆಳ್ಳುಬ್ಬಿಯ ಹಿಡಿತಕ್ಕೆ ಬಂದಿದೆ. ಹೀಗೇ ಮುಂದುವರೆದರೆ ತನ್ನನ್ನು ಮುಂದೊಂದು ದಿನ ಕ್ಯಾರೆ ಅನ್ನುವವರಿರುವುದಿಲ್ಲ ಎಂಬ ಭಯ ಪಟ್ಟಣಶೆಟ್ಟಿಗೆ ಇದ್ದೇ ಇದೆ. ಹೀಗಾಗಿ ಬೆಳ್ಳುಬ್ಬಿಯನ್ನು ರಾಜಕೀಯವಾಗಿ ತುಳಿಯುವುದಕ್ಕೆ ಅಪ್ಪು ಪಟ್ಟಣಶೆಟ್ಟಿ ಹವಣಿಸುತ್ತಲೇ ಇದ್ದ. ಈತ ಕಳೆದ ಚುನಾವಣೆ ಮುಗಿದು ಗೆದ್ದ ತಕ್ಷಣ "ತನಗೆ ಯಾವ ಗಾಣಿಗನೂ ಓಟು ಹಾಕಿಲ್ಲ" ಎಂದು ಬಹಿರಂಗವಾಗಿ ಹೇಳುತ್ತಾ ಇಡೀ ಗಾಣಿಗ ಪಂಗಡದ ವಿರುದ್ಧ ಅದರಲ್ಲೂ ಅದರ ನಾಯಕನಾಗಿರುವ ಬೆಳ್ಳುಬ್ಬಿ ವಿರುದ್ಧ ಯುದ್ಧ ಸಾರಿದ್ದ. ಇದಕ್ಕೆ ಜಗದೀಶ್ ಶೆಟ್ಟರ್ ಎಂಬ ಬಣಜಿಗನೂ ಸಾಥ್ ನೀಡಿದ್ದ. ಈಗ ಬೇರೆ ಪಕ್ಷಗಳಿಂದ ಬಜೆಪಿ ಸೇರಿದವರಿಗೆ ಪ್ರಾತಿನಿಧ್ಯ ಕೊಡಲು ಮೂಲ ಬಜೆಪಿಗರು ತ್ಯಾಗ ಮಾಡಬೇಕಾಗಿ ಬಂದಾಗ ಬೆಳ್ಳುಬ್ಬಿಯನ್ನೇ ಬಲಿಪಶು ಮಾಡುವುದಕ್ಕೆ ಪಟ್ಟಣಶೆಟ್ಟಿ ಮತ್ತು ಜಗದೀಶ್ ಶೆಟ್ಟರ್ ಇಬ್ಬರೂ ರೆಡಿಯಾಗಿಬಿಟ್ಟರು.

ಇನ್ನು ಯಡಿಯೂರಪ್ಪನಿಗೂ ಬೆಳ್ಳುಬ್ಬಿಗೂ ಅಷ್ಟಕ್ಕಷ್ಟೆ ಸಂಬಂಧ. ರೆಡ್ಡಿ-ಯಡ್ಡಿ ಸೇರಿಕೊಂಡು ಬೇರೆ ಪಕ್ಷಗಳ ಎಮ್ಮೆಲ್ಲೆಗಳ ಖರೀದಿಗಿಳಿದಾಗ ಬೆಳ್ಳುಬ್ಬಿಯವರು "ಆಯ್ಕೆಯಾದ ಎಲ್ಲಾ ಎಮ್ಮೆಲ್ಲೆಗಳನ್ನೂ ಖರೀದಿಸಿಬಿಡಿ. ಆಗ ವಿರೋಧ ಪಕ್ಷವೇ ಇರುವುದಿಲ್ಲ" ಎಂದು ಖಾರವಾಗಿ ಮುಖಕ್ಕೆ ಹೊಡೆದಂತೆ ಹೇಳಿದ್ದರು. ಅದೂ ಅಲ್ಲದೇ, ಯಡ್ಡಿ-ಶೋಭ-ರೆಡ್ಡಿಯ ಕಾಂಬಿನೇಶನ್ ಇಡೀ ಬಜೆಪಿಯನ್ನು ಕಂಟ್ರೋಲ್ ಮಾಡುತ್ತಿರುವುದರ ಬಗ್ಗೆಯೂ ಬೆಳ್ಳುಬ್ಬಿ ಅಲ್ಲಲ್ಲಿ ವಿರೋಧ ವ್ಯಕ್ತಪಡಿಸಿದ್ದರು. ಇದೆಲ್ಲ ಯಡ್ಡಿ-ರೆಡ್ಡಿಗಳಿಗೆ ಸಿಟ್ಟು ತರಿಸಿತ್ತು.

ಇನ್ನೊಂದು ವಿಚಾರ ಎಂದರೆ, ಬೆಳ್ಳುಬ್ಬಿಯವರು ಬಸವನಗೌಡ ಪಾಟೀಲ್ ಯತ್ನಾಳ್‌ಗೆ ತುಂಬಾ ಹತ್ತಿರದಲ್ಲಿರುವ ವ್ಯಕ್ತಿ. ಯತ್ನಾಳ್ ಅನಂತಕುಮಾರ್ ಬಣದ ಪ್ರಮುಖ ವ್ಯಕ್ತಿ. ಬೆಳ್ಳುಬ್ಬಿ ಇತ್ತೀಚೆಗಂತೂ ಯತ್ನಾಳ್ ಮೂಲಕ ಅನಂತೂ ಬಣದಲ್ಲಿ ಗಟ್ಟಿಯಾಗಿ ಬೇರೂರುತ್ತಿರುವುದನ್ನು ಕಂಡ ಯಡ್ಡಿ ಬೆಳ್ಳುಬ್ಬಿಯ ಬಾಲ ಕಟ್ ಮಾಡುವುದಕ್ಕಾಗಿ ಒಂದು ನೆಪಕ್ಕಾಗಿ ಕಾಯುತ್ತಿದ್ದರು. ಪಕ್ಷಾಂತರಿಗಳಿಗೆ ಪ್ರಾತಿನಿಧ್ಯಕೊಡುವ ನೆಪವೊಡ್ಡಿ ಈಗ ಬೆಳ್ಳುಬ್ಬಿಗೆ ಕೊಕ್ ನೀಡಲಾಗುತ್ತಿದೆ. ಅಸಲಿಗೆ ಜಗದೀಶ್ ಶೆಟ್ಟರ್ ಮತ್ತು ಯಡ್ಡಿಗೆ ಒಬ್ಬರನ್ನು ಕಂಡರೆ ಆಗುವುದಿಲ್ಲ, ಅಂತಹದ್ದರಲ್ಲಿ ಬೆಳ್ಳುಬ್ಬಿ ಎಂಬ ಕಾಮನ್ ಎನಮಿಯನ್ನು ಎಲಿಮಿನೇಟ್ ಮಾಡುವುದಕ್ಕೆ ಇಬ್ಬರೂ ಒಂದಾಗಿದ್ದಾರೆ. 'ದುಷ್ಮನ್ ಕಿ ದುಷ್ಮನ್ ದೋಸ್ತ್ ಹೋತಾ ಹೈ' ಅಲ್ಲವೆ?

ರೈತರ ಪ್ರತಿರೋಧ

ಬೆಳ್ಳುಬ್ಬಿ ಒಬ್ಬ ಸೀದಾ ಸಾದಾ ಮನುಷ್ಯನಾಗಿದ್ದರಿಂದ, ಒಂದು ರೀತಿಯಲ್ಲಿ ಸಾಧು ಪ್ರಾಣಿಯಂತೆ ಸೌಮ್ಯ ಸ್ವಭಾವದವರಾಗಿರುವುದರಿಂದ ಅವರಿಂದ ಮಂತ್ರಿಸ್ಥಾನ ಕಿತ್ತುಕೊಂಡರೂ ಸುಮ್ಮನಾಗಿಬಿಡುತ್ತಾರೆ ಅಂತ ಯಡ್ಡಿ ಎಣಿಸಿದರು. ಹಾಗಾಗಿಯೇ ಅವರಿಗೆ ಕೊಕ್ ಕೊಡುವ ನಿರ್ಧಾರವನ್ನೂ ಮಾಡಿಬಿಟ್ಟರು. ಆದರೆ, ಬೆಳ್ಳುಬ್ಬಿ ಸುಮ್ಮನಿದ್ದರೂ ಅತ್ತ ಬಜಾಪುರದಲ್ಲಿ ಜನ ಸುಮ್ಮನಿರಲಿಲ್ಲ. ಬೆಳ್ಳುಬ್ಬಿಯಿಂದ ಮಂತ್ರಿಪದವಿಯನ್ನು ಕಿತ್ತುಕೊಂಡದ್ದು ಕೇವಲ ಬೆಳ್ಳುಬ್ಬಿಗೆ ಮಾಡಿದ ಅನ್ಯಾಯವಲ್ಲ ಇಡೀ ಗಾಣಿಗ ಸಮುದಾಯಕ್ಕೆ ಮಾಡಿದ ಅನ್ಯಾಯ, ಇಡೀ ಬಜಾಪುರ ಜಿಲ್ಲೆಯ ಜನತೆಗೆ ಮಾಡಿದ ಅನ್ಯಾಯ ಎಂದು ಜನ ಪಕ್ಷಾತೀತವಾಗಿ ಬೀದಿಗಿಳಿದುಬಿಟ್ಟರು. ಪ್ರಾಯಶಃ ಯಡ್ಡಿ ಇದನ್ನು ನಿರೀಕ್ಷಿಸಿರಲಿಲ್ಲ.


ಬೆಳ್ಳುಬ್ಬಿ ಬೆಂಬಲಿಗರಿಂದ ಪ್ರತಿಭಟನೆ

ಇಡೀ ಬಜಾಪುರ ಜಿಲ್ಲೆಗೆ ಮಂತ್ರಿ ಅಂತ ಇದ್ದುದ್ದು ಬೆಳ್ಳುಬ್ಬಿಯೊಬ್ಬರೆ. ಅವರಿಗೆ ತೋಟಗಾರಿಕೆ ಇಲಾಖೆಯನ್ನು ಕೊಟ್ಟಾಗ ಸಹಜವಾಗಿಯೇ ಜಿಲ್ಲೆಯ ರೈತರು ತಮ್ಮ ಜಿಲ್ಲೆ ಉದ್ಧಾರವಾಗಬಹುದೆಂಬ ಭರವಸೆಯಿತ್ತು. ಏಕೆಂದರೆ, ಇಡೀ ಬಜಾಪುರ ಜಿಲ್ಲೆಯಾದ್ಯಂತ ರೈತರು ದ್ರಾಕ್ಷಿ, ದಾಳಿಂಬೆ, ನಿಂಬು ಮುಂತಾದ ತೋಟಗಾರಿಕಾ ಬೆಳೆಯನ್ನು ಬೆಳೆಯುತ್ತಾರೆ. ಈ ಬೆಳೆಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರಿ ಬೇಡಿಕೆಯಿದೆ. ಆದರೆ, ತೋಟಗಾರಿಕೆಯನ್ನು ಅಭಿವೃದ್ಧಿಪಡಿಸುವ ಮೂಲಕ ಹೆಚ್ಚೆಚ್ಚು ಉತ್ಪಾದಿಸಿ ರಫ್ತು ಮಾಡುವುದಕ್ಕೆ ಯಾವ ಸರ್ಕಾರಗಳೂ ಈವರೆಗೆ ಪ್ರಾಮಾಣಿಕವಾಗಿ ಪ್ರಯತ್ನಿಸಿಲ್ಲ. ಇದು ಜಿಲ್ಲೆಯ ರೈತರಿಗೆ ಸಹಜವಾಗಿ ಅಸಮಾಧಾನ ತಂದಿದೆ. ತಮ್ಮದೇ ಜಿಲ್ಲೆಯವರಾದ ಬೆಳ್ಳುಬ್ಬಿಯವರು ಮಂತ್ರಿಪದವಿಗೇರಿದಾಗ, ಅದರಲ್ಲೂ ತೋಟಗಾರಿಕಾ ಮಂತ್ರಿಯಾದಾಗ ಇನ್ನಾದರೂ ತಮ್ಮ ತೋಟಗಾರಿಕೆ ಅಭಿವೃದ್ಧಿ ಕಾಣುತ್ತದೆ ಎಂದು ನಿರೀಕ್ಷಿಸಿದ್ದರು. ಬೆಳ್ಳುಬ್ಬಿಯವರೂ ಕೂಡ ಆ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನ ನಡೆಸುತ್ತಿದ್ದರು. ಅಷ್ಟು ಹೊತ್ತಿಗಾಗಲೇ ಅವರಿಂದ ಮಂತ್ರಿಪದವಿ ಕಿತ್ತುಕೊಳ್ಳುವ ಹುನ್ನಾರ ನಡೆದಿರುವುದು ರೈತರು ಸಿಟ್ಟಿಗೇಳುವಂತೆ ಮಾಡಿದೆ.

ಯಡ್ಡಿಗೆ ತಿರುಗುಬಾಣ

ಬೆಳ್ಳುಬ್ಬಿಯವರು ಇಡೀ ಲಿಂಗಾಯತ ಗಾಣಿಗ ಒಳಪಂಗಡದ ನಾಯಕರು. ಅವರಿಂದ ಮಂತ್ರಿಗಿರಿಯನ್ನು ಕಿತ್ತುಕೊಳ್ಳುತ್ತಿರುವುದು ಇಡೀ ಗಾಣಿಗ ಸಮುದಾಯಕ್ಕೆ ಮಾಡುತ್ತಿರುವ ಅನ್ಯಾಯ ಎಂದು ಇಡೀ ಸಮುದಾಯವೇ ಈಗ ತಿರುಗಿಬಿದ್ದಿದೆ.

ಗಾಣಿಗ ಸಮುದಾಯದ ರಾಜ್ಯ ಅಧ್ಯಕ್ಷ ಡಾ. ಸಜ್ಜನ್ ನೇತೃತ್ವದಲ್ಲಿ ಹುಬ್ಬಳ್ಳಿಯಲ್ಲಿ ಇದೇ ವಿಚಾರವನ್ನು ಕುರಿತು ಚರ್ಚೆ ನಡೆಯುತ್ತಿದೆ. ಒಟ್ಟಾರೆ ಬಜೆಪಿಯಲ್ಲಿ ಬಣಜಿಗರ ಅಟ್ಟಹಾಸ ಜಾಸ್ತಿಯಾಗುತ್ತಿದ್ದು ಅದನ್ನು ಮಟ್ಟಹಾಕಬೇಕು ಇಲ್ಲವೇ ಪಕ್ಷದಿಂದ ಹೊರ ನಡೆಯಬೇಕು ಎಂದು ಚರ್ಚೆ ನಡೆದಿದೆ. ಪಂಚಮಸಾಲಿಗಳೂ ಕೂಡ ಬಣಜಿಗರಿಂದ ಅನ್ಯಾಯಕ್ಕೊಳಗಾಗುತ್ತಿರುವುದರಿಂದ ಕೆಲ ಪಂಚಮಸಾಲಿ ಎಮ್ಮೆಲ್ಲೆಗಳೂ ಈಗ ಗಾಣಿಗರೊಂದಿಗೆ ಕೈ ಜೋಡಿಸಿದ್ದಾರೆ.

ಬೆಳ್ಳುಬ್ಬಿ ಪ್ರಕರಣವನ್ನೇ ಮುಂದುಮಾಡಿಕೊಂಡು ಪಂಚಮಸಾಲಿಯ ಕೆಲವು ಎಮ್ಮೆಲ್ಲೆಗಳು ಮತ್ತು ಗಾಣಿಗರ ಎಲ್ಲಾ ಮೂವರು ಎಮ್ಮೆಲ್ಲೆಗಳು (ಅಥಣಿಯ ಎಮ್ಮೆಲ್ಲೆ ಲಕ್ಷ್ಮಣ್ ಸವದಿ, ಸಿಂಧಗಿಯ ಎಮ್ಮೆಲ್ಲೆ ರಮೇಶ್ ಭೂಸನೂರ್ ಮತ್ತು ಬಸವನಬಾಗೇವಾಡಿ ಎಮ್ಮೆಲ್ಲೆ ಬೆಳ್ಳುಬ್ಬಿ) ಸಾಮೂಹಿಕವಾಗಿ ಪಕ್ಷ ತೊರೆಯುವ ನಿರ್ಧಾರ ಮಾಡುತ್ತಿದ್ದಾರೆ. ಹಾಗೇನಾದರೂ ಆದರೆ, ಹೊರಗಿನ ದೆವ್ವ ಬಂದು ಮನೆ ದೆವ್ವವನ್ನು ಓಡಿಸಿದಂತಾಗುತ್ತದೆ ಬಜೆಪಿಯ ಪರಿಸ್ಥಿತಿ.

ಅತ್ತ ಗೋಕರ್ಣ ದೇವಾಲಯವನ್ನು ರಾಮಚಂದ್ರಾಪುರ ಮಠದ ಕಾ ಸ್ವಾಮಿಗೆ ವಹಿಸಿಕೊಟ್ಟಿದ್ದರಿಂದ ಕರಾವಳಿಯ ಜನ ಯಡ್ಡಿಯ ವಿರುದ್ಧ ತಿರುಗಿಬಿದ್ದಿದ್ದಾರೆ. ಇತ್ತ ಬೆಳ್ಳುಬ್ಬಿಯಿಂದ ಮಂತ್ರಿಗಿರಿಯನ್ನು ಕಿತ್ತುಕೊಳ್ಳುತ್ತಿರುವುದರಿಂದ ಬಜಾಪುರದ ಜನ ತಿರುಗಿಬಿದ್ದಿದ್ದಾರೆ. ಅದೂ ಸಾಲದೆಂಬಂತೆ ಯಡ್ಡಿ-ಶೋಭಾ-ರೆಡ್ಡಿ ಕಾಂಬಿನೇಶನ್ ಬಜೆಪಿಯನ್ನು ಕಂಟ್ರೋಲ್ ಮಾಡುತ್ತಿರುವುದರ ವಿರುದ್ಧ ಬಜೆಪಿಯೊಳಗೆ ಮತ್ತು ಹೈ ಕಮಾಂಡಿನಲ್ಲೂ ಅಸಮಾಧಾನ ಹೊಗೆಯಾಡುತ್ತಿದೆ. ಎಲ್ಲದಕ್ಕಿಂತ ಮಿಗಿಲಾಗಿ ಯಡ್ಡಿಯ ಕಾಲೆಳೆಯುವುದಕ್ಕೆ ಅನಂತೂ ಒಂದು ನೆಪಕ್ಕಾಗಿ ಕಾಯುತ್ತಿದ್ದಾನೆ. ಇನ್ನೆಷ್ಟು ದಿನ ನಡೆಯುತ್ತದೆ ಯಡ್ಡಿಯ ಈ ತಂತಿ ಮೇಲಿನ ನಡಿಗೆ?

■ ಕುಮಾರ್ ಬುರಡಿಕಟ್ಟಿ

ಬಳಿಗಾರ್‌ಗೆ ಯಡ್ಡಿಯ ಕಪಾಳಮೋಕ್ಷ!



ಅಧಿಕಾರದ 'ಮದ' ಏರಿದ ಮನುಷ್ಯ ಹೇಗೆಲ್ಲಾ ವರ್ತಿಸುತ್ತಾನೆಂಬುದಕ್ಕೆ ಮುಖ್ಯಮಂತ್ರಿ ಯಡ್ಡಿಯೇ ಜೀವಂತ ಸಾಕ್ಷಿ. ತಾನೇ ಸರ್ವಾಧಿಕಾರಿ ಎಂಬಂತೆ ಮೆರೆಯುತ್ತಿರುವ ಯಡ್ಡಿ ಇತ್ತೀಚೆಗೆ ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದ ಆಪ್ತ ಕಾರ್ಯದರ್ಶಿ ವಿ.ಪಿ. ಬಳಿಗಾರ್‌ಗೆ ತಪರಾಕಿ ನೀಡುವ ಮೂಲಕ ಬಿಜೆಪಿಯ ಸಂಸ್ಕೃತಿ ಎಂಥದ್ದು ಎಂಬುದನ್ನು ಎತ್ತಿ ತೋರಿಸಿದ್ದಾರೆ.

ಈ ತಪರಾಕಿ ಪ್ರಕರಣ ನಡೆದಿದ್ದು ಕಳೆದ ಗುರುವಾರ ಸಂಜೆ ವಿಧಾನಸೌಧದಲ್ಲಿ. ಯಡ್ಡಿಯ ಆತ್ಮೀಯ ಅಧಿಕಾರಿ ಎಂದೇ ಗುರುತಿಸಿಕೊಂಡಿರುವ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ವಿ.ಪಿ.ಬಳಿಗಾರ್ ಯಡ್ಡಿಯ ಕಪಾಳಮೋಕ್ಷ ತಿಂದು ಅವಮಾನ ಅನುಭವಿಸುತ್ತಿದ್ದಾರೆ.

ಯಡ್ಡಿ ಹೇಳಿದ್ದೇ ಕಾನೂನಂತೆ!

ಕೆಲ ಯೋಜನೆ, ಕಾರ್ಯಕ್ರಮಗಳ ಜಾರಿಗೆ ಸರ್ಕಾರ ಕಾನೂನು ಮಾಡಿಕೊಂಡಿರುತ್ತದೆ. ಈ ಕಾನೂನನ್ನು ಮೀರಿ ಯಾರೂ ಏನೂ ಮಾಡುವಂತಿಲ್ಲ. ಆದರೆ ತಮಗೆ ಬೇಕಾದ ಶಾಸಕರು ಹೇಳಿದರು ಎಂಬ ಕಾರಣಕ್ಕೆ ಯಡ್ಡಿ ಕಾನೂನು ತೊಡಕುಗಳಿದ್ದರೂ ಕೆಲ ಫೈಲ್‌ಗಳಿಗೆ ಸಹಿಹಾಕಿ ಬಳಿಗಾರ್ ಬಳಿಗೆ ಕಳುಹಿಸುತ್ತಿದ್ದಾರೆ. ಕರ್ತವ್ಯದಲ್ಲಿ ನಿಷ್ಠಾವಂತ ಅಧಿಕಾರಿ ಎಂದು ಹೆಸರು ಮಾಡಿರುವ ಬಳಿಗಾರ್‌ಗೆ ಈ ಫೈಲ್‌ಗಳನ್ನು ಕ್ಲಿಯರ್ ಮಾಡಲು ಸಾಧ್ಯವಾಗುತ್ತಿಲ್ಲ. ಇದು ಯಡ್ಡಿ ಮತ್ತು ಬಳಿಗಾರ್ ನಡುವೆ ವಿರಸಕ್ಕೆ ಕಾರಣವಾಗಿದೆ.

ಮೊನ್ನೆ ಯಡ್ಡಿ ಕರೆದು ಕೇಳಿದಾಗಲೂ ಬಳಿಗಾರ್ ಕಾನೂನು ತೊಡಕುಗಳನ್ನು ವಿವರಿಸಿದ್ದಾರೆ. 'ಇದೆಲ್ಲಾ ನನಗೆ ಗೊತ್ತಿಲ್ಲ, ಫೈಲ್‌ಗಳನ್ನು ಕಳುಹಿಸಿಕೊಡಿ; ಇಲ್ಲಿ ನಾನು ಹೇಳಿದ್ದೇ ಕಾನೂನು' ಎಂದು ಆದೇಶ ನೀಡಿದಾಗ, 'ಆಡಳಿತ ಗೊತ್ತಿಲ್ಲದವರ ಬಳಿ ಕೆಲಸ ಮಾಡುವುದು ಕಷ್ಟ' ಎಂದು ಬಳಿಗಾರ್ ಹೇಳಿ ಅಲ್ಲಿಂದ ಹೊರಡಲು ಅನುವಾಗಿದ್ದಾರೆ. ಅವರ ಈ ಮಾತನ್ನು ಕೇಳಿದ ಯಡ್ಡಿಗೆ ಸಿಟ್ಟು ನೆತ್ತಿಗೇರಿತು, ಎದ್ದು ಬಂದು ಕಪಾಳಕ್ಕೆ ಬಾರಿಸಿಯೇ ಬಿಟ್ಟರು! ಇದನ್ನು ಮುಖ್ಯಮಂತ್ರಿ ಕಚೇರಿಯ ಅಧಿಕಾರಿಗಳೆಲ್ಲರೂ ನೋಡುತ್ತಾ ನಿಂತಿದ್ದರು.

ಎಲ್ಲದಕ್ಕೂ ರೇಣುಕಾಚಾರ್ಯ ಕಾರಣ

ಈ ಘಟನೆ ನಡೆಯಲು ಹೊನ್ನಾಳಿಯ ಶಾಸಕ ರೇಣುಕಾಚಾರ್ಯ ಕಾರಣವಂತೆ. ಯಡ್ಡಿಯ ಅಪ್ಪಟ ಬೆಂಬಲಿಗನಾದ ರೇಣುಕಾಚಾರ್ಯಗೆ ಬಳಿಗಾರ್‌ರನ್ನು ಕಂಡರೆ ಆಗುವುದಿಲ್ಲ. ಮುಖ್ಯಮಂತ್ರಿಗಳ ಕಚೇರಿಯಿಂದ ಇವರನ್ನು ಹೇಗಾದರೂ ಮಾಡಿ ಓಡಿಸಬೇಕೆಂದು ಹೊಂಚು ಹಾಕುತ್ತಲೇ ಇರುವ ಈತ ಯಡ್ಡಿಯ ಮುಂದೆ ಹೋಗಿ ಬಳಿಗಾರ್ ಬಗ್ಗೆ ದೂರು ಹೇಳುತ್ತಲೇ ಇದ್ದ.

ಬೆಳ್ಳುಬ್ಬಿ ರಾಜೀನಾಮೆ ಪ್ರಕರಣದಿಂದ ಶಾಸಕರು ತಮ್ಮ ವಿರುದ್ಧ ತಿರುಗಿಬೀಳುತ್ತಿದ್ದಾರೆ ಎಂಬುದು ಯಡ್ಡಿಗೆ ಗೊತ್ತಾಗಿ, ತಲೆಕೆಡಿಸಿಕೊಂಡು ಕೂತಿರುವ ಸಂದರ್ಭದಲ್ಲಿಯೇ ರೇಣುಕಾಚಾರ್ಯ ಹೋಗಿ ಮತ್ತೆ ಫಿಟ್ಟಿಂಗ್ ಇಟ್ಟಿದ್ದಾನೆ. ತಾನು ಹೇಳಿದ್ದ ಒಂದೇ ಒಂದು ಕೆಲಸವೂ ಆಗುತ್ತಿಲ್ಲ ಎಂದು ರೇಗಾಡಿ ಸೀನ್ ಕ್ರಿಯೇಟ್ ಮಾಡಿದ್ದಾನೆ. ಇದರಿಂದ ಯಡ್ಡಿ ಸಿಟ್ಟು ಮೊದಲೇ ನೆತ್ತಿಗೇರಿತ್ತು, ಬಳಿಗಾರ್ ಮೇಲೆ ಕೈ ಮಾಡಿಯೇ ಬಿಟ್ಟರು.


ಸಮ್ಮಿಶ್ರ ಸರ್ಕಾರವಿದ್ದಾಗ ಹೊನ್ನಾಳಿ ಕ್ಷೇತ್ರದ ಕುಡಿಯುವ ನೀರಿನ ಯೋಜನೆಯೊಂದನ್ನು ಭೂಸೇನಾ ನಿಗಮಕ್ಕೆ ವಹಿಸಲಾಗಿತ್ತು. ನಿಗಮದ ಅಧಿಕಾರಿಗಳಿಂದ ಮಾಮೂಲಿ ವಸೂಲಿ ಮಾಡಿಕೊಳ್ಳಲು ಹೋಗಿದ್ದ ಶಾಸಕ ರೇಣುಕಾಚಾರ್ಯಗೆ ಆಗ ನಿಗಮದ ಅಧ್ಯಕ್ಷರಾಗಿದ್ದ ಬಳಿಗಾರ್ ಗ್ರಹಚಾರ ಬಿಡಿಸಿದ್ದರು. ಇದೇ ಸಿಟ್ಟಿನ ಮೇಲೆ ವಿಧಾನಸಭೆಯ ಕಲಾಪ ನಡೆಯುತ್ತಿದ್ದಾಗಲೇ ರೇಣುಕಾಚಾರ್ಯ ಬಳಿಗಾರ್ ಮೇಲೆ ಕೆಂಡಕಾರಿದ್ದ. ಆಗ ಸಚಿವ ಎಂ.ಪಿ. ಪ್ರಕಾಶ್ ಸಮಾಧಾನ ಪಡಿಸಿದ್ದರು. ಬಳಿಗಾರ್ ಮೇಲೆ ಅದೇ ಸಿಟ್ಟು ಇಟ್ಟುಕೊಂಡಿರುವ ರೇಣುಕಾಚಾರ್ಯ ಯಡ್ಡಿ ಕೈಯಿಂದ ಅವರಿಗೆ ಈಗ ತಪರಾಕಿ ಕೊಡಿಸಿದ್ದಾನೆ.

ಯಡ್ಡಿಯ ಸಿಟ್ಟಿನ ಬಗ್ಗೆ ಎಲ್ಲರಿಗೂ ಗೊತ್ತಿದೆ. ಆದರೆ ಐಎಎಸ್ ಅಧಿಕಾರಿಯ ಮೇಲೆ ಹಲ್ಲೆ ನಡೆಸುವ ಮಟ್ಟಿಗೆ ಅವರು ಹೋಗುತ್ತಾರೆ ಎಂದರೆ ಅದಕ್ಕೆ ಅಧಿಕಾರ ಮದವೇ ಕಾರಣ ಎಂದು ಬಿಜೆಪಿ ಶಾಸಕರೇ ಮಾತನಾಡಿಕೊಳ್ಳುತ್ತಿದ್ದಾರೆ. ಈ ತಪರಾಕಿ ಪ್ರಕರಣ ಸಾರ್ವಜನಿಕವಾಗುತ್ತಿದ್ದಂತೆಯೇ ಹೆದರಿದ ಯಡ್ಡಿ, ತಮ್ಮ ಕಾರ್ಯದರ್ಶಿಗಳಿಂದ ವಿವರಣೆಯ ಪತ್ರವನ್ನು ಮಾಧ್ಯಮಗಳಿಗೆ ರವಾನಿಸಿ, ತಾನೆಷ್ಟು ಮೂರ್ಖ ಎಂಬುದನ್ನು ಮತ್ತೆ ಸಾಬೀತುಪಡಿಸಿದ್ದಾರೆ.

ಈಗಾಗಲೇ ಬಿಜೆಪಿ ಒಡೆದ ಮನೆಯಾಗಿದೆ. ಒಂದೆಡೆ ಅನಂತ್‌ಕುಮಾರ್ ಬಣ ಯಡ್ಡಿಯನ್ನು ಕಂದಕಕ್ಕೆ ಕೆಡವಲು ಕಾದು ಕುಳಿತಿದ್ದರೆ, ಇನ್ನೊಂದೆಡೆ ಪಕ್ಷದ ಅಧ್ಯಕ್ಷ ಸದಾನಂದ ಗೌಡ ಕೂಡ ಕತ್ತಿಮಸೆಯಲಾರಂಭಿಸಿದ್ದಾರೆ. 'ನಾವೇ ಸರ್ಕಾರವನ್ನು ಬಲಪಡಿಸಿಕೊಳ್ಳಲು ಹೊರಟರೆ ರೆಡ್ಡಿ ಪಡೆ ಬಂದು 'ನಾವೇ ಸರ್ಕಾರ ರಚನೆಗೆ ಕಾರಣರು' ಎಂದು ಯಡ್ಡಿಯ ನೆತ್ತಿಏರಿ ಕುಳಿತುಕೊಳ್ಳುತ್ತಿದೆ. ಪಕ್ಷದಲ್ಲಿನ ಅಸಮಾಧಾನ ದಿಲ್ಲಿಗೂ ತಲುಪಿದ್ದು, ಅಲ್ಲಿಂದಲೂ ಸೂಚನೆಗಳು ಬರಲಾರಂಭಿಸಿವೆ. ವಿರೋಧ ಪಕ್ಷದ ನಾಯಕರಾಗಿ ಗುಡುಗಿದಂತೆ, ಆಡಳಿತ ನಡೆಸಲಾಗುವುದಿಲ್ಲ ಎಂಬ ಸಾಮಾನ್ಯ ಜ್ಞಾನವೂ ಇಲ್ಲದ ಯಡ್ಡಿ, ಈಗ ಅಧಿಕಾರಿಗಳನ್ನು ಎದುರು ಹಾಕಿಕೊಂಡಿದ್ದಾರೆ. ಇನ್ನೆಷ್ಟು ಮಂದಿ ಅವರಿಂದ ತಪರಾಕಿ ತಿನ್ನಬೇಕೋ?

■ ವರದಿಗಾರ

ಸ್ಟಾಲಿನ್ ನೆರಳಲ್ಲಿ ಸೈಲೆಂಟ್ ಸುನೀಲ?


ಸ್ಟಾಲಿನ್

ರವಿ ಶ್ರೀವತ್ಸ ಎಂಬ ಪೋರ್ಕಿ ನಿರ್ದೇಶಕನ 'ಮಾದೇಶ' ಚಿತ್ರಕ್ಕೆ ಸೆನ್ಸಾರ್ ಅಡ್ಡಗಾಲಿಡುವುದಕ್ಕೂ, ಸೈಲೆಂಟ್ ಸುನೀಲನೆಂಬ ರೌಡಿಯ ತಲೆ ಗರಮ್ಮಾಗುವುದಕ್ಕೂ ಏನು ಸಂಬಂಧ?

ಇಂಥದೊಂದು ಪ್ರಶ್ನೆ ಸದ್ಯ ಬೆಂಗಳೂರು ಪಾಪಕೂಪದೊಳಗೆ ಹೊಗೆಯಾಡುತ್ತಿದೆ.


ಮಾದೇಶ ಚಿತ್ರಕ್ಕೆಂದು ಹಾಕಿದ ಬಂಡವಾಳದ ಪೈಕಿ ಮೂರು ಕೋಟಿಯಷ್ಟನ್ನು ಸೈಲೆಂಟ್ ಸುನೀಲ ಮತ್ತು ಆತನ ರೈಟ್‌ಹ್ಯಾಂಡ್ ಒಂಟೆ ಕೊಟ್ಟಿದ್ದಾರೆಂಬುದು ಒಂದು ಸುದ್ದಿ. ಹೀಗೆ ತಂದ ಮೂರು ಕೋಟಿಯ ದುಡ್ಡು ಬಂದಿದ್ದು ಚೆನ್ನೈನಿಂದ ಎಂಬುದು ಮತ್ತೊಂದು ಸುದ್ದಿ. ಆಪಾಟಿ ಹಣವನ್ನು ಸುನೀಲನಿಗೆ ಕೊಡಿಸಿದ್ದು ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯ ಪುತ್ರ ಸ್ಟಾಲಿನ್ ಎಂಬುದು ಮಗದೊಂದು ಸುದ್ದಿ. ತನಗೆ ಪರಿಚಿತ ಫೈನಾನ್ಶಿಯರ್ ಒಬ್ಬರ ಮೂಲಕ ಸ್ಟಾಲಿನ್ ಕೊಡಿಸಿದ್ದ ದುಡ್ಡು ಹೀಗೆ ಮಾದೇಶ ಚಿತ್ರದ ಮೂಲಕ ಮಣ್ಣು ಪಾಲಾಗಿದ್ದಕ್ಕೆ ಸುನೀಲ ಡೈರೆಕ್ಟರ್ ರವಿ ಶ್ರೀವತ್ಸನಿಗೆ ಧಮಕಿ ಕೊಟ್ಟನೆಂಬುದು ಇನ್ನೊಂದು ಸುದ್ದಿ.


ಸುನೀಲ್

ವಿಚಿತ್ರವೆಂದರೆ ಇಷ್ಟೆಲ್ಲಾ ಸುದ್ದಿಯನ್ನು ಪುಂಖಾನುಪುಂಖವಾಗಿ ತೇಲಿಬಿಡುತ್ತಿರುವವನು ಸ್ವತಃ 'ಮಾದೇಶ' ಚಿತ್ರದ ಕರ್ತೃ ರವಿಶ್ರೀವತ್ಸ. ಸದ್ಯ ಸೆನ್ಸಾರ್ ಸಂಕೋಲೆಯಿಂದ ಬಚಾವಾಗಿ ಬಂದ 'ಮಾದೇಶ' ಚಿತ್ರದ ಬಹುಭಾಗವನ್ನು ಕತ್ತರಿಸಿ ಹಾಕಲಾಗಿದೆ. ವಿಕೃತ ಕ್ಲೈಮ್ಯಾಕ್ಸ್, ತಾಯಿಯೇ ನಿಂತು ಮಗನ ಗೂಂಡಾಗಿರಿಯನ್ನು ಪ್ರೋತ್ಸಾಹಿಸುವುದು, ಪ್ರೇಯಸಿಯೇ ರೌಡಿಜಮ್ಮನ್ನು ಕೊಂಡಾಡುವುದು, ಕಣ್ಣು ಕೀಳುವುದು ಇತ್ಯಾದಿ ದೃಶ್ಯಾವಳಿಗಳನ್ನೆಲ್ಲ ಕತ್ತರಿಸಿ ಬಿಸಾಕಿದ ನಂತರವೇ ಸೆನ್ಸಾರ್ ಮೆದುವಾಗಿದ್ದು.

ಆದರೆ ರವಿಶ್ರೀವತ್ಸನ ಪ್ರಕಾರ ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯ ಪುತ್ರ ಸ್ಟಾಲಿನ್, ಕೇಂದ್ರ ಮಂತ್ರಿಯೊಬ್ಬರ ಮೂಲಕ ವಾರ್ತಾ ಇಲಾಖೆಯ ಅಧಿಕಾರಿ ಚಂದ್ರಶೇಖರ್‌ರನ್ನು ಮೆತ್ತಗೆ ಮಾಡಿದ್ದಾರೆ. ಏಕೆಂದರೆ 'ಮಾದೇಶ' ಚಿತ್ರಕ್ಕೆ ರೌಡಿಗಳಾದ ಸೈಲೆಂಟ್ ಸುನೀಲ ಮತ್ತು ಒಂಟೆ ಇಬ್ಬರೂ ಬೇನಾಮಿ ಪ್ರೊಡ್ಯೂಸರ್‌ಗಳು! ಸದ್ಯ ಅವರಿಬ್ಬರಿಗೂ ಕರುಣಾನಿಧಿ ಪುತ್ರ ಮತ್ತು ಚೆನ್ನೈ ಮೇಯರ್ ಸ್ಟಾಲಿನ್‌ನೇ ಗಾಡ್‌ಫಾದರ್. ಬೆಂಗಳೂರಿನ ಪೊಲೀಸರಿಗೆ ಹೆದರಿ ಚೆನ್ನೈನಲ್ಲಿ ಅಡಗಿ ಕೂತಿರುವ ಸೈಲೆಂಟ್ ಸುನೀಲ, ಆತನ ರೈಟ್‌ಹ್ಯಾಂಡ್ ಒಂಟೆ, ಸಹಚರರಾದ ವೇಡಿ, ಪೀಸಿ ವಿಜಿ, ಪೀಟಿ ಸಂತೋಷ ಮತ್ತು ಅನಾಲಿ ಇತ್ಯಾದಿಗಳೆಲ್ಲರಿಗೂ ಕರುಣಾನಿಧಿ ಪುತ್ರ ಸ್ಟಾಲಿನ್‌ಗೂ ಪರಿಚಯವಾಗಿದ್ದೆಲ್ಲಿ? ಪರಿಚಯಿಸಿ ಕೊಟ್ಟಿದ್ದು ಯಾರು? ಚೆನ್ನೈನ ಘಟಾನುಘಟಿ ಪಾತಕಿಗಳನ್ನೆಲ್ಲ ಬಿಟ್ಟು ಈ ಬೆಂಗಳೂರಿನ ಹಂತಕರನ್ನು ಸ್ಟಾಲಿನ್ ಏಕೆ ಸಾಕಿಕೊಂಡಿದ್ದಾನೆ? ಅಷ್ಟಕ್ಕೂ ಸ್ಟಾಲಿನ್ ಅಧಿಪತ್ಯವಿರುವ ಚೆನ್ನೈ ಬಂದರಿನಲ್ಲಿ ಸುನೀಲನ ಗ್ಯಾಂಗ್ ಅಡ್ಡೆ ಹಾಕುತ್ತಿದೆಯಾ? ಚೆನ್ನೈ ಬಂದರಿನ ಸ್ಮಗ್ಲಿಂಗ್ ದಂಧೆಯ ಮೇಲೆ ಸುನೀಲನ ಗ್ಯಾಂಗ್‌ಗೆ ಹಿಡಿತವುಂಟಾ? ಚೆನ್ನೈ ಹಡಗುಕಟ್ಟೆಯ ಆದಾಯದ ಒಂದು ಪಾಲು ಸುನೀಲನಿಗೆ ಬರುತ್ತಿದೆಯಾ? ಎಲ್ಲಿಯ ಚೆನ್ನೈ? ಎಲ್ಲಿಯ ಸ್ಟಾಲಿನ್? ಎಲ್ಲಿಯ ಸುನೀಲ? ಎಲ್ಲಿಂದೆಲ್ಲಿಯ ಸಂಬಂಧ?


ಶ್ರೀವತ್ಸ


ಒಂಟೆ

ರವಿಶ್ರೀವತ್ಸ ಓರ್ವ ಡೈರೆಕ್ಟರ್ ಎಂಬುದಕ್ಕಿಂತಲೂ ಆತನ ಪೋರ್ಕಿ ಸಹವಾಸಕ್ಕೇ ಹೆಚ್ಚು ಕುಖ್ಯಾತ. 'ಮಾದೇಶ' ಚಿತ್ರದ ಮುಹೂರ್ತದಲ್ಲಿ ಸುನೀಲನ ಇಡೀ ಗ್ಯಾಂಗ್ ವಿಜೃಂಭಿಸಿದ್ದೂ ಅಷ್ಟೇ ಸತ್ಯ. ಹೆಸರಿಗೆ ಗೋವರ್ಧನಮೂರ್ತಿ ಎಂಬಾತ 'ಮಾದೇಶ' ಚಿತ್ರದ ನಿರ್ಮಾಪಕನಾದರೂ ಆತ ಒಂದು ಕೋಟಿಗಿಂತ ಹೆಚ್ಚಿಗೆ ಹೂಡಿರಲಾರ ಎಂಬುದು ಗಾಂಧಿನಗರದ ತರ್ಕ. ಸುನೀಲನ ಗ್ಯಾಂಗ್ ಜೈಲಿನಲ್ಲಿದ್ದಷ್ಟೂ ಕಾಲ ಪ್ರತಿನಿತ್ಯ ಜೈಲಿಗೆ ಬಿರಿಯಾನಿ ಸರಬರಾಜು ಮಾಡುತ್ತಿದ್ದ ಬಾಬುರೆಡ್ಡಿ ಎಂಬ ನೆಲಹಿಡುಕನೊಬ್ಬ 'ಮಾದೇಶ' ಚಿತ್ರದ ಸೂತ್ರಧಾರನೆಂಬುದೂ ಗುಟ್ಟೇನಲ್ಲ. ಮತ್ತು ಸೈಲೆಂಟ್ ಸುನೀಲನ ರಿಯಲ್ ಲೈಫ್ ಸ್ಟೋರಿಯನ್ನೇ ಮಾದೇಶ ಚಿತ್ರಕ್ಕೆ ಕತೆ ಮಾಡಿದ್ದಾರೆಂಬುದೂ ಅಷ್ಟೇ ಸತ್ಯ.

ಶಿವಣ್ಣನಂಥ ಸ್ಟಾರ್ ತನ್ನದೇ ಕತೆಗೆ ತನ್ನದೇ ಪಾತ್ರವಾಗಿ ನಟಿಸುತ್ತಾನೆಂದರೆ ಅದಕ್ಕೆ ಮೂರು ಕೋಟಿ ಹಾಕಲು ಸುನೀಲನಿಗೇನು ಕಷ್ಟ?

ಒಂದು ಮೂಲದ ಪ್ರಕಾರ ಸೈಲೆಂಟ್ ಸುನೀಲ ಸದ್ಯ ಬೆಂಗಳೂರಿನಲ್ಲಿಲ್ಲ, ಆತ ತಮಿಳುನಾಡಿನ ಚೆನ್ನೈನಲ್ಲಿ ಇರುವುದೂ ಸುಳ್ಳಲ್ಲ. ಇಲ್ಲಿಗೆ ತಿಂಗಳ ಹಿಂದಷ್ಟೇ ಆತ ಮದುವೆಯಾಗಿದ್ದಾನೆಂಬುದು ಮತ್ತೊಂದು ವದಂತಿ. ವಿಧಾನಸೌಧದ ಸಚಿವಾಲಯದ ಅಧಿಕಾರಿಯೊಬ್ಬರ ಮಗಳನ್ನು ಸುನೀಲ ಪ್ರೀತಿಸುತ್ತಿದ್ದ. ರಮ್ಯ ಹೆಸರಿನ (ಹೆಸರು ಬದಲಾಯಿಸಿದೆ) ಆಕೆಯಲ್ಲದೇ ವಿಕ್ಟೋರಿಯಾ ಆಸ್ಪತ್ರೆಯ ಓರ್ವ ನರ್ಸ್, ಗಾಯಿತ್ರಿನಗರದ ಮತ್ತೊಬ್ಬ ಯುವತಿ, ಬಸವೇಶ್ವರ ನಗರದ ಕಾಲೇಜು ಹುಡುಗಿ, ಇತ್ಯಾದಿ ಐದಾರು ಮಂದಿ ಹುಡುಗಿಯರೊಂದಿಗೆ ಸುನೀಲನಿಗೆ ಅಫೇರ್ ಇತ್ತು.

ಇವರ ಪೈಕಿ ಸುನೀಲ ಯಾರನ್ನು ಮದುವೆಯಾಗಿದ್ದಾನೆಂಬುದೂ ಗೊತ್ತಿಲ್ಲ. ಕಳೆದ ಒಂದು ವರ್ಷದಿಂದ ಸುನೀಲ ಯಾರ ಕಣ್ಣಿಗೂ ಬಿದ್ದಿಲ್ಲ. ಒಂಟೆ, ವೇಡಿ ಮುಂತಾದವರು ಕಣ್ಣಿಗೆ ಬಿದ್ದರೂ ಸುನೀಲ ಕಣ್ಣಿಗೆ ಬಿದ್ದಿಲ್ಲ. ಸದ್ಯ ಆತ ಚೆನ್ನೈನಲ್ಲಿರುವುದು ನಿಜವಾದರೂ ಆತನಿಗೂ ಕರುಣಾನಿಧಿ ಮಗ ಸ್ಟಾಲಿನ್‌ಗೂ ನಂಟಿರುವ ಬಗ್ಗೆ ಯಾರಲ್ಲೂ ಸ್ಪಷ್ಟತೆಯಿಲ್ಲ. ಮಿಕ್ಕಂತೆ ಬೆಂಗಳೂರಿನ ಕೆಲ ಇಸ್ಪೀಟ್ ಕ್ಲಬ್‌ಗಳು, ಮೆಜೆಸ್ಟಿಕ್‌ನ ಸ್ಕಿಲ್‌ಗೇಮ್ ಅಡ್ಡೆಗಳಿಂದ ಆತನಿಗೆ ಮಾಮೂಲಿ ಸಂದಾಯವಾಗುತ್ತದೆ. ಗಾಯತ್ರಿನಗರದ ಹರಿಶ್ಚಂದ್ರ ಘಾಟ್ ಮತ್ತು ಪೀಣ್ಯದ ಸ್ಮಶಾನಗಳ ಉತ್ಪತ್ತಿಯಲ್ಲೂ ಪಾಲು ಹೋಗುತ್ತಿದೆ. ಬೆಂಗಳೂರಿನ ಐದಾರು ಹೈಟೆಕ್ ಮೈಕಸುಬು ಅಡ್ಡೆಗಳ ಹಫ್ತಾ ಕೂಡ ಆತನಿಗಿದೆ. ಜೊತೆಗೆ ರೌಡಿ ಮಾಹಿಮ್ ಮತ್ತು ಗೋರಿಪಾಳ್ಯದ ಇಮ್ರಾನ್‌ರಂಥ ಪಾತಕಿಗಳ ಲ್ಯಾಂಡ್ ಡೀಲಿನಿಂದಲೂ ಪಾಲು ಹೋಗುತ್ತಿದೆ.

ಆದರೆ ಇಂಥ ಮಾಮೂಲಿಯ ಬಹುತೇಕ ಪಾಲು ಸದ್ಯ ಮಾಲೂರಿನಲ್ಲಿ ಅಡಗಿ ಕೂತು ಅಲ್ಲಿಂದಲೇ ಬೆಂಗಳೂರಿನ ಗ್ಯಾಂಗ್‌ವಾರ್ ನಿಭಾಯಿಸುತ್ತಿರುವ ತೊದ್ಲ ಮಂಜ, ಕಿರಿಕ್, ವಿನಿ, ರಘು, ಜ್ಯೂಸ್ ಮಂಜರಂಥ ಫೀಲ್ಡರುಗಳ ಖರ್ಚಿಗೆ ಸರಿಹೋಗುತ್ತಿದೆ. ಹೊಸ ದುಸ್ಸಾಹಸಕ್ಕೆ ಕೈಯಿಟ್ಟು ಪೊಲೀಸರನ್ನು ಮೇಲೆಳೆದುಕೊಳ್ಳದಂತೆ ತನ್ನೆಲ್ಲಾ ಶಿಷ್ಯರಿಗೂ ಕಟ್ಟುನಿಟ್ಟಿನ ತಾಕೀತು ಮಾಡಿದ್ದಾನೆ.

ಬಹುಶಃ ಆತ ಎಡವಿದ್ದು ರವಿ ಶ್ರೀವತ್ಸನಂಥ ಪೋರ್ಕಿಯನ್ನು ನಂಬಿ ಮೂರು ಕೋಟಿ ಸುರಿದದ್ದು!

ತನ್ನದೇ ಕತೆಯನ್ನು ಸಿನಿಮಾ ಮಾಡಬೇಕೆಂದಿದ್ದರೆ ಕನ್ನಡದಲ್ಲಿ ಎಷ್ಟೆಲ್ಲ ಒಳ್ಳೆಯ ಡೈರೆಕ್ಟರುಗಳಿದ್ದರು? ಎರಡು ಕೋಟಿಯಲ್ಲೇ ಅಚ್ಚುಕಟ್ಟಾಗಿ ಸಿನಿಮಾ ಮಾಡಿಕೊಡುತ್ತಿರಲಿಲ್ಲವೆ? ರವಿಶ್ರೀವತ್ಸನಂಥ ತಲೆಕೆಟ್ಟ, ಫುಂಡನೊಬ್ಬನ ಕೈಗೆ ಮೂರು ಕೋಟಿ ಕೊಡುವುದಕ್ಕೂ, ಮಂಗನ ಕೈಗೆ ಮಾಣಿಕ್ಯ ಹೋಗುವುದಕ್ಕೂ ಹೆಚ್ಚು ವ್ಯತ್ಯಾಸಗಳಿಲ್ಲ. ಈಗ 'ಮಾದೇಶ' ಎಕ್ಕುಟ್ಟಿ ಹೋದದ್ದು ಗೊತ್ತಾಗಿ ರವಿಶ್ರೀವತ್ಸನಿಗೆ ಧಮಕಿ ಕೊಟ್ಟು ಏನು ಲಾಭ?

ರೌಡಿಗಳಿಂದ ಒದೆ ತಿನ್ನುವುದು ರವಿಶ್ರೀವತ್ಸನಿಗೆ ಹೊಸತೇನಲ್ಲ. ಆದರೆ ಮೂರು ಕೋಟಿ ಹಾಕಿದ್ದೇ ಸುನೀಲ, ಅದು ಸ್ಟಾಲಿನ್ ಕೊಡಿಸಿದ ದುಡ್ಡು, ಅದಕ್ಕೇ ಕೇಂದ್ರ ಮಂತ್ರಿಯೊಬ್ಬರ ಮೂಲಕ ಬೆಂಗಳೂರಿನ ಸೆನ್ಸಾರ್‌ನವರನ್ನು ಸ್ಟಾಲಿನ್ ಸರಿ ಮಾಡಿದ್ದಾರೆಂದೂ, ಸದ್ಯ ಸುನೀಲನಿಗೆ ಸ್ಟಾಲಿನ್ನೇ ಗಾಡ್‌ಫಾದರ್ ಎಂದೂ ಕಂಡಕಂಡಲ್ಲಿ ರೈಲು ಬಿಡುವ ರವಿಶ್ರೀವತ್ಸನ ಹುಚ್ಚಾಟಕ್ಕೆ ತಲೆ ಕೊಡುವವರ್‍ಯಾರು?

ಮಾದೇಶ ಚಿತ್ರಕ್ಕೂ ಸ್ಟಾಲಿನ್‌ಗೂ ಸೈಲೆಂಟ್ ಸುನೀಲನಿಗೂ ಯಾವ ನಂಟು? ಯಾರ ಅಂಟು?

■ ರಾ. ಸೋಮನಾಥ್


ರೌಡಿ ಮಾಹಿಮ್ ಪಾತ್ರಕ್ಕೂ ಶಿವಣ್ಣನೇ ಲಾಯಕ್ಕು?



ತಾವು ಸ್ಕೆಚ್ ಹಾಕಿ ಕೊಂದದ್ದು, ಒದೆ ತಿಂದದ್ದು, ಕಂಬಿ ಎಣಿಸಿದ್ದನ್ನೇ ಮಹಾನ್ ಸಾಹಸವೆಂದು ಅದನ್ನೇ ಸಿನಿಮಾ ಮಾಡುವ ಖಯಾಲಿಯೊಂದು ಬೆಂಗಳೂರಿನ ರೌಡಿಗಳ ನೆತ್ತಿಗೇರಿದೆ. ಬಹುಶಃ ಸುನೀಲನಿಗೆ ಇಂಥ ಚಪಲ ಅಂಟಿಸಿದ್ದು ಆತನ ಗುರು ಮಾಹಿಮ್!

ಕೆಲ ದಿನಗಳ ಹಿಂದೆ ರೌಡಿ ಮಾಹಿಮ್ ತನ್ನದೇ ಕತೆಯಿರುವ 'ನಂದ' ಎಂಬ ಚಿತ್ರದ ಜಾಹೀರಾತು ಕೊಟ್ಟಿದ್ದ. ಅದಕ್ಕೂ ಶಿವಣ್ಣನೇ ಹೀರೋ. ತನ್ನ ಗುರು ರೌಡಿ ಮಾಹಿಮ್‌ನ ಪಾತ್ರವಲ್ಲಿ ಶಿವಣ್ಣ ಅಭಿನಯಿಸಬಹುದಾದರೆ ಶಿಕ್ಷಾಚಾರ ಮಾಡಿದ ಸುನೀಲ ರವಿಶ್ರೀವತ್ಸನಿಗೆ ಕತೆ ಮಾಡಲು ಹೇಳಿ ದುಡ್ಡು ಹೊಂಚಿದ್ದಾನೆ. ಗುರು ಮಾಹಿಮ್ ಮತ್ತು ಶಿಷ್ಯ ಸುನೀಲ ಇಬ್ಬರ ಪಾತ್ರವನ್ನೂ ಶಿವಣ್ಣನೇ ನಟಿಸುತ್ತಿದ್ದಾನೆ. ವಿಕಟವೆಂದರೆ ಮಾಹಿಮ್‌ಗಿಂತಲೂ ಮೊದಲು ಸುನೀಲನ ಕತೆಯೇ ತೆರೆ ಕಾಣುತ್ತಿದೆ. ಜೊತೆಗೇ ಮಚ್ಚಾ ಎಂಬ ಮತ್ತೊಬ್ಬ ರೌಡಿಯ ಚಿತ್ರವೂ ಇಷ್ಟರಲ್ಲೇ ಬಿಡುಗಡೆಯಾಗುತ್ತಿದೆ.


ರೌಡಿಗಳು, ಛಟ್ಟರ್‌ಗಳು, ಪೋರ್ಕಿಗಳ ಪಾತ್ರದಲ್ಲಿ ನಟಿಸುವ ಸೌಭಾಗ್ಯ ಕನ್ನಡದ ನಟರುಗಳದ್ದೇ ಇನ್ನಾರಿಗಿದ್ದೀತು!



180 ಕೋಟಿಯ ಭೂರೀ ಭೋಜನವೂ ಟಿ.ವಿ. ಭಟ್ಟನ ಲೀಲೆಯೂ

'ಸರ್ಪ ಸಂಸ್ಕಾರ' (ಕು)ಖ್ಯಾತಿಯ ಮೂಲಕ ಜಗದಗಲ ಭಕ್ತ ಸಂಕುಲವನ್ನು ಹೊಂದಿರುವ, ವಾರ್ಷಿಕ ಸರಿಸುಮಾರು 55 ಕೋಟಿಯಷ್ಟು ಹಣ ಕಾಣಿಕೆ ರೂಪದಲ್ಲಿ ಜಮೆಯಾಗುವ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನವು ರಾಜ್ಯದಲ್ಲೇ ಅತಿ ಶ್ರೀಮಂತ ಪುಣ್ಯ ಕ್ಷೇತ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಈಗ ಸುಬ್ರಹ್ಮಣ್ಯದ ಗ್ರಾಮ ಪಂಚಾಯತ್‌ನಿಂದ ಮೊದಲ್ಗೊಂಡು ವಿಧಾನಸೌಧದ ತನಕದ ಆಡಳಿತದಲ್ಲಿ ಚೆಡ್ಡಿಗಳೇ ತುಂಬಿ ತುಳುಕುತ್ತಿರುವಾಗ ಸುಬ್ರಹ್ಮಣ್ಯದಂತಹ ಸಂಪದ್ಭರಿತ ಪುಣ್ಯ ಕ್ಷೇತ್ರ ಅದು ಹೇಗೆ ಚೆಡ್ಡಿಗಳ ಕಾಟದಿಂದ ಪಾರಾಗಲು ಸಾಧ್ಯ? ಅದಕ್ಕೆ ಉದಾಹರಣೆಯೆಂಬಂತೆ ಇವತ್ತು ಈ ದೇವಸ್ಥಾನದ ಆಡಳಿತದ ಮೊಕ್ತೇಸರನಾಗಿರುವವನು ಮಾಜಿ ಉಪನ್ಯಾಸಕ ಟಿ.ವಿ.ಭಟ್ಟ ಎಂಬ ಮಹಾನ್ ಚೆಡ್ಡಿ! ಈ 'ಅನಾಸಿನ್' ಖ್ಯಾತಿಯ ಭಟ್ಟನನ್ನು ನೇಮಿಸಿದ್ದು ಬೇರೆ ಯಾರೂ ಅಲ್ಲ, ಇತ್ತೀಚಿನತನಕ ಧಾರ್ಮಿಕ ದತ್ತಿ ಇಲಾಖೆಯ ಕಮಿಷನರ್ ಆಗಿದ್ದ ಶ್ಯಾಮ್ ಭಟ್ ಎಂಬ ಆತನ ಹತ್ತಿರದ ಸಂಬಂಧಿ!



ಸದ್ಯ ಸುಬ್ರಹ್ಮಣ್ಯ ದೇವಳದಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ ಯಾರು ಯಾವುದಕ್ಕೂ ಕೇಳುವವರೇ ಇಲ್ಲದಂತಾಗಿ, ಟಿ.ವಿ. ಭಟ್ಟನಿಗಿಂತ ಸಂಜೀವ ಮಡಿವಾಳನೆಂಬ ಭ್ರಷ್ಟ ಕಾರ್ಯನಿರ್ವಹಣಾಧಿಕಾರಿಯ ಅಂಧಾದರ್ಬಾರೇ ಭಲೋ ಇತ್ತು ಎಂದು ಭಕ್ತರು ಗೋಳಾಡುವಂತಾಗಿದೆ. ಯಾಕೆಂದರೆ ಟಿ.ವಿ. ಭಟ್ಟ ಆಡಳಿತ ಮೊಕ್ತೇಸರನಾದ ಮೇಲೆ ಮಾಡಿದ ಏಕೈಕ ಸಾಧನೆ ಎಂದರೆ ದೇವಳದ ಲಡಾಸು ಅಂಬಾಸಿಡರ್ ಕಾರನ್ನು ಮಾರಿ ಹೊಸ ಇನ್ನೋವಾವನ್ನು ಖರೀದಿಸಿದ್ದು. ಉಳಿದೆಲ್ಲವೂ ಆಗ ಕಮೀಷನರ್ ಆಗಿದ್ದ ಶ್ಯಾಮ್ ಭಟ್ಟ ಮಾಡಿಟ್ಟ ಕಾರುಬಾರಿಕೆಯ ಮುಂದುವರಿಕೆಯಾಗಿದೆ.

ಇಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಒಂದು ಉದಾಹರಣೆ ಕೊಡಬಹುದು. ಇವತ್ತಿಗೂ ಜನತಾ ಬಜಾರಿನಿಂದ ದೇವಳಕ್ಕೆ ಪ್ರತಿದಿನ ಸಣ್ಣ ಲಾರಿಯಲ್ಲಿ ಆಹಾರ ಸಾಮಗ್ರಿಗಳು ಸರಬರಾಜಾಗುತ್ತದೆ. ಅದು ಇಲ್ಲಿಂದ ಇನ್ನೊಂದು ದೊಡ್ಡ ಲಾರಿಯಲ್ಲಿ ಹೊರಗೆ ಹೋಗುತ್ತದೆ. ಆ ವಾಹನ ಎಲ್ಲಿಗೆ ಹೋಗುತ್ತದೆಯೆಂದರೆ ಚೆಡ್ಡಿಗಳು ನಡೆಸುತ್ತಿರುವ ಖಾಸಗಿ ಶಾಲೆಗಳ ಬಿಸಿಯೂಟಕ್ಕೆ! ಅಂದರೆ ಸರ್ಕಾರಿ ದೇವಳದ ಸಂಪತ್ತು ಡೊನೇಷನ್ ಕಿತ್ತು ಚೆಡ್ಡಿಗಳು ನಡೆಸುವ ಶಾಲೆಗಳಿಗೆ!

ಅದೇ ಸಂಪತ್ತನ್ನು ಸುಬ್ರಹ್ಮಣ್ಯಕ್ಕೆ ಬರುವ ಯಾತ್ರಾರ್ಥಿಗಳ ಅನುಕೂಲಕ್ಕೆ ಬಳಸಿದ್ದರೆ ದೇವಳದ ಪರಿಸ್ಥಿತಿಯಾದರೂ ಒಂದಿಷ್ಟು ಸುಧಾರಿಸುತ್ತಿತ್ತು, ಇವತ್ತಿಗೂ ಯಾತ್ರಾರ್ಥಿಗಳು ಚಿಕ್ಕಪುಟ್ಟ ಸೌಲಭ್ಯಗಳಿಗಾಗಿ ಪರದಾಡುವ ಪರಿಸ್ಥಿತಿಯಿದೆ. ಇರುವ ಒಂದೆರಡು ಲಾಡ್ಜ್‌ಗಳ ಮುಂದೆ ಯಾವತ್ತೂ ಹೌಸ್‌ಫುಲ್ ಬೋರ್ಡ್ ನೇತಾಡುತ್ತವಾದ್ದರಿಂದ ಇಲ್ಲಿ ಸರಿಯಾದ ಲಾಡ್ಜಿಂಗ್ ವ್ಯವಸ್ಥೆ ಇಲ್ಲ, 'ಸರ್ಪ ಸಂಸ್ಕಾರ' ಖ್ಯಾತಿಯ ಸುಬ್ರಹ್ಮಣ್ಯದಲ್ಲಿ ಸಂಸ್ಕಾರ ವಿಧಿಯಲ್ಲಿ ಪಾಲ್ಗೊಳ್ಳುವ ವಟುಗಳಿಗೆ ತಂಗಲು ಒಂದು ವ್ಯವಸ್ಥೆಯಿಲ್ಲ,

ಈ ಹಿಂದೆ ಸಂಜೀವ ಮಡಿವಾಳ ಮ್ಯಾನೇಜರ್ ಆಗಿದ್ದಾಗ 6 ಕೋಟಿ ಖರ್ಚು ಮಾಡಿ ಸಭಾಂಗಣವೊಂದನ್ನು ಕಟ್ಟಿಸಿದ್ದರು. ಅದು ಇನ್ನೇನು ಉದ್ಘಾಟನೆಯಾಗಬೇಕು ಅನ್ನುವಷ್ಟರಲ್ಲಿ ಆತನ ಎತ್ತಂಗಡಿಯಾಯಿತು. ದೇವಳಕ್ಕೆ ಬಿಜೆಪಿಯ ಆಡಳಿತ ಮಂಡಳಿ ಬಂದು ಎರಡು ವರ್ಷವಾಯಿತು. ಆದರೂ ಸಭಾಂಗಣದ ಉದ್ಘಾಟನೆ ಮಾಡಿಸಲು ಸಾಧ್ಯವಾಗಿಲ್ಲ,

ಸುಬ್ರಹ್ಮಣ್ಯದಲ್ಲಿ ಒಳಚರಂಡಿಗೆಂದು ಮೂರು ಕೋಟಿಯ ಪ್ಲಾನ್ ರೂಪಿಸಿ ಒಳಚರಂಡಿ ಮಂಡಳಿಗೆ ರೂ. 75 ಲಕ್ಷ ಇಡಿಗಂಟನ್ನು ಕಟ್ಟಿ ವರ್ಷ ಆಗಿ ಹೋಗಿದೆ. ಈತನಕ ಏನೊಂದೂ ಆಗಿಲ್ಲ, ಸಾವಿರಾರು ಭಕ್ತಾದಿಗಳು ಬಂದುಹೋಗುವ ದೇವಳದ ಪರಿಸರದಲ್ಲಿ ಒಂದು ವ್ಯವಸ್ಥಿತ ಸಾರ್ವಜನಿಕ ಶೌಚಾಲಯವಿಲ್ಲ, ಪ್ರತೀದಿನ ದೇವಳದಲ್ಲಿ ಅನ್ನ ಸಂತರ್ಪಣೆ ನಡೆಯುತ್ತದೆ. ಭಕ್ತಾದಿಗಳು ತಿಂದೆಸೆದ ಬಾಳೆಲೆಗಳನ್ನು ವಿಲೇವಾರಿ ಮಾಡಲು ಟ್ರಾಕ್ಟರ್ ಒಂದಿದ್ದು, ಅದು ಕೆಟ್ಟುಹೋದರೂ ರಿಪೇರಿ ಮಾಡಿಸುವ ಗೋಜಿಗೆ ಹೋಗಿಲ್ಲ ಎಂದರೆ ಸುಬ್ರಹ್ಮಣ್ಯ ದೇವಳದಲ್ಲಿ ಆಡಳಿತ ಯಂತ್ರ ಅದೆಷ್ಟರ ಮಟ್ಟಿಗೆ ಕೆಟ್ಟು ಕೆರ ಹಿಡಿದಿದೆ ಎಂದು ನೀವೇ ಊಹಿಸಿ.

ಸುಬ್ರಹ್ಮಣ್ಯ ದೇವಳದಲ್ಲಿ ಪರ್ಮನೆಂಟು, ಟೆಂಪರರಿ ಎಂದು 300 ಮಂದಿ ನೌಕರರಿದ್ದಾರೆ. ಅವರು ಆಡಿದ್ದೇ ಆಟವಾಗಿದೆ. ಬೇಕೆಂದರೆ ಒಂದಿಷ್ಟು ಕೆಲಸ ಮಾಡುತ್ತಾರೆ, ಬೇಡವೆಂದರೆ ಸುಮ್ಮನೇ ತಿರುಗಾಡುತ್ತಿರುತ್ತಾರೆ. ಅವರನ್ನು ಕೇಳುವವರೇ ಇಲ್ಲದಂತಾಗಿ ಹೋಗಿದೆ. ದೇವಳಕ್ಕೆ ಬರುವ ಮಂತ್ರಿ ಮಾಗಧರಿಗೆ, ವಿಐಪಿಗಳಿಗೆ ಸಲಾಮು ಹೊಡೆಯುವುದನ್ನೇ ಬಿಟ್ಟರೆ ಚೆನ್ನೆಲುಬಿಲ್ಲದ ಮ್ಯಾನೇಜರ್ ನಿಂಗಯ್ಯ ಎಂಬಾತ ತನ್ನ ಕಾಯಕ ಮಾಡಿಕೊಂಡಿದ್ದಾನೆ. ಹಿಂದೊಮ್ಮೆ ದೇವಳದ ಹುಂಡಿಗೇ ಕನ್ನ ಹಾಕಿ ಸಿಕ್ಕಿಬಿದ್ದಿದ್ದ ವಿ. ಸುಬ್ರಹ್ಮಣ್ಯ ಭಟ್ಟನಿಗೆ ಪ್ರಥಮ ದರ್ಜೆ ಗುಮಾಸ್ತನಾಗಿ ಪ್ರಮೋಷನ್ ನೀಡಲಾಗಿದೆ.

ಐದು ವರ್ಷಗಳ ಹಿಂದೆ ದೇವಳದ ಆಡಳಿತಾಧಿಕಾರಿಯಾಗಿದ್ದಾಗ ಆಗಿನ ಡಿಸಿ ರಮಣರೆಡ್ಡಿಯವರು ಪಿಲಿಕುಳ ನಿಸರ್ಗ ಧಾಮದಲ್ಲಿ ಜರುಗಿದ ಸಾರ್ವಜನಿಕ ಸಮಾರಂಭವೊಂದಕ್ಕೆ ಸುಬ್ರಹ್ಮಣ್ಯ ದೇವಳದಿಂದ ಐದು ಲಕ್ಷ ಮೌಲ್ಯದ ಆಹಾರ ಸಾಮಗ್ರಿಗಳನ್ನು ಬಿಡುಗಡೆ ಮಾಡಿದ್ದರು. ಇದನ್ನು ಪ್ರಶ್ನಿಸಿ ಭಕ್ತರೊಬ್ಬರು ಕೋರ್ಟ್‌ಗೆ ಹೋಗಿದ್ದರು. ಕೋರ್ಟ್ ಡಿಸಿ ರಮಣರೆಡ್ಡಿಗೆ ಛೀಮಾರಿ ಹಾಕಿತ್ತು, ಇದನ್ನು ಈಗ ನೆನಪಿಸುವುದಕ್ಕೆ ಕಾರಣವೂ ಇದೆ. ಅದೇನೆಂದರೆ ಈಗ ಈ ಟಿ.ವಿ. ಭಟ್ಟ ಮತ್ತಾತನ ಚೆಡ್ಡಿ ಗ್ಯಾಂಗ್ 180 ಕೋಟಿಯ ಮೆಗಾ ಪ್ರಾಜೆಕ್ಟ್ ಒಂದನ್ನು ತಯಾರಿಸಿ ಸುಬ್ರಹ್ಮಣ್ಯವನ್ನು ನಂದನವನ ಮಾಡುತ್ತೇವೆಂದು ಹೇಳುತ್ತಾ ಭೂರಿ ಭೋಜನಕ್ಕೆ ತಯಾರಿ ನಡೆಸುತ್ತಿದೆ. ಒಳಚರಂಡಿ-ಶೌಚಾಲಯ, ಯಾತ್ರಾರ್ಥಿಗಳಿಗೆ ಸೂಕ್ತವಾದ ಲಾಡ್ಜಿಂಗ್ ವ್ಯವಸ್ಥೆ, ಮಳೆಗಾಲದಲ್ಲಿ ಪದೇಪದೇ ಮುಳುಗಡೆ ಸಂಭವಿಸಿ ಯಾತ್ರಾರ್ಥಿಗಳನ್ನು ದಿನಗಟ್ಟಲೆ ದ್ವೀಪವಾಗಿ ಮಾಡುವ ಕುಲ್ಕುಂದ ಸೇತುವೆಗೆ ಕಾಯಕಲ್ಪ - ಇವನ್ನೆಲ್ಲಾ ಮರೆತು ಸುಬ್ರಹ್ಮಣ್ಯದ ರಮಣೀಯ ಪ್ರಾಕೃತಿಕ ಸೌಂದರ್ಯಕ್ಕೆ ಧಕ್ಕೆ ತರುವ 180 ಕೋಟಿಯ ಬೃಹತ್ ಯೋಜನೆಗೆ ಈ ಹುಚ್ಚರು ಕೈಹಾಕಿದ್ದಾರೆಂದರೆ ಇವರಿಗೆ ಏನೆನ್ನಬೇಕು?


ಯಾಕೆಂದರೆ ಈ ಯೋಜನೆಯಿಂದ ಉದ್ಧಾರವಾಗುವುದು ಖಂಡಿತಾ ಸುಬ್ರಹ್ಮಣ್ಯವಲ್ಲ, ಬದಲಾಗಿ ಚೆಡ್ಡಿಗಳ ಹಿಂದು ಎನ್ನುವುದರಲ್ಲಿ ಯಾರಿಗೂ ಅನುಮಾನವಿಲ್ಲ,

ಸುಬ್ರಹ್ಮಣ್ಯ ದೇವಳದ ಆನೆ ಇತ್ತೀಚೆಗೆ ಅಸೌಖ್ಯದಿಂದ ಅಸುನೀಗಿತು. ಅರ್ಚಕ ಶಶಿಧರ ಭಟ್ಟ ಕಾಲು ಜಾರಿ ದೇವಳದ ಕೆರೆಗೇ ಹಾರವಾದ. ದೇವಳದ ಚಾಕರಿಗಿದ್ದ ಮೋಹನ ಎಂಬಾತನೂ ಚನ್ನರಾಯಪಟ್ಟಣದಲ್ಲಿ ಅಪಘಾತದಲ್ಲಿ ಸತ್ತ, ಬೆನ್ನುಬೆನ್ನಿಗೆ ನಡೆದ ಈ ದುರಂತಗಳನ್ನು ಸಮೀಕರಿಸುತ್ತಾ ಸುಬ್ರಹ್ಮಣ್ಯದ ಕಾರಣಿಕತೆಯನ್ನು ಬಣ್ಣಿಸುವ ಆಸ್ತಿಕರು "ಇನ್ನು ಈ 180 ಕೋಟಿಯ ಯೋಜನೆಯಿಂದ ಇನ್ನೇನು ಗಂಡಾಂತರ ಕಾದಿದೆಯೋ" ಎಂದು ಮಾತಾಡಿಕೊಳ್ಳುತ್ತಿದ್ದಾರೆ. ಇದನ್ನೆಲ್ಲಾ ನಂಬುವ ಮುಖ್ಯಮಂತ್ರಿ ಯಡಿಯೂರಪ್ಪನವರು ಏನು ಹೇಳುತ್ತಾರೆ ಕಾದು ನೋಡಬೇಕಾಗಿದೆ.

■ ಪ್ರಕಾಶ್ ಪಿಂಟೋ

ಒಣ ದ್ರಾಕ್ಷಿ ಮತ್ತು ದೇವೇಗೌಡ

ಇತ್ತೀಚೆಗಷ್ಟೇ ದೇವೇಗೌಡರು ತಮ್ಮ ಪರಿವಾರ ಸಮೇತ ಸುಬ್ರಹ್ಮಣ್ಯಕ್ಕೆ ಬಿಜಂಗೈದು ಒಣದ್ರಾಕ್ಷಿಯಿಂದ ತುಲಾಭಾರ ಮಾಡಿಸಿದಾಗ ಅವರು 84 ಕೆ.ಜಿ. ತೂಗಿದ್ದರು. ವಾರಕ್ಕೊಂದರಂತೆ ಜೆಡಿಎಸ್‌ನ ಒಂದೊಂದೇ ವಿಕೆಟ್ ಉರುಳುತ್ತಿರುವ ಸಂದರ್ಭದಲ್ಲಿ ಒಣ ದ್ರಾಕ್ಷಿಯಿಂದ ತುಲಾಭಾರ ಮಾಡಿಸಿದ್ದು ಅವರ ಪಕ್ಷ ಒಣಗುತ್ತಿರುವುದರ ಸಂಕೇತವೆಂದು ಹಿತಶತ್ರುಗಳು ಲೇವಡಿ ಮಾಡಿದ್ದರು. ಅಂದಹಾಗೆ ಮುಖ್ಯಮಂತ್ರಿ ಯಡಿಯೂರಪ್ಪ ಕೂಡ ಇತ್ತೀಚೆಗೆ ದೇವಳಕ್ಕೆ ಬರುವ ಸಂದರ್ಭದಲ್ಲಿ ಹಗಲುರಾತ್ರಿ ದೇವಳದಲ್ಲೇ ಮೊಕ್ಕಾಂ ಹೂಡಿ ಸಕಲ ಸಿದ್ಧತೆಯಲ್ಲಿ ತೊಡಗಿದ್ದ ಆಡಳಿತ ಮೊಕ್ತೇಸರ ಟಿ.ವಿ. ಭಟ್ಟ, ಮಾಜಿ ಪ್ರಧಾನಿ ದೇವೇಗೌಡರು ಆಗಮಿಸಿದಾಗ ಅವರನ್ನು ಸ್ವಾಗತಿಸುವ ಜವಾಬ್ದಾರಿಯನ್ನೇ ಮರೆತು ಮಾಯವಾಗಿದ್ದರು.



ನಿರ್ಮಲಾ ಮಠಪತಿಯ ನೈರ್ಮಲ್ಯದ ಲೀಲೆಗಳು



ಇದು ಬೆಳಗಾವಿಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಸ್ಕೃತಿಹೀನ ಕಥೆ. ಈ ಇಲಾಖೆಗೆ ಸಹಾಯಕ ನಿರ್ದೇಶಕಿಯಾಗಿ ವಕ್ಕರಿಸಿಕೊಂಡಿರುವ ನಿರ್ಮಲಾ ಮಠಪತಿಯ ಲಂಚಬಾಕತನ ಅದೆಷ್ಟು ಮಿತಿಮೀರಿದೆ ಎಂದರೆ ಇಡೀ ಇಲಾಖೆಯೇ ಸೊರಗಿ ಸಣ್ಣಗಾಗಿಬಿಟ್ಟಿದೆ.

ಈಯಮ್ಮನ ಲಂಚಬಾಕತನದಿಂದಾಗಿಯೇ ಮೊನ್ನೆ ನೂರಾರು ವಿದ್ಯಾರ್ಥಿಗಳು ಪ್ರಾಣ ಕಳೆದುಕೊಳ್ಳುವ ಅಪಾಯ ಎದುರಾಗಿತ್ತು. ಆಗಸ್ಟ್ 15ರಂದು ಕುಮಾರ ಗಂಧರ್ವ ರಂಗಮಂದಿರದ ತಾರಸಿ ಬೆಳಗಿನ ಜಾವವೇ ಕುಸಿದು ಬಿತ್ತು, ಅದೇನಾದರೂ ರಾತ್ರಿ ಸಮಯದಲ್ಲಿ ಕುಸಿದಿದ್ದರೆ ನೂರಾರು ವಿದ್ಯಾರ್ಥಿಗಳು, ಪಾಲಕರು ಜೀವಂತ ಸಮಾಧಿಯಾಗಿ ಹೋಗುತ್ತಿದ್ದರು. ಛಾವಣಿಯ ಕುಸಿತಕ್ಕೆ ಭೂಸೇನೆಯ ಕಳಪೆ ಕಾಮಗಾರಿಯೇ ಕಾರಣ ಎಂದು ದೂಷಿಸಲಾಗುತ್ತಿದೆ. ಆದರೆ ಈ ಕಳಪೆ ಕಾಮಗಾರಿಗೆ ಮಾರ್ಗದರ್ಶನ ನೀಡಿದ ಮಹಾಶಯರು ಅಂದಿನ ಜಿಲ್ಲಾಧಿಕಾರಿ ಎಂ.ಈ. ಶಿವಲಿಂಗಮೂರ್ತಿ ಹಾಗೂ ಈ ನಿರ್ಮಲಾ ಮಠಪತಿ ಎಂಬುದು ಬಹಳ ಜನಕ್ಕೆ ಗೊತ್ತಿರಲಿಕ್ಕಿಲ್ಲ.

ಈ ಹಿಂದೆ ವಡಗಾವಿಯಲ್ಲಿ ನಿರ್ಮಿಸಲಾಗಿರುವ ಗಡಿ ಭವನ ಇದುವರೆಗೂ ಉದ್ಘಾಟನೆ ಕಂಡಿಲ್ಲ, ಏಕೆಂದರೆ ಉದ್ಘಾಟನೆಗೆ ಮುಂಚೆಯೇ ಅದು ಸೋರಲಾರಂಭಿಸಿತ್ತು, ಆಗಿನ ಸಂಸ್ಕೃತಿ ಇಲಾಖೆಯ ಆಯುಕ್ತ ಐ.ಎಂ. ವಿಠ್ಠಲಮೂರ್ತಿ ಈ ಕುರಿತು ಕಠಿಣಕ್ರಮ ಕೈಗೊಳ್ಳುವುದಾಗಿ ಹೂಂಕರಿಸಿದ್ದರು ನಿಜ, ಆದರೆ ನಿರ್ಮಲೆಯ ಒಂದು ರೋಮವನ್ನೂ ಅವರಿಂದ ಕೀಳಲಾಗಲಿಲ್ಲ, ಗಡಿ ಭವನ ಕೂಡ ಈ ನಿರ್ಮಲೆ ಎಂಬ ಹಣ ನುಂಗುವವಳ ಮಾರ್ಗದರ್ಶನದಲ್ಲೇ ನಡೆದ ಅಭೂತಪೂರ್ವ ಕಾಮಗಾರಿ.

ಯಾವಾಗ ಈ ನಿರ್ಮಲೆ ಇಂತಹ ಒಂದೊಂದು ಕಳಪೆ ಕಾಮಗಾರಿಗಳನ್ನೂ ದಕ್ಕಿಸಿಕೊಂಡಳೋ ಇನ್ನು ಮುಂದೆ ತಾನು ಯಾರಿಗೂ ಹೆದರಬೇಕಿಲ್ಲ ಎಂಬ ಸೊಕ್ಕು ಅವಳಲ್ಲಿ ಮೂಡಿತು. ಅದಾದಮೇಲೆ ಅವಳ ಮೇಯುವಿಕೆಗೆ ಅಡೆತಡೆಯಿಲ್ಲದಂತಾಗಿ ಹೋಗಿದೆ.

ಕಲಾವಿದರಿಗೆ ಕಂಟಕ

ಇಲಾಖೆಯಲ್ಲಿ ಅವಳು ಮೇಯದ ಜಾಗವಿಲ್ಲ, ಕೊನೆಗೆ ಕಲಾವಿದರನ್ನೂ ಬಿಡಲಿಲ್ಲ, ರೇಣುಕಮ್ಮ ಮುರಗೋಡ ಅಂತಹ ಹಿರಿಯ ಕಲಾವಿದರನ್ನೇ ಕಾಲ ಕಸವಾಗಿ ಕಾಣುತ್ತಾ ಕಲಾವಿದರ ಹೆಸರಿನಲ್ಲೇ ತನ್ನ ಗುಳುಂ ಕಾರ್ಯ ನೆರವೇರಿಸುತ್ತಿದ್ದಾಳೆ. ಪ್ರತಿಸಲ ಈಕೆ ಕಾರ್ಯಕ್ರಮಗಳಿಗೆ ತರಿಸುವುದು ಒಂದೇ ಕಲಾತಂಡವನ್ನು. ಓರ್ವ ಅಬ್ಬೇಪಾರಿ ಜಾನಪದ ಕಲಾವಿದನ ಮೂಲಕ ಕಡಿಮೆ ಹಣದಲ್ಲಿ ಕಾರ್ಯಕ್ರಮಕ್ಕೆ ಬರುವ ಹಳ್ಳಿ ಜನರನ್ನು ಕರೆಸಿ ಬಿಡಿಗಾಸು ನೀಡಿ ಕಳುಹಿಸುವುದು, ಆಮೇಲೆ ಅವರಿಗೆ ಜಾಸ್ತಿ ದುಡ್ಡು ಕೊಟ್ಟಿರುವುದಾಗಿ ಲೆಕ್ಕ ಬರೆದು ದುಡ್ಡು ನುಂಗುವುದು ಇವಳ ಚಾಳಿಯಾಗಿ ಬಿಟ್ಟಿದೆ.

ಈ ಹಿಂದೆ ಸಹಾಯಕ ನಿರ್ದೇಶಕನಾಗಿದ್ದ ಕೆ.ಎಚ್. ಚನ್ನೂರ ಈಗ ಕೊಪ್ಪಳಕ್ಕೆ ಹೋಗಿದ್ದಾರೆ. ಆತನೂ ಭ್ರಷ್ಟನಾಗಿದ್ದ ನಿಜ. ಆದರೆ ಯಾವತ್ತೂ ಈ ನಿರ್ಮಲೆಯಷ್ಟು ದರ್ಬಾರು ಮಾಡಲಿಲ್ಲ, ಕಲಾವಿದರನ್ನು ಗೌರವದಿಂದ ಕಾಣುತ್ತಿದ್ದ ಈತ ಸಹಾಯ ಕೇಳಿಬರುವ ಕಲಾವಿದರನ್ನು ಖಾಲಿ ಕೈಯಲ್ಲಿ ಕಳುಹಿಸಿದ ಉದಾಹರಣೆಗಳಿಲ್ಲ, ಅಲ್ಲದೇ ಅಷ್ಟೇ ಕ್ರಿಯಾಶೀಲವಾಗಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದ, ನಿರ್ಮಲೆ ಅದಕ್ಕೆ ತದ್ವಿರುದ್ಧ.

ಶಾಲಿನಿಯೇ ಗುರು!


ಈಕೆಯನ್ನು ಈ ಮಟ್ಟಕ್ಕೆ ಬೆಳೆಸಿದ ಅಪಖ್ಯಾತಿ ಹಿಂದಿನ ಜಿಲ್ಲಾಧಿಕಾರಿ ಡಾ. ಶಾಲಿನಿ ರಜನೀಶ್ ಅವರಿಗೆ ಸಲ್ಲುತ್ತದೆ. ಬೆಳಗಾವಿಯ ಜನ ಪ್ರವಾಹಕ್ಕೆ ತುತ್ತಾಗಿ ನರಳಾಡುತ್ತಿದ್ದಾಗ ಅವರಿಗೆ ಪರಿಹಾರ ಕೊಡುವುದಕ್ಕಾಗಿ ಸರ್ಕಾರ ಕೋಟ್ಯಂತರ ರೂಪಾಯಿ ಮಂಜೂರು ಮಾಡಿತ್ತು, ಅದನ್ನು ಹಂಚುವ ಕೆಲಸವನ್ನೂ ಸಹಜವಾಗಿಯೇ ಜಿಲ್ಲಾಧಿಕಾರಿ ಶಾಲಿನಿಗೆ ನೀಡಲಾಗಿತ್ತು, ಆದರೆ ಪ್ರವಾಹ ಪೀಡಿತ ಕುಟುಂಬಗಳಿಗೆ ಸೇರಬೇಕಾದ ಹಣ ನೇರವಾಗಿ ಶಾಲಿನಿಯ ತಿಜೋರಿ ಸೇರಿಬಿಟ್ಟಿತು. ಅದರಲ್ಲಿ ಸುಮಾರು 25 ಲಕ್ಷದಷ್ಟು ಹಣ ಪಾಪಿಷ್ಟ ಪತ್ರಕರ್ತರ ಜೇಬು ತುಂಬಿತ್ತು! ಆನಂತರ ಶಾಲಿನಿ ಮಾಡಿದ ರಂಪಾಟಗಳು, ಭ್ರಷ್ಟಾಚಾರಗಳು ಹೊರಬರಲೇ ಇಲ್ಲ!!

ಈಕೆ ಎಂಥ ಭ್ರಷ್ಟೆ ಎಂಬುದು ಇಡೀ ಬೆಳಗಾವಿಗೆ ಗೊತ್ತಿರುವ ವಿಚಾರ. ಆದರೂ ಆಕೆಯನ್ನು ಮುಟ್ಟುವ ಧೈರ್ಯ ಯಾರಿಗೂ ಇಲ್ಲದಂತಾಗಿದೆ. ಈಗ ಹೊಸದಾಗಿ ಬಂದಿರುವ ಜಿಲ್ಲಾಧಿಕಾರಿ ಡಾ. ಜೆ. ರವಿಶಂಕರ ಇವಳ ಆಟ ಹಾಗೂ ಚೆಲ್ಲಾಟಗಳಿಗೆ ಫುಲ್‌ಸ್ಟಾಪ್ ಹಾಕುವ ಧೈರ್ಯ ಮಾಡುತ್ತಾರಾ? ಕಾದು ನೋಡಬೇಕು.

■ ಮಧುಬಾಲಾ

ಸಚಿವ ನರೇಂದ್ರಸ್ವಾಮಿಯ ಮರಳಿನ ಲೂಟಿಗೆ ಕೊನೆಯಿಲ್ಲವೇ?

ನರೇಂದ್ರಸ್ವಾಮಿಯ ಮರಳು ದಂಧೆ ಇಂದು ನಿನ್ನೆಯದಲ್ಲ. ಈತನ ಈ ದಂಧೆಯ ಮೂಲ ಕೆದಕುತ್ತಾ ಹೋದರೆ ಸೀದಾ ತಲಕಾಡಿಗೇ ನಮ್ಮನ್ನು ಕರೆದೊಯ್ಯುತ್ತದೆ. ತಲಕಾಡಿಗೆ ಹೋದರೆ ಮರಳು ಎತ್ತಬಾರದೆಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಬೋರ್ಡ್‌ಗಳು ಸಾಕಷ್ಟು ಕಾಣಸಿಗುತ್ತವೆ. ಆದರೆ ನರೇಂದ್ರಸ್ವಾಮಿ ಮತ್ತು ಕಂಪೆನಿ ಎಲ್ಲಾ ನಿಯಮಗಳನ್ನು ಗಾಳಿಗೆ ತೂರುತ್ತಿವೆ. ನಿಯಮಕ್ಕೆ ವಿರುದ್ಧವಾಗಿ ಯಂತ್ರಗಳ ಬಳಕೆಯಿಂದ ಮರಳುದಂಧೆ ಅವ್ಯಾಹತವಾಗಿ ಸಾಗುತ್ತಿದೆ.



ಯಡಿಯೂರಪ್ಪನವರ ಸರ್ಕಾರಕ್ಕೂ ಕರುನಾಡ ಮಣ್ಣಿಗೂ ಗಾಢವಾದ ಸಂಬಂಧ. ಅದಕ್ಕೆ ಸಾಕ್ಷಿ ಬೇಕೆ? ಬಳ್ಳಾರಿಯಿಂದ ಬಾಗಲಕೋಟೆಯವರೆಗಿನ ಭೂಮಿಯ ಒಡಲನ್ನು ಬಗೆಯಲು ರೆಡ್ಡಿ ಬ್ರದರ್ಸ್‌ಗೆ ಗುತ್ತಿಗೆ ನೀಡಲಾಗಿದೆ. ಬೆಂಗಳೂರಿನ ಬೆಲೆಬಾಳುವ ಭೂಮಿಯನ್ನು ಕದ್ದು ಕುಬೇರರಾಗಿರುವ ಆರ್.ಅಶೋಕ್ ಮತ್ತು ಕಟ್ಟಾ ನಾಯ್ದುಗಳನ್ನೇ ಅಲ್ಲಿನ ಉಸ್ತುವಾರಿ ಸಚಿವರನ್ನಾಗಿಸಲಾಗಿದೆ. ಇನ್ನು ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ನದೀ ಪಾತ್ರದ ಮರಳನ್ನು ಅವ್ಯಾಹತವಾಗಿ ಸಾಗಿಸುವ ಕಂಟ್ರಾಕ್ಟ್ ಪಕ್ಷೇತರ ಮಂತ್ರಿ ನರೇಂದ್ರಸ್ವಾಮಿಯದ್ದಾಗಿದೆ!

ನರೇಂದ್ರಸ್ವಾಮಿಯ ಮರಳು ದಂಧೆ ಇಂದು ನಿನ್ನೆಯದಲ್ಲ. ಈತನ ಈ ದಂಧೆಯ ಮೂಲ ಕೆದಕುತ್ತಾ ಹೋದರೆ ಸೀದಾ ತಲಕಾಡಿಗೇ ನಮ್ಮನ್ನು ಕರೆದೊಯ್ಯುತ್ತದೆ. ತಲಕಾಡಿನ ಸರ್ಕಲ್‌ನಿಂದ ಹಳೇ ಬೀದಿಯ ಗುಂಟ ಹೊರಟರೆ ಸಿಗುವ ಕಡೆಯ ಬಿಲ್ಡಿಂಗೇ ಹಸ್ತಿಕೇರಿ ಮಠದ್ದು. ಅದರ ಹಿಂದಿನ ದೊಡ್ಡ ಮರಳಿನ ಗುಡ್ಡೆಗಳನ್ನು ಏರಿದರೆ ಕಾವೇರಿ ನದಿ. ಆರು ವರ್ಷಗಳ ಹಿಂದೆ ಈ ಹಸ್ತಿಕೇರಿ ಮಠದ ಡಾ.ಸಿದ್ದಮಲ್ಲಿಕಾರ್ಜುನ ಸ್ವಾಮಿಗಳಿಗೆ ಮಠದ ಅಭಿವೃದ್ಧಿಗೆಂದು ಅದೇ ಹೊಳೆಯ ಪಕ್ಕದಲ್ಲಿ ಆರು ಎಕರೆ ಜಮೀನನ್ನು ಯಾರೋ ಪುಣ್ಯಾತ್ಮರು ನೀಡಿದ್ದರು.

ದಾನದಿಂದ ಬಂದ ಆ ಜಮೀನಿನ ಜಿ.ಪಿ.ಎ ಅನ್ನು ಮಠದ ಟ್ರಸ್ಟಿ ನಟರಾಜ್ ಮೂರ್ತಿ ಎಂಬುವವನು ಅದು ಹೇಗೋ ಗಿಟ್ಟಿಸಿಕೊಂಡನು. ಇದೇ ಜಮೀನಿನಲ್ಲಿ ನಟರಾಜ್ ಮೂರ್ತಿ ಸಣ್ಣ ಪ್ರಮಾಣದಲ್ಲಿ ಮರಳು ತೆಗೆದು ಮಾರಾಟ ಶುರು ಮಾಡಿದನು. ಆ ಕಾಲಕ್ಕೇ ಲಕ್ಷಗಳ ಲೆಕ್ಕದಲ್ಲಿ ಹಣ ಮಾಡತೊಡಗಿದ ಈತನ ಮೇಲೆ ಹಲವರ ಕಣ್ಣು ಬಿತ್ತು. ಅವರುಗಳು ಸುತ್ತಲಿನ ಹಳ್ಳಿಗಳ ಕೆಲವು ದಲಿತರನ್ನು ಮುಂದಿಟ್ಟುಕೊಂಡು ನಟರಾಜ್ ಮೂರ್ತಿಯನ್ನು ಹೆದರಿಸಲಾರಂಭಿಸಿದರು. ಆಗ ಈ ಜಾಗಕ್ಕೆ ದಲಿತರನ್ನೇ ತಂದರೆ ಈ ಸಮಸ್ಯೆಯಿಂದ ಪಾರಾಗಬಹುದು ಎಂದು ತರ್ಕಿಸಿದ ನಟರಾಜ್ ಮೂರ್ತಿ ಒಂದು ವರ್ಷದ ಅವಧಿಗೆ ಈ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ಮರಿಗಾಲಿಯ ನರೇಂದ್ರಸ್ವಾಮಿಗೆ ನೀಡಿದ.

ನಟರಾಜ ಮೂರ್ತಿಗೆ ಪಂಗನಾಮ

ಒಂದು ವರ್ಷದ ಲೀಸ್ ಮುಗಿದ ನಂತರ ಜಮೀನನ್ನು ತನ್ನ ಸುಪರ್ದಿಗೆ ಕೊಡಬೇಕೆಂದು ನಟರಾಜ್ ಮೂರ್ತಿ ಕೇಳಿದ. ಆದರೆ ನರೇಂದ್ರಸ್ವಾಮಿ ತನ್ನ ಭಾವ ಸುಭಾಷ್ ಭರಣಿಯ ಹೆಸರನ್ನು ಬಳಸಿಕೊಂಡು ಆತನಿಗೇ ಧಮಕಿ ಹಾಕಿದ. ಜಾತಿಯಲ್ಲಿ ಲಿಂಗಾಯತನಾದ ನಟರಾಜ್ ಮೂರ್ತಿ ತನ್ನದೇ ಪಟ್ಟುಗಳನ್ನು ಬಳಸಿದರೂ ನರೇಂದ್ರ ಸ್ವಾಮಿಯನ್ನು ಮಣಿಸಲಾಗಲಿಲ್ಲ. ಎಂಟು ತಿಂಗಳ ಕಾಲ ಮೂರ್ತಿಯನ್ನು ಅಲೆಸಿದ ನರೇಂದ್ರಸ್ವಾಮಿ ಮತ್ತೆ ಅದೇ ಭೂಮಿಯನ್ನು ಮೂರು ವರ್ಷಗಳ ಅವಧಿಗೆ ಲೀಸ್ ಮೇಲೆ ಪಡೆದ. ಬಲ್ಲವರು ಹೇಳುವಂತೆ ಮರಳು ಸಾಗಿಸುವುದ ದಂಧೆಯಿಂದ ಈಗಾಗಲೇ ನರೇಂದ್ರಸ್ವಾಮಿ ಸುಮಾರು 10 ಕೋಟಿ ರೂಪಾಯಿ ಸಂಪಾದಿಸಿದ್ದಾರೆ!

ಅಕ್ರಮ ಮರಳು ಜಾಡುಗಳಿಗೆ ಚಾಲನೆ

ಮರಳು ದಂಧೆಯ ರುಚಿಯನ್ನು ಕಂಡುಕೊಂಡ ನರೇಂದ್ರಸ್ವಾಮಿ ಸತ್ಯಗಾಲ, ಮುಳ್ಳೂರು, ಪಟ್ಲೂರು, ಮರಿಗಾಲಿ, ಬಿಳಿಜಗಲಿ ಬೋಳೆ, ಸೋಮಹಳ್ಳಿ, ಹುಲ್ಲಂಬಳ್ಳಿಗಳಲ್ಲಿ ಯಾವ ಅನುಮತಿಯನ್ನು ಪಡೆಯದೆ ಮರಳು ದಂಧೆಯನ್ನು ವಿಸ್ತರಿಸಿದರು. ಈತನ ಪ್ರೇರಣೆಯಿಂದ ಸುತ್ತಮುತ್ತಲಿನ ಪುಢಾರಿ ಎಲಿಮೆಂಟುಗಳು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅನುಮತಿ ಪಡೆಯದೆ ಕಾವೇರಿ ನದಿ ಪಾತ್ರದ ಅಕ್ಕಪಕ್ಕದಲ್ಲಿ ಕೊಳ್ಳೇಗಾಲ ತಾಲೂಕಿನ ಸತ್ಯಗಾಲ, ಹಂಪಾಪುರ, ಮುಳ್ಳೂರು ಹರಣಿ, ಟಿ.ನರಸೀಪುರ ಎಡೆದೊರೆ, ಮಾದಾಪುರ, ಮರಡಿಪುರ, ಚಂದಹಳ್ಳಿ, ಹಕ್ಕೂರು, ಮುತ್ತುಲುವಾಡಿ, ಕುಕ್ಕೂರು, ಕಾಳೇನಹಳ್ಳಿ, ವಿಜಯಪುರ, ಮೇಧನಿ, ಮಡವಾಡಿ, ಕಾವೇರಿಪುರಗಳಲ್ಲೂ ಅಕ್ರಮ ಮರಳುದಂಧೆಯ ಜಾಡುಗಳನ್ನು ಪ್ರಾರಂಭಿಸಿದರು.

ತಲಕಾಡಿಗೆ ಹೋದರೆ ಮರಳು ಎತ್ತಬಾರದೆಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಬೋರ್ಡ್‌ಗಳು ಸಾಕಷ್ಟು ಕಾಣಸಿಗುತ್ತವೆ. ಆದರೆ ನರೇಂದ್ರ ಸ್ವಾಮಿ ಮತ್ತು ಕಂಪೆನಿ ಎಲ್ಲಾ ನಿಯಮಗಳನ್ನು ಗಾಳಿಗೆ ತೂರುತ್ತಿವೆ. ನಿಯಮಕ್ಕೆ ವಿರುದ್ಧವಾಗಿ ಯಂತ್ರಗಳ ಬಳಕೆಯಿಂದ ಮರಳುದಂಧೆ ಅವ್ಯಾಹತವಾಗಿ ಸಾಗುತ್ತಿದೆ.

ನರೇಂದ್ರಸ್ವಾಮಿಯ 'ಯಶಸ್ಸನ್ನು' ಗಮನಿಸಿದ ಬನ್ನೂರಿನ ಶಾಸಕಿ ಸುನಿತಾ ವೀರಪ್ಪಗೌಡ ತಾನೂ ಏಕೆ ಮರಳಿನ ರುಚಿ ನೋಡಬಾರದು ಎಂದು ಇದಕ್ಕೆ ಕೈ ಹಾಕಿದರು. ಕನಕಪುರದಲ್ಲಿ ಮೂರು ಹೊತ್ತು ಕುಡಿದು ಜನರಿಂದ ಥೂ...ಛೀ ಎಂದು ಉಗಿಸಿಕೊಳ್ಳುತ್ತಿದ್ದ ತಮ್ಮ ರವಿಪ್ರಕಾಶನನ್ನು ಕರೆತಂದು ಅವನಿಗೆ ಮರಳ ಜಾಡುಗಳನ್ನು ತೋರಿಸಿದರು. ಆತ ಅಕ್ಕನ ಪ್ರಭಾವವನ್ನು ಬಳಸಿಕೊಂಡು ಮರಳು ಜಾಡುಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಲಾರಂಭಿಸಿದ.


ನರೇಂದ್ರಸ್ವಾಮಿಯ ಬಳಿ ಸೇರಿಕೊಳ್ಳುತ್ತಿದ್ದ ಹಣವನ್ನು ತಡೆಯಲು ಅಕ್ಕನ ಪ್ರಭಾವ ಬಳಸಿ ರವಿಪ್ರಕಾಶ್ ಅಕ್ರಮ ಜಾಡುಗಳಿಗೆ ಕೈ ಹಾಕಿ ಇಲಾಖೆಯಿಂದ ಪರವಾನಗಿಯನ್ನು ಪಡೆಯುವಲ್ಲಿ ಯಶಸ್ವಿಯಾದ. ಆದರೆ ಅಷ್ಟಕ್ಕೆ ಸುಮ್ಮನಾಗದೆ ಮರಡಿಪುರ, ಎಡೆತೊರೆ, ಚಂದಹಳ್ಳಿ, ಹಕ್ಕೂರುಗಳಲ್ಲಿನ ನರೇಂದ್ರಸ್ವಾಮಿಯ ಅಕ್ರಮ ಜಾಡುಗಳಿಗೂ ಕೈ ಹಾಕಿದ.

ಅಕ್ರಮ ಜಾಡುಗಳ ಮೇಲೆ ರೈಡ್: ಸಣ್ಣಪುಟ್ಟವರು ಖಾಲಿ

ಯಾವಾಗ ನರೇಂದ್ರ ಸ್ವಾಮಿಯ ಅಕ್ರಮ ಜಾಡುಗಳಿಗೆ ರವಿಪ್ರಕಾಶ ಕೈ ಹಾಕಿದನೋ, ನರೇಂದ್ರಸ್ವಾಮಿಯ ಆಮದನಿ ಕುಗ್ಗತೊಡಗಿತು. ಮತ್ತೆ ಸುಭಾಷ್ ಭರಣಿಯನ್ನು ಬಳಸಿದ ಸ್ವಾಮಿ, ಅಕ್ರಮ ಮರಳುಜಾಡಿನ ಮೇಲೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ದಾಳಿ ಮಾಡಿಸಿದರು. ಇದರಿಂದ ಮರಳಿನ ದಂಧೆ ತಾತ್ಕಾಲಿಕವಾಗಿ ನಿಂತಿತು. ಅಲ್ಲಲ್ಲಿ ಮರಳು ತೆಗೆಯುವುದು ನಿಷಿದ್ಧ ಎಂಬ ಬೋರ್ಡ್‌ಗಳೂ ಸಹ ಬಂದವು.

ಇದರಿಂದ ಸಣ್ಣಪುಟ್ಟ ಜನ ಪಾಪ ತಮ್ಮ ದಂಧೆಯನ್ನು ಬಂದ್ ಮಾಡಿಕೊಂಡರು. ಆದರೆ ಕೋಟ್ಯಂತರ ಲಾಭ ತರುವ ಬಿಸಿನೆಸ್ ನಿಲ್ಲುತ್ತದೆಯೇ? ದೊಡ್ಡ ಜನರು ಮಾತ್ರ ನಿರಾತಂಕವಾಗಿ ಮುಂದುವರೆದರು. ಅಷ್ಟು ಮಾತ್ರವಲ್ಲ, ಇನ್ನೂ ಹಲವಾರು ದೊಡ್ಡ ಜನರು ಇದಕ್ಕೆ ಹೊಸದಾಗಿ ಕೈ ಹಾಕಿದರು. ಇದಾದ ನಂತರ ಡಿಕೆ ಶಿವಕುಮಾರ್ ಸಂಬಂಧಿ ಕಾಂತರಾಜು ನೇತೃತ್ವದಲ್ಲಿ ಹೊಸದಾಗಿ 8-10 ಜನರು ಇದಕ್ಕೆ ಕೈಹಾಕಿದರು. ಮೈಸೂರು ಗ್ರಾಮಾಂತರ ಜೆಡಿಎಸ್‌ನ ಅಧ್ಯಕ್ಷ ವರುಣಾ ಮಹೇಶ್, ಚಾಮರಾಜನಗರ ಎಂಪಿ ಆಗಿದ್ದ ಸಿದ್ಧರಾಜು, ಅರಗು ಮತ್ತು ಬಣ್ಣದ ಕಾರ್ಖಾನೆ ಅಧ್ಯಕ್ಷ ಎಚ್.ಎನ್ ನಾಗರಾಜಮೂರ್ತಿ, ಮೈಸೂರು ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಬಿ.ಎಂ. ರಾಮು,





ಮರಳು ಲಾರಿಗಳ ಓಡಾಟದಿಂದ ಹಾಳಾದ ರಸ್ತೆ ▶

ಕೆಂಪಯ್ಯನ ಹುಂಡಿ ಅರುಣ್‌ಕುಮಾರ್, ಮೈಸೂರಿನ ಮಾಜಿ ಉಪ ಮೇಯರ್ ಅರ್ಜುನ ಕುಮಾರ್ ಸೇರಿದಂತೆ ಹಲವಾರು ಜನ ಮರಳು ತೋಡಲು ವಕ್ಕರಿಸಿಕೊಂಡರು.

ಸರ್ಕಾರಕ್ಕೆ - ನಷ್ಟವೆಷ್ಟು?

ಮರಳು ದಂಧೆಯಲ್ಲಿ ಅನುಮತಿ ಪಡೆದು ಕೆಲಸ ಮಾಡುತ್ತಿರುವವರೂ ಇದ್ದಾರೆ. ಆದರೆ ಅನುಮತಿ ಪಡೆದವರೂ ಸಹ ತಮ್ಮ ವ್ಯಾಪ್ತಿಯನ್ನು ಮೀರಿ ಭೂತಾಯಿಯ ಒಡಲನ್ನು ಬಗೆಯುವ ಕೆಲಸದಲ್ಲಿ ತಮ್ಮ ಕೈಚಳಕ ತೋರಿಸುತ್ತಿರುತ್ತಾರೆ. ಈ ದಂಧೆಯಿಂದ ಸರ್ಕಾರಕ್ಕೆ ಅಬ್ಬಬ್ಬಾ ಎಂದರೆ ಬರುತ್ತಿರುವುದು ಕೇವಲ 20 ಕೋಟಿ. ಆದರೆ ಎಲ್ಲಾ ಮರಳು ದಂಧೆಕೋರರು ಸೇರಿ ಮಾಡಿಕೊಳ್ಳುತ್ತಿರುವುದು ನೂರಾರು ಕೋಟಿ.

ಇದನ್ನೆಲ್ಲಾ ನಿಯಂತ್ರಣ ಮಾಡಬೇಕಾದ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ತನ್ನದೇ ಆದ ಪಡೆ ಇಲ್ಲ. ಜಿಲ್ಲಾ ಮಟ್ಟದಲ್ಲಿ ಬಿಟ್ಟರೆ ತಾಲೂಕು ಕೇಂದ್ರಗಳಲ್ಲಿ ಕಚೇರಿಯೇ ಇಲ್ಲ. ಸ್ಥಳೀಯ ರೆವಿನ್ಯೂ ಇಲಾಖೆಯ ಅಧಿಕಾರಿಗಳು ತಮ್ಮ ರೆವಿನ್ಯೂ ಬಗ್ಗೆ ಮಾತ್ರ ಗಮನಹರಿಸುತ್ತಾರೆ. ಟಿ.ನರಸೀಪುರದ ಸರ್ಕಲ್ ಇನ್ಸ್‌ಪೆಕ್ಟರ್ ಕುಮಾರಸ್ವಾಮಿಯಂತೂ ತನ್ನ ರೆವಿನ್ಯೂಗಾಗಿ ರಸ್ತೆಯಲ್ಲೇ ಕೈಚಾಚಿ ನಿಂತುಬಿಟ್ಟಿದ್ದಾನೆ. ಅಲ್ಲಲ್ಲಿ ಮರಳು ಲಾರಿಗಳ ವಿರುದ್ಧ ಜನರು ಪ್ರತಿಭಟನೆ ಮಾಡಿದರೆ 'ಜನರಿಗೆ ಅದೇನು ಮಾಮೂಲಿ ಕೊಡ್ತೀರೋ ಕೊಟ್ಟು ಕಳಿಸ್ರೀ' ಎಂದು ಹೇಳುವ ಮಟ್ಟಕ್ಕೆ ಈತ ಇಳಿದಿದ್ದಾನೆ. ಈತನ ಜೊತೆಗೆ ಎಸ್‌ಐಗಳಾದ ಮಹೇಶ್ ಮತ್ತು ಮಹದೇವ ನಾಯ್ಕರ್ ಸಹ ಕೈಜೋಡಿಸಿದ್ದಾರೆ. ಇದ್ದುದರಲ್ಲಿ ಬನ್ನೂರಿನ ಎಸ್‌ಐ ಗೋಪಿಕೃಷ್ಣ ಐರಣ್ ಪ್ರಾಮಾಣಿಕನಾಗಿದ್ದು ಹಲವಾರು ಅಕ್ರಮ ಲಾರಿಗಳನ್ನು ಹಿಡಿದು ದಂಡ ಕಟ್ಟಿಸಿದ್ದಾನೆ. ಮರಳನ್ನು ತೆಗೆಯಲು ಯಂತ್ರಗಳನ್ನು ಬಳಸಬಾರದು ಎಂಬ ಕಾನೂನಂತೂ ಇಲ್ಲಿ ಯಾರಿಗೂ ಲೆಕ್ಕಕ್ಕಿಲ್ಲ. ಅಷ್ಟು ಸಾಲದೆಂಬಂತೆ ನದಿ ಮಧ್ಯಭಾಗದಲ್ಲಿ ನೇರವಾಗಿ ಮೋಟಾರ್ ಮತ್ತು ಪೈಪ್‌ಗಳನ್ನು ಇಟ್ಟು ಮರಳನ್ನು ಎಳೆದು ಸಾಗಿಸಲಾಗುತ್ತಿದೆ. ಜೆಸಿಬಿಗಳ ಬಳಕೆಯಂತೂ ಧಾರಾಳವಾಗಿ ನಡೆಯುತ್ತಿದೆ.

ಅಕ್ರಮ ಗಣಿಗಾರಿಕೆಯನ್ನು ತಡೆಯಲು ಇರುವ ಕಾನೂನು ಬಳಕೆಯಾಗುತ್ತಿರುವುದು ಜನಾರ್ದನ ರೆಡ್ಡಿಯ ವಿರೋಧಿಗಳನ್ನು ಬಗ್ಗು ಬಡಿಯಲೇ ಹೊರತು ರೆಡ್ಡಿಯ ಅಕ್ರಮಗಳನ್ನು ತಡೆಯಲಿಕ್ಕಲ್ಲ. ಅದೇ ರೀತಿ ಇಲ್ಲಿಯೂ ನಡೆಯುತ್ತಿದೆ. ಮೊದಲನೆಯದಾಗಿ ಇದಕ್ಕೆ ಒಂದು ಸಮಗ್ರ ಕಾನೂನೇ ಇಲ್ಲ. ದ್ವಾಪರ ಯುಗದ ಕಾಲದ ಹಳೇ ಕಾನೂನೂ ಕೇವಲ ಕಾಗದದ ಮೇಲೆ ಮಾತ್ರ ಉಳಿದಿದೆ. ಟೆಂಡರ್ ಪಾಯಿಂಟ್ ಮಾಡುವಾಗ ನಿರ್ದಿಷ್ಟವಾಗಿ ಗಡಿಯನ್ನು ಗುರುತಿಸದಿರುವುದು, ಅಕ್ರಮ ತಡೆಯಲು ಗಸ್ತಿನ ಸಿಬ್ಬಂದಿಯೇ ಇಲ್ಲದಿರುವುದು, ತೂಕ ಮಾಡಿ ಹೊರಬಿಡಲು ಸರ್ಕಾರೀ ವೇ ಬ್ರಿಡ್ಜ್‌ಗಳಿಲ್ಲದಿರುವುದು, ಎಲ್ಲವೂ ಸೇರಿ ಕಾವೇರಮ್ಮನ ಒಡಲು ಬರಿದಾಗುತ್ತಿರುವುದಕ್ಕೆ ನೆರವಾಗಿವೆ.

ಅಣ್ಣ ಸಚಿವ, ತಮ್ಮನದು ಉಸ್ತುವಾರಿ

ನರೇಂದ್ರಸ್ವಾಮಿ ಸಚಿವನಾದ ಮೇಲೆ ಮಂಡ್ಯ ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಮೇಲೆ ಗಮನ ಹರಿಸುತ್ತೇನೆಂದಿದ್ದ ಆತನ ತಲೆಯಲ್ಲಿ ಅಂತಹ ಯೋಜನೆಗಳೇನೂ ಇದ್ದಂತಿಲ್ಲ. ಮೈಷುಗರ್ ಕಾರ್ಖಾನೆ ಉಳಿಸಲು ಬೇಕಾದ ಇಚ್ಛಾಶಕ್ತಿಯಾಗಲೀ, ದರ್ದಾಗಲೀ ಈತನಿಗೆ ಇದ್ದಂತಿಲ್ಲ. ಇನ್ನು ಮಳವಳ್ಳಿ ಮತ್ತು ಮರಳು ದಂಧೆಯ ಉಸ್ತುವಾರಿ ನೋಡಿಕೊಳ್ಳಲು ತನ್ನ ಸಹೋದರ ಪರಶಿವ ಮೂರ್ತಿಯನ್ನು ಬಿಟ್ಟಿದ್ದಾರೆ. ಮಳವಳ್ಳಿಯ ಎಂಎಲ್‌ಎ ಸದ್ಯಕ್ಕೆ ಈತನೇ ಆಗಿದ್ದಾನೆ. ಅಧಿಕಾರಿಗಳಿಂದ ಹಣ ವಸೂಲಿ, ಮರಳು ದಂಧೆ, ಟ್ರಾನ್ಸ್‌ಫರು, ಲ್ಯಾಂಡ್ ಡೀಲ್‌ಗಳನ್ನು ನೋಡಿಕೊಳ್ಳುತ್ತಿರುವ ಪರಶಿವಮೂರ್ತಿ ಅಣ್ಣನಿಗೆ ತಕ್ಕ ತಮ್ಮನೆನಿಸಿಕೊಂಡಿದ್ದಾನೆ.

ನರೇಂದ್ರಸ್ವಾಮಿಯಿಂದ ಸದ್ಯಕ್ಕೆ ಕಾವೇರಮ್ಮನಿಗೆ ಉಳಿಗಾಲವಿಲ್ಲದಂತಾಗಿರುವುದಂತೂ ಸತ್ಯ. ಈ ಹಿಂದೆ ಮಂಡ್ಯದ ಡಿಸಿಯಾಗಿದ್ದ ಮಂಜುನಾಥ್ ಪ್ರಸಾದ್ ಕೈ-ಬಾಯಿ ಶುದ್ಧವಿಟ್ಟುಕೊಂಡಿದ್ದ ದಕ್ಷ ಅಧಿಕಾರಿಯಾಗಿದ್ದರು. ಶಾಸಕನಾಗುವುದಕ್ಕೂ ಮುಂಚೆ ನರೇಂದ್ರಸ್ವಾಮಿ ಬಹಳ ಎಗರಾಡಿದ್ದಕ್ಕೆ, ಆತನ ದಂಧೆಯ ಪರಿಚಯವಿದ್ದ ಡಿಸಿ "ನಿನ್ನನ್ನು ಒದ್ದು ಜೈಲಿಗಾಕಿಸುತ್ತೇನೆ" ಎಂದು ಎಚ್ಚರಿಕೆ ನೀಡಿದ್ದರು.

ಪ್ರಜಾಪ್ರಭುತ್ವದ ಹಿರಿಮೆ ನೋಡಿ, ಪಕ್ಷೇತರನಾಗಿ ಗೆದ್ದ ನರೇಂದ್ರಸ್ವಾಮಿ ಸಚಿವನೂ ಆಗಿ ಅದೇ ಡಿಸಿ ತಲೆ ಮೇಲೆ ಕೂತ. ಈಗ ಮಂಜುನಾಥ್ ಪ್ರಸಾದ್‌ರನ್ನು ಎತ್ತಂಗಡಿ ಮಾಡಲಾಗಿದೆ.


ಗಣಿ ಕಳ್ಳರೂ, ರಿಯಲ್ ಎಸ್ಟೇಟ್ ದೊರೆಗಳೂ, ಮರಳುದಂಧೆಕೋರರೆಲ್ಲ ಸೇರಿ ಸರ್ಕಾರ ರಚಿಸಿಕೊಂಡರೆ ಏನಾಗಬೇಕೋ ಅದೇ ಆಗುತ್ತಿದೆ. ಕನ್ನಡಮ್ಮನ ಮೇಲಾಗುತ್ತಿರುವ ಅನ್ಯಾಯವನ್ನು ಕೇಳುವವರೇ ಇಲ್ಲವೇ? ■

ನರೇಂದ್ರಸ್ವಾಮಿಯ ಹೊಸ ಪರಿಭಾಷೆ

ಇದೇ ನರೇಂದ್ರಸ್ವಾಮಿ ಸಚಿವನಾದ ಮೇಲೆ ಮಂಡ್ಯದ ಸ್ಥಳೀಯ ಚಾನೆಲ್ ಈತನ ಸಂದರ್ಶನ ಮಾಡಿತ್ತು. ಜಿಲ್ಲೆಯ ಅಭಿವೃದ್ಧಿ ಅದೂ ಇದೂ ಪ್ರಶ್ನೆಗಳಾದ ಮೇಲೆ ವರದಿಗಾರನ ನೇರ ಪ್ರಶ್ನೆ ಹೀಗಿತ್ತು: 'ಜಿಲ್ಲೆಯಲ್ಲಿ ಅವ್ಯಾಹತವಾಗಿ ಸಾಗುತ್ತಿರುವ ಅಕ್ರಮ ಮರಳು ದಂಧೆಯನ್ನು ತಡೆಯಲು ನೀವೇನು ಕ್ರಮ ಕೈಗೊಳ್ಳುತ್ತೀರಿ?' ಸ್ವತಃ ಅಕ್ರಮ ಮರಳು ದಂಧೆಯ ಪಿತಾಮಹ ನರೇಂದ್ರ ಸ್ವಾಮಿ ಎಲ್ಲಾ ನಾಚಿಕೆ ಬಿಟ್ಟು ಕೊಟ್ಟ ಉತ್ತರ ಹೀಗಿತ್ತು. 'ಮೊದಲನೆಯದಾಗಿ ಇದನ್ನು ದಂಧೆ ಎಂದು ಕರೆಯುವುದೇ ತಪ್ಪು. ಇವತ್ತು ಇಡೀ ದೇಶವನ್ನು ಕಟ್ಟಬೇಕಾದರೆ ಮರಳು ಅತ್ಯಗತ್ಯವಾಗಿ ಬೇಕೇ ಬೇಕು. ಒಂದು ವೇಳೆ ಎಲ್ಲಾದರೂ ಲೈಸೆನ್ಸ್ ಇಲ್ಲದೆ ಮರಳು ಬಿಸಿನೆಸ್ ನಡೆಯುತ್ತಿದ್ದಾರೆ ಅದನ್ನು ಸಕ್ರಮಗೊಳಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಈ ನಿಟ್ಟಿನಲ್ಲಿ ನಾನು ಎಲ್ಲಾ ಪ್ರಯತ್ನ ಮಾಡುತ್ತೇನೆ'.

ಇದು ಸಚಿವರೊಬ್ಬರ ಉತ್ತರ. ಇದಲ್ಲದೆ ಪ್ರತೀ ಹಳ್ಳಿಯಲ್ಲೂ ಸಂಗ್ರಹಿಸುತ್ತಿದ್ದ ರಾಯಲ್ಟಿಯನ್ನು ಇನ್ನು ಮುಂದೆ ಸಂಗ್ರಹಿಸಬಾರದೆಂದು ಎಸಿಗಳ ಮೂಲಕ ಸಚಿವರು ಆದೇಶ ಹೊರಡಿಸಲು ಹೊರಟಿದ್ದಾರೆನ್ನಲಾಗುತ್ತಿದೆ. ■

ಕಾವೇರಮ್ಮನನ್ನು ಆ ದೇವರೇ ಕಾಪಾಡಬೇಕು.



ಆಂಧ್ರದ ಮಂದಿ ಎನ್‌ಟಿಆರ್‌ನಂಥ ತಿಕ್ಕಲು ಮುಖ್ಯಮಂತ್ರಿಯನ್ನು ಕಂಡ ನಂತರವೂ ಬದುಕಿದ್ದಾಗಲೇ ಮಣ್ಣು ಮುಕ್ಕಿಸಿದ ಮೇಲೂ ಮತ್ತೆ ಅದೇ ಧಾಟಿಯ ನಟನೊಬ್ಬನನ್ನು ಮುಖ್ಯಮಂತ್ರಿ ಮಾಡುತ್ತಾರಾ? ಚಿರಂಜೀವಿ ಮತ್ತೊಬ್ಬ ಎನ್‌ಟಿಆರ್ ಆಗಬಹುದಾ? 'ಚಿರು' ಎಂಬ ಬಿರುಗಾಳಿ. ಚಂಡಮಾರುತವಾಗುತ್ತಾ? ಸುನಾಮಿಯಾಗುತ್ತಾ?

ಆಂಧ್ರಕ್ಕೆ ಮತ್ತೊಬ್ಬ ಎನ್‌ಟಿಆರ್?


ಚಿರು ಎಂಬ ಬಿರುಗಾಳಿ

■ ರಾ. ಸೋಮನಾಥ್

ಅದು 'ಚಿರು' ಎಂಬ ಬಿರುಗಾಳಿ. ಚಂಡಮಾರುತವಾಗುತ್ತಾ? ಸುನಾಮಿಯಾಗುತ್ತಾ? ಗೊತ್ತಿಲ್ಲ.

ಇತಿಹಾಸ ಮರುಕಳಿಸಬಹುದಾ? ಮತ್ತೊಬ್ಬ ಎನ್‌ಟಿಆರ್ ಅವತರಿಸುತ್ತಾನಾ? ಮೆಗಾಸ್ಟಾರ್ ಚಿರಂಜೀವಿಗೆ ಆಂಧ್ರ ಒಲಿಯುತ್ತಾ? ಎಲ್ಲವೂ ಪ್ರಶ್ನೆಗಳೇ.

ಇದೇ ಆಗಸ್ಟ್ 26 ರಂದು ತಿರುಪತಿಯಲ್ಲಿ ನಡೆಯುವ ಚಿರಂಜೀವಿಯ ರಾಜಕೀಯ ರಂಗ ಪ್ರವೇಶ, ಅದಕ್ಕೆಂದು ಸೇರುವ ಹತ್ತು ಲಕ್ಷ ಮಂದಿ ಭಕ್ತಾದಿಗಳ ಜನಸಾಗರ, ಹುಟ್ಟಲಿರುವ ಹೊಸ ಪಕ್ಷ, ಅದಕ್ಕೆ ವ್ಯಕ್ತವಾಗುತ್ತಿರುವ ಜನಬೆಂಬಲ ಮತ್ತು ಕಾಂಗ್ರೆಸ್, ತೆಲುಗು ದೇಶಂನ ಅಧಿಪತಿಗಳ ಆತಂಕ! ಇತ್ಯಾದಿಗಳೆಲ್ಲವೂ ಬಿರುಗಾಳಿಯ ಅಬ್ಬರದ ಮುನ್ಸೂಚನೆಗಳಷ್ಟೆ.


ಚಂದ್ರಬಾಬು ನಾಯ್ಡು

1983 ರಲ್ಲಿ ಎನ್‌ಟಿಆರ್ ತೆಲುಗುದೇಶಂ ಪಕ್ಷವನ್ನು ಹುಟ್ಟು ಹಾಕಿದಾಗ ಯಾವ ವಾತಾವರಣವಿತ್ತೋ ಅಂಥದ್ದೇ ಪರಿಸ್ಥಿತಿಗೆ ಆಂಧ್ರ ಸಜ್ಜಾಗುತ್ತಿದೆ. ತೆಲುಗರ ಮೂರನೇ ಶಕ್ತಿಯೊಂದು ಭಾರಿ ಸದ್ದಿನೊಂದಿಗೆ ಉದಯಿಸುತ್ತಿದೆ. ಮತ್ತೆ ಮುಖ್ಯಮಂತ್ರಿಯಾಗುವ ಚಂದ್ರಬಾಬು ನಾಯ್ಡು ಹುನ್ನಾರಕ್ಕೆ, ಸತತ ಹತ್ತು ವರ್ಷಗಳ ಕಾಲ ಆಂಧ್ರವನ್ನಾಳುವ ಹಾಲಿ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯ ಕನಸಿಗೆ ಒಟ್ಟೊಟ್ಟಿಗೆ ಕೊಳ್ಳಿ ಇಟ್ಟ ಚಿರಂಜೀವಿ ಸದ್ಯ ಆಂಧ್ರದ ರಾಜಕೀಯದ ಹೊಸ ಧೂಮಕೇತು. ಸಿನಿಮಾ ನಟನೊಬ್ಬ ಮುಖ್ಯಮಂತ್ರಿಯಾಗುವುದು ಆಂಧ್ರಕ್ಕಾಗಲಿ, ತಮಿಳುನಾಡಿಗಾಗಲಿ ಹೊಸತಲ್ಲ. ನಟನೊಬ್ಬನನ್ನು ಮುಖ್ಯಮಂತ್ರಿ ಮಾಡಿದ ಮೇಲೂ ಆತನ ಪರಮಾಪ್ತೆ ನಟಿಯೊಬ್ಬಳನ್ನು ಮುಖ್ಯಮಂತ್ರಿ ಗಾದಿಗೆ ತಂದವರು ತಮಿಳು ಜನ. ಆದರೆ ಆಂಧ್ರದ ಮಂದಿ ಎನ್‌ಟಿಆರ್‌ನಂಥ ತಿಕ್ಕಲು ಮುಖ್ಯಮಂತ್ರಿಯನ್ನು ಕಂಡ ನಂತರವೂ ಬದುಕಿದ್ದಾಗಲೇ ಮಣ್ಣು ಮುಕ್ಕಿಸಿದ ಮೇಲೂ ಮತ್ತೆ ಅದೇ ಧಾಟಿಯ ನಟನೊಬ್ಬನನ್ನು ಮುಖ್ಯಮಂತ್ರಿ ಮಾಡುತ್ತಾರಾ? ಚಿರಂಜೀವಿ ಮತ್ತೊಬ್ಬ ಎನ್‌ಟಿಆರ್ ಆಗಬಹುದಾ?

ಎನ್‌ಟಿಆರ್ ಮೇನಿಯಾ?

ಹಿಂದಿಯ ಅಮಿತಾಭ್ ಮತ್ತು ತಮಿಳಿನ ರಜನಿ ಬಿಟ್ಟರೆ ಅತೀಹೆಚ್ಚು ಸಂಭಾವನೆ ಪಡೆಯುವ ನಟನೆಂದರೆ ಆತ ಚಿರಂಜೀವಿ. ಸದ್ಯ ತೆಲುಗಿನ ಬಾಕ್ಸ್ ಆಫೀಸಿನ ಆರಾಧ್ಯದೈವ. ತನ್ನದೇ ಪಕ್ಷ ಕಟ್ಟಿ ಅಧಿಕಾರಕ್ಕೆ ಬರುವ ಛಾತಿ ಇವತ್ತಿಗೂ ರಜನಿಗಿಲ್ಲ, ಅಮಿತಾಭ್ ಈಗಾಗಲೇ ಕೈಸುಟ್ಟುಕೊಂಡಾಗಿದೆ. ಆದರೆ ಚಿರಂಜೀವಿ ಯಾವ ಧೈರ್ಯದ ಮೇಲೆ ಸ್ವಂತ ಪಕ್ಷ ಕಟ್ಟಿ ಆಡಳಿತಾರೂಢ ಕಾಂಗ್ರೆಸ್ ಮತ್ತು ಆಂಧ್ರದ ವಿರೋಧ ಪಕ್ಷವಾದ ತೆಲುಗು ದೇಶಂಗೆ ಸೆಡ್ಡು ಹೊಡೆದಿದ್ದಾರೆ?


ಆಪಾಟ ದುಡ್ಡಿದೆಯಾ? ಯಾವ ಗ್ಯಾರಂಟಿಯ ಮೇಲೆ ತಮ್ಮ ಭೂತ ಭವಿಷ್ಯತ್ ವರ್ತಮಾನಗಳೆಲ್ಲವನ್ನೂ ಚಿರಂಜೀವಿ ಪಣಕ್ಕಿಡುತ್ತಾರೆ? ಬಹುಶಃ ಆಂಧ್ರದ ಪರಿಸ್ಥಿತಿಯೇ ಮೆಗಾಸ್ಟಾರ್‌ನನ್ನು ಇಂಥದೊಂದು ನಿರ್ಧಾರಕ್ಕೆ ಕರೆಯುತ್ತಿರಬಹುದಾ?

ಎನ್‌ಟಿಆರ್ ತೆಲುಗುದೇಶಂ ಹುಟ್ಟುಹಾಕಿದ ಕಾಲಕ್ಕೂ ಈಗಿನ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿದೆ. ಆಗ ಆಂಧ್ರದಲ್ಲಿದ್ದದ್ದು ಕಾಂಗ್ರೆಸ್ ಮಾತ್ರ. ಎನ್‌ಟಿಆರ್ ತೆಲುಗರ ಸ್ವಾಭಿಮಾನವನ್ನು ಕೆರಳಿಸಿ, ನಕ್ಸಲೀಯರೇ ನಿಜವಾದ ದೇಶಭಕ್ತರೆಂದು, ಸಾಕ್ಷಾತ್ ಶ್ರೀಕೃಷ್ಣನ ವೇಷ ಧರಿಸಿ ಆಂಧ್ರದ ಉದ್ದಗಲಕ್ಕೂ ಹೊಸದೊಂದು ಅಲೆಯನ್ನೇ ಎಬ್ಬಿಸಿದ್ದು ಆವತ್ತಿನ ಇತಿಹಾಸವಾಗಿತ್ತು. ಎನ್‌ಟಿಆರ್ ತೆಲುಗರ ಪಾಲಿಗೆ ಶ್ರೀಕೃಷ್ಣನ ಅವತಾರವೂ ಹೌದು. ಶ್ರೀರಾಮಚಂದ್ರನ ಪ್ರತಿರೂಪವೂ ಹೌದಾಗಿತ್ತು. ಬೆನ್ನಿಗೆ ಕಮ್ಮ ಜಾತಿಯ ಬೆಂಬಲವಿತ್ತು.

ಅಂಥಾ ಇಂದಿರಾ ಅಲೆಯನ್ನೇ ಆಂಧ್ರದ ಮಣ್ಣಿನಿಂದ ಹಿಮ್ಮೆಟ್ಟಿಸಿದ ಎನ್‌ಟಿಆರ್ ಕಾಲವೇ ಬೇರೆ, ಈಗಿನ ಪರಿಸ್ಥಿತಿಯೇ ಬೇರೆ. ಎನ್‌ಟಿಆರ್ ಬೆನ್ನಿಗಿದ್ದ ಕಮ್ಮ ಜನಾಂಗದಷ್ಟೇ ದೊಡ್ಡ ಜಾತಿಯಾದ ಬಲಿಜ ಅರ್ಥಾತ್ ಕಾಪು ಜನಾಂಗ ಚಿರಂಜೀವಿಯನ್ನು ಬೆಂಬಲಿಸುವುದು ಶತಸ್ಸಿದ್ಧ. ಆಂಧ್ರದ ಮೂರು ಪ್ರಮುಖ ಜಾತಿಗಳ ಪೈಕಿ ಅತೀ ಹೆಚ್ಚು ಸಂಖ್ಯೆಯಲ್ಲಿರುವ ದಲಿತರಲ್ಲಿ ಈಗಾಗಲೇ ಎಡ-ಬಲ ಬಿರುಕು ಮೂಡಿಬಿಟ್ಟಿದೆ. ಉಳಿದಂತೆ ಕಾಪು, ಕಮ್ಮ ಮತ್ತು ರೆಡ್ಡಿಗಳೇ ಆಂಧ್ರದ ಮುಖ್ಯ ಜಾತಿಗಳು. ಸಹಜವಾಗೇ ರೆಡ್ಡಿಗಳು ಕಾಂಗ್ರೆಸ್ ಬೆನ್ನಿಗೂ, ಕಮ್ಮಾ ಜನಾಂಗ ತೆಲುಗುದೇಶಂನ ಚಂದ್ರಬಾಬು ನಾಯ್ಡು ಬೆಂಬಲಕ್ಕೂ ನಿಲ್ಲುತ್ತಾರೆ. ಶೇ. 20 ರಷ್ಟಿರುವ ಕಮ್ಮ ಮತ್ತು ಶೇ. 15 ರಷ್ಟಿರುವ ರೆಡ್ಡಿಗಳ ಮುಂದೆ ಚಿರಂಜೀವಿಯ ಕಾಪು ಜನಾಂಗ ಅತೀ ಹೆಚ್ಚು ಅಂದರೆ ಶೇ. 28 ರಷ್ಟಿದೆ. ಅದರರ್ಥ ಆಂಧ್ರದ ಮಿಕ್ಕ ಹಿಂದುಳಿದ ವರ್ಗಗಳಾದ ಕುಂಬಾರ, ಬೆಸ್ತರು, ಕುರುಬರು ಮತ್ತು ವಡ್ಡರು ಕೂಡ ತಾವು ಹಿಂದುಳಿದ ವರ್ಗಗಳೆಂಬ ಒಂದೇ ಕಾರಣಕ್ಕೆ ಚಿರಂಜೀವಿಯನ್ನು ಬೆಂಬಲಿಸುತ್ತಾರೆಂದಲ್ಲ.

ತೆಲುಗರ ಸ್ವಾಭಿಮಾನ

ಅರಸು ಅಥವಾ ಸಿದ್ಧರಾಮಯ್ಯನವರ ಹಾಗೆ ಚಿರಂಜೀವಿಗೆ ಹಿಂದುಳಿದ ವರ್ಗಗಳ ನಾಯಕನೆಂಬ ಇಮೇಜಿಲ್ಲ. ಯಾವುದೇ ಜನಪರ ಹೋರಾಟದ ಅಥವಾ ಚಳವಳಿಯ ಹಿನ್ನೆಲೆಯಿಲ್ಲ. Of course ಎನ್‌ಟಿಆರ್‌ಗೂ ಇಂಥ ಯಾವುದೇ ಹಿನ್ನೆಲೆಗಳಿರಲಿಲ್ಲ. ಆದರೆ ಪೌರಾಣಿಕ ಪಾತ್ರಗಳ ಮೂಲಕ ತೆಲುಗರ ಸಾಂಸ್ಕೃತಿಕ ಸ್ಮೃತಿಯಲ್ಲಿ ಎನ್‌ಟಿಆರ್‌ಗೊಂದು ಇಮೇಜ್ ಇತ್ತು. ಆದರೆ ಚಿರಂಜೀವಿ ಹಾಗಲ್ಲ. ಆತ ಪಕ್ಕಾ ಹೊಸ ಪೀಳಿಗೆಯ ವಕ್ತಾರ. ಮುಠಾಮೇಸ್ತ್ರಿ, ಗ್ಯಾಂಗ್ ಲೀಡರ್, ಠಾಗೂರ್, ಇಂದ್ರ, ಹಿಟ್ಲರ್ ಇತ್ಯಾದಿ ಚಿರಂಜೀವಿಯ ಪಾತ್ರಗಳೆಲ್ಲವೂ ಈ ಕಾಲದ ಪಡ್ಡೆಹುಡುಗರ ಮನಸೆಳೆದಿದ್ದೇ ಹೆಚ್ಚು.


ವೈ.ಎಸ್.ರಾಜಶೇಖರ್ ರೆಡ್ಡಿ

ಇಂಥ ಪಡ್ಡೆ ಹುಡುಗರನ್ನು ನೆಚ್ಚಿಕೊಂಡು ರಾಜಕೀಯ ಮಾಡಲು ಹೊರಟ ಚಿರಂಜೀವಿಗೆ ಬಹುಶಃ ವಾಸ್ತವದ ಅರಿವಿಲ್ಲವೆ? ಆವತ್ತು ಏಕೈಕ ಶಕ್ತಿಯಾಗಿದ್ದ ಕಾಂಗ್ರೆಸ್ ಎದುರು ಎನ್‌ಟಿಆರ್ ಬಳಿ ತೆಲುಗು ಸ್ವಾಭಿಮಾನದ ಪ್ರಶ್ನೆಯಿತ್ತು, ಆದರೆ ಚಿರಂಜೀವಿಗೆ ಆ ಅವಕಾಶವೂ ಇದ್ದಂತಿಲ್ಲ. ಏಕೆಂದರೆ ತೆಲುಗುದೇಶಂನ ದುರಾಡಳಿತವನ್ನು ಜನ ಈಗಾಗಲೇ ನೋಡಾಗಿದೆ. ಅಧಿಕಾರ ಸಿಕ್ಕ ಮರುಗಳಿಗೆಯಿಂದಲೇ ವಿದೇಶಿ ಕಂಪೆನಿಗಳಿಗೆ ಆಂಧ್ರವನ್ನು ಅಡವಿಟ್ಟು, ಜನಪರ ಹೋರಾಟಗಳೆಲ್ಲವನ್ನೂ ಬಗ್ಗುಬಡಿದು, ಇಡೀ ಆಂಧ್ರವನ್ನೇ ಸಿಂಗಾಪೂರ್ ಮಾಡುತ್ತೇನೆಂದು ರಸ್ತೆ ಕಾಮಗಾರಿಗಳ ಮಹಾಪೂರವನ್ನೇ ಹರಿಸಿದ ಚಂದ್ರಬಾಬು ನಾಯ್ಡು ಕಾಂಟ್ರಾಕ್ಟ್ ಕಮಿಷನ್ ಹೊಡೆದದ್ದು ಬಿಟ್ಟರೆ ಆಂಧ್ರಕ್ಕೆ ಕಾಣಿಕೆಯಾಗಿ ಕೊಟ್ಟಿದ್ದು ನಿರುದ್ಯೋಗ ಮಾತ್ರ. ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಅಧಿಪತಿ ರಾಜಶೇಖರ ರೆಡ್ಡಿ ಚಂದ್ರಬಾಬುವಿನಷ್ಟು ಅನಾಹುತಕಾರಿಯಲ್ಲ. ರೈತರಿಗೆ ಮತ್ತು ಮಹಿಳೆಯರಿಗೆ ನಾಲ್ಕಾಣೆಯ ಬಡ್ಡಿದರದಲ್ಲಿ ಸಾಲ ಕೊಡುತ್ತೇನೆಂದ. ದಲಿತರಿಗೆ ಇಂದಿರಮ್ಮ ಹೌಸಿಂಗ್ ಕಾಲೋನಿಗಳನ್ನು ಕಟ್ಟಿಸಿಕೊಟ್ಟ. ಪ್ರತಿ ದಲಿತ ಕುಟುಂಬಕ್ಕೆ ತಲಾ ಎರಡೆಕರೆಯಂತೆ ಭೂಮಿಯನ್ನು ಕೊಟ್ಟ. ನೀರಾವರಿ ಯೋಜನೆಗಳಿಗೆ ಪ್ರಾಮುಖ್ಯತೆಯಿತ್ತ. ಹೃದ್ರೋಗಿಗಳು, ಕ್ಯಾನ್ಸರ್ ರೋಗಿಗಳಿಗಂತಲೇ ಸರ್ಕಾರಿ ಪಾಲಸಿಗಳನ್ನು ತಂದ. ಚಂದ್ರಬಾಬುವಿನಂತೆ ರೈತರ ಭೂಮಿ ಕಿತ್ತು ಎಸ್‌ಇಜೆಡ್‌ಗಳಿಗೆ ಮಣೆ ಹಾಕಲಿಲ್ಲ. ನಕ್ಸಲೀಯರ ನರಮೇಧಕ್ಕೂ ಕೈಹಾಕಿಲ್ಲ.


ಮೂರನೇ ಶಕ್ತಿ

ಸದ್ಯ ರಾಜಶೇಖರ ರೆಡ್ಡಿಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತೆಲುಗರಿಗೆ ಅಂಥಾ ತಕರಾರೇನೂ ಇದ್ದಂತಿಲ್ಲ. ಇಂಥಾ ಸ್ಥಿತಿಯಲ್ಲಿ ಚಿರಂಜೀವಿಯ ಹೊಸ ಪಕ್ಷವನ್ನು ಜನ ಹೇಗೆ ಸ್ವೀಕರಿಸುತ್ತಾರೆ? ಈಗಾಗಲೇ ಆಂಧ್ರದ ಹಳ್ಳಿಹಳ್ಳಿಗಳಲ್ಲೂ ಕಾಂಗ್ರೆಸ್ ಮತ್ತು ತೆಲುಗುದೇಶಂ ಬೇರುಬಿಟ್ಟಾಗಿದೆ. ಪ್ರತಿಹಳ್ಳಿಯಲ್ಲೂ ಮೂರನೇ ಗುಂಪೊಂದು ತಲೆ ಎತ್ತುವುದು ಸುಲಭದ ಮಾತಲ್ಲ. ಅಷ್ಟಕ್ಕೂ ಚಿರಂಜೀವಿ ತನ್ನ ಪಕ್ಷಕ್ಕೊಂದು ಹೆಸರು, ಸಿದ್ಧಾಂತ, ಪ್ರಣಾಳಿಕೆ, ಕಾರ್ಯಕ್ರಮ ಯಾವುದನ್ನೂ ಘೋಷಿಸಿಲ್ಲ. ಕೆಲವರು 'ಚಿರು ಪಾರ್ಟಿ' ಅಂತಲೂ ಹಲವರು 'ಜೈ ಚಿರಂಜೀವಾ' ಎಂದೂ ಹೆಸರೂ ಸೂಚಿಸಿದ್ದಾರೆ. ಇನ್ನೂ ಕೆಲವರು ಎನ್‌ಟಿಆರ್ ತೆಲುಗು ದೇಶಂ ಎಂದು ಹೆಸರಿಟ್ಟ ಹಾಗೆ ಚಿರಂಜೀವಿ ತನ್ನ ಪಕ್ಷಕ್ಕೆ ಮನದೇಶಂ ಅಥವಾ ಪ್ರಜಾಪಾರ್ಟಿ ಎಂಬ ಹೆಸರಿಡಬಯಸುತ್ತಾರೆ. ಆದರೆ ಚಿರಂಜೀವಿ ಗುಟ್ಟು ಬಿಡುತ್ತಿಲ್ಲ. ಆಗಸ್ಟ್ 26 ರ ತಿರುಪತಿ ಸಮಾವೇಶದಲ್ಲೇ ಎಲ್ಲವನ್ನೂ ಬಹಿರಂಗಪಡಿಸುತ್ತಾರಂತೆ.

ತಿರುಪತಿ ಸಮಾವೇಶಕ್ಕೆಂದು ಆಂಧ್ರಾದ್ಯಂತ ಈಗಾಗಲೇ 600 ಬಸ್ಸುಗಳನ್ನು ಕಾದಿರಿಸಲಾಗಿದೆ. ಆವತ್ತು ಕಮ್ಮಿಯೆಂದರೂ ಹದಿನಾರು ರೈಲುಗಳು ಆಂಧ್ರದ ವಿವಿಧ ಭಾಗಗಳಿಂದ ಅಭಿಮಾನಿಗಳನ್ನು ಹೊತ್ತು ತಿರುಪತಿಗೆ ಬರಲಿವೆ. ತಿರುಪತಿಯ ರಾಜೀವ್‌ನಗರ ಮೈದಾನದ ಸಾಮರ್ಥ್ಯವೇ ಏಳು ಲಕ್ಷವಾದರೆ ಹತ್ತು ಲಕ್ಷ ಮಂದಿಯನ್ನು ಸೇರಿಸುವುದು ಚಿರಂಜೀವಿಯ ಉದ್ದೇಶ. ಬರುವ ಅತಿಥಿಗಳು ಮತ್ತು ಪತ್ರಕರ್ತರಿಗೆಂದೇ ವಿವಿಧ ಹೋಟೆಲುಗಳ ಮುನ್ನೂರು ರೂಮುಗಳೂ, ಎಪ್ಪತ್ತಕ್ಕೂ ಹೆಚ್ಚು ಮದುವೆ ಛತ್ರಗಳು, ನೆರೆದ ಅಭಿಮಾನಿ

▶▶▶

ಸೇವೆಯ ಮೊದಲ ಗುರುವೇ ರಜನಿ



ಬಹುಶಃ ಟಾಗೂರ್ ಚಿತ್ರದ ಯಶಸ್ಸೇ ಚಿರಂಜೀವಿಯ ರಾಜಕೀಯ ಪ್ರವೇಶಕ್ಕೆ ಪ್ರೇರಣೆ ನೀಡಿತ್ತೇ?

ಏಕೆಂದರೆ ಇಸವಿ 2000ದ ತನಕ ಚಿರಂಜೀವಿ ಸಮಾಜಸೇವೆ, ಅಭಿಮಾನಿಗಳ ಸಂಘಟನೆ, ಇತ್ಯಾದಿಗಳ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ. ಬರುತ್ತಿದ್ದ ಸಿನಿಮಾಗಳು ಕೂಡಾ ಗ್ಯಾಂಗ್ ಲೀಡರ್, ಮುಠಾಮೇಸ್ತ್ರಿ, ರಿಕ್ಷಾವೋಡು ಥರದ ಆಕ್ಷನ್ ಮತ್ತು ಮಸಾಲೆ ಚಿತ್ರಗಳೇ. ಇಬ್ಬರು ಹೀರೋಯಿನ್, ಡಬ್ಬಲ್ ಮೀನಿಂಗ್ ಡೈಲಾಗು, ಬ್ರೇಕ್ ಡಾನ್ಸು, ಫೈಟಿಂಗ್‌ಗಳೇ ತುಂಬಿರುತ್ತಿದ್ದ ಇಂಥ ಚಿತ್ರಗಳು ವಿಕೃತಿಯನ್ನು ಬಿತ್ತುತ್ತಿದ್ದವೇ ಹೊರತು ಸಾಮಾಜಿಕ ಜವಾಬ್ದಾರಿಯಿರುತ್ತಿರಲಿಲ್ಲ. ಚಿರಂಜೀವಿಯ ಜನಪ್ರಿಯತೆಯನ್ನು ಕಂಡು ಕರುಬಿದ ಆಗ ಮುಖ್ಯಮಂತ್ರಿಯಾಗಿದ್ದ ಚಂದ್ರಬಾಬು ನಾಯ್ಡು ಒಂದು ಹಂತದಲ್ಲಿ ಕೊಟ್ಟ ಕಾಟ ಅಷ್ಟಿಷ್ಟಲ್ಲ.

ಆದರೆ 2000ದ ಹೊತ್ತಿಗೆ ಚಿರಂಜೀವಿಯ ಸ್ಟೈಲೇ ಬದಲಾಯಿತು. ಭ್ರಷ್ಟ ಮತ್ತು ಪಾತಕಿ ರಾಜಕಾರಣಿಗಳ ವಿರುದ್ಧ ಸೆಣಸಾಡುವ ನಿರುದ್ಯೋಗಿ ಯುವಕನ ಪಾತ್ರದಲ್ಲಿ ಚಿರಂಜೀವಿ ನಟಿಸಿದ 'ಇಂದ್ರ' ಆಂಧ್ರಾದ್ಯಂತ ಜಯಭೇರಿ ಬಾರಿಸಿತ್ತು. ಅದರ ಉಪಶೀರ್ಷಿಕೆಯೇ 'Born for the people' ಅಂದರೆ 'ಹುಟ್ಟಿದ್ದೇ ಜನರಿಗಾಗಿ' ಎಂದಿತ್ತು. ನಂತರ ಬಂದದ್ದು ಠಾಗೂರ್. ಅದು ಕೂಡ ಕಾಲೇಜಿನ ಲೆಕ್ಚರರ್ ಓರ್ವ ತನ್ನ ವಿದ್ಯಾರ್ಥಿಗಳ ಮೂಲಕ ಭ್ರಷ್ಟ ಅಧಿಕಾರಿಗಳನ್ನೂ ಮತ್ತು ರಾಜಕಾರಣಿಗಳನ್ನು ಕೊಲ್ಲಿಸುವ ಚಿತ್ರವಾಗಿತ್ತು. ಅನಂತರ ಬಂದ 'ಸ್ಟಾಲಿನ್' ಪರೋಪಕಾರ ಮಾಡುವುದನ್ನ ಧ್ಯೇಯವಾಗಿಸಿಕೊಂಡ ಯುವಕನ ಕತೆಯುಳ್ಳ ಚಿತ್ರ. ಈ ಮೂರು ಚಿತ್ರಗಳು ಒಂದರ ಮೇಲೊಂದು ಸೂಪರ್ ಹಿಟ್ಟಾದವು. ಅದೇ ಹೊತ್ತಿಗೆ ಚಂದ್ರಬಾಬು ಪಕ್ಷವೂ ನೆಲಕಚ್ಚಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು.

ಆತನಕ ತನ್ನ ಸಿನಿಮಾ ಮತ್ತು ಕಾರ್ ಶೋಕಿಗಷ್ಟೇ ಸೀಮಿತಗೊಂಡಿದ್ದ ಚಿರಂಜೀವಿಗೆ ಏಕಾಏಕಿ ಅಭಿಮಾನಿಗಳ ಸಂಘಟನೆ ಮತ್ತು ಸಮಾಜಸೇವೆಯ ಖಯಾಲಿ ಶುರುವಾಯಿತು. ಆಂಧ್ರಾದ್ಯಂತ ಚಿರಂಜೀವಿ ಅಭಿಮಾನಿಗಳ ಹೊಸಹೊಸ ಶಾಖೆಗಳು ತಲೆಎತ್ತಿದವು. ಚಿರಂಜೀವಿ ಚಾರಿಟಬಲ್ ಟ್ರಸ್ಟ್ ಹುಟ್ಟಿಕೊಂಡು ಪ್ರಮುಖ ನಗರಗಳಲ್ಲಿ ಬ್ಲಡ್ ಬ್ಯಾಂಕ್‌ಗಳು ಸ್ಥಾಪನೆಗೊಂಡವು. ನೇತ್ರ ಚಿಕಿತ್ಸಾ ಶಿಬಿರ, ಅಂಗವಿಕಲರ ಸೇವೆ, ನೆರೆ ಸಂತ್ರಸ್ತರಿಗೆ ಪರಿಹಾರ ಇತ್ಯಾದಿಗಳೆಲ್ಲವನ್ನೂ

ಗ್ ಮೇಲೆ ಪುಷ್ಪವೃಷ್ಟಿಗೆಂದೇ ವಿಶೇಷ ಹೆಲಿಕಾಪ್ಟರ್, ಇಪ್ಪತ್ತಕ್ಕೂ ಅಧಿಕ ರಕ್ಕಸ ಟೀವಿ ಪರದೆಗಳು ಮತ್ತು ಇದೆಲ್ಲವನ್ನೂ ನಿಭಾಯಿಸಲೆಂದೇ ದೇಶದ ಹೆಸರಾಂತ ಕಂಪೆನಿಯಾದ ವಿಜ್‌ಕ್ರಾಫ್ಟ್ ಇಂಟರ್‌ನ್ಯಾಷನಲ್!

ಹರಿದುಬಂದ ನಾಯಕರು

ಲೆಕ್ಕಾಚಾರದಂತೆ ಎಲ್ಲವೂ ನಡೆಯಿತೆಂದರೆ ಚಿರು ಸಮಾವೇಶ ಆಂಧ್ರದ ಇತಿಹಾಸದಲ್ಲೇ ನಭೂತೋ ನಭವಿಷ್ಯತಿಯಾಗುತ್ತದೆ. ಆಂಧ್ರದ ಉದ್ದಗಲಕ್ಕೂ ಚಿರಂಜೀವಿಯ ಆಳೆತ್ತರದ ಕಟೌಟುಗಳು, ಪ್ರತಿ ಅಂಗಡಿಯಲ್ಲೂ ಆತನ ಗುಣಗಾನದ 'ಜೈ ಚಿರಂಜೀವಾ' ಎಂಬ ರಾಶಿರಾಶಿ ಸೀಡಿಗಳು, ಯಾವುದೇ ಪತ್ರಿಕೆ ತೆರೆದರೂ ಆತನ ರಾಜಕೀಯ ಪ್ರವೇಶದ ಕುರಿತೇ ಸುದ್ದಿಗಳು. ಸದ್ಯ ಆಂಧ್ರದ ಮಟ್ಟಿಗೆ ಚಿರಂಜೀವಿ ಎಂಬುದು ಬಿರುಗಾಳಿಯಿದ್ದಂತೆ.

ಚಿರಂಜೀವಿಯ ಹೊಸ ಪಕ್ಷ ತನ್ನ ಲೆಕ್ಕಕ್ಕೇ ಇಲ್ಲ ಎಂಬಂತೆ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ಗುಡುಗಿದ್ದಾರೆ. ವಿರೋಧಿ ನಾಯಕ ಚಂದ್ರಬಾಬು ನಾಯ್ಡು ಕೂಡ ಅದೊಂದು ಶಕ್ತಿಯೇ ಅಲ್ಲ ಎನ್ನುತ್ತಾರೆ. ಆದರೆ ವಾಸ್ತವವೇ ಬೇರೆ. ಚಿರಂಜೀವಿ ತನ್ನ ಹೊಸ ಪಕ್ಷವನ್ನು ಘೋಷಿಸುತ್ತಿದ್ದಂತೆ ಆಂಧ್ರದ ಹಾಲಿ ಕಾಂಗ್ರೆಸ್ ಸಂಸದ ಹರಿರಾಮ್ ಜೋಗಯ್ಯ ಪಕ್ಷ ಮತ್ತು ಎಂ.ಪಿ. ಸ್ಥಾನ ಎರಡಕ್ಕೂ ರಾಜೀನಾಮೆ ಕೊಟ್ಟು ಚಿರಂಜೀವಿಯ ಪಕ್ಷ ಸೇರಿದ್ದಾರೆ. ತೆಲುಗುದೇಶಂನ ಮಾಜಿ ಸಂಸದರಾದ ಸಿ. ರಾಮಚಂದ್ರಯ್ಯ, ಬೊಮ್ಮಾನಾಗಿರೆಡ್ಡಿ, ಆತನ ಪತ್ನಿ ಮತ್ತು ಮಾಜಿ ಮಂತ್ರಿ ಶೋಭಾ ನಾಗಿರೆಡ್ಡಿ, ಮತ್ತೊಬ್ಬ ಮಾಜಿ ಮಂತ್ರಿ ಕೆ.


ರ್‍ಯಾಲಿಯಲ್ಲಿ ಚಿರು ಅಭಿಮಾನಿಗಳು

ವಿದ್ಯಾಧರ ರಾವ್, ಮಾಜಿ ಎಮ್ಮೆಲ್ಸಿ ಕಾಮಿನೇನಿ ಶ್ರೀನಿವಾಸ್, ಮಾಜಿ ಮಂತ್ರಿ ಸಿಂಹಾದ್ರಿ ಸತ್ಯನಾರಾಯಣರ ಪುತ್ರ ಡಾ. ಚಂದ್ರಶೇಖರ್ ಹೀಗೆ ಆಂಧ್ರದ ಕಾಂಗ್ರೆಸ್ ಮತ್ತು ತೆಲುಗುದೇಶಂನಂಥ ಪ್ರಭಾವಿ ಪಕ್ಷಗಳನ್ನೇ ತೊರೆದು ನಾಯಕರು ಚಿರಂಜೀವಿಯ ಪಕ್ಷ ಸೇರುತ್ತಿದ್ದಾರೆ. ಈ ಪೈಕಿ ಚಿರಂಜೀವಿಗೆ ಒದಗಿದ ಅತಿದೊಡ್ಡ ಬೆಂಬಲವೆಂದರೆ ಹೆಂಡದ ದೊರೆ ಆದಿಕೇಶವುಲು. ಈತ ಸದ್ಯ ತೆಲುಗುದೇಶಂನ ಚಿತ್ತೂರು ಸಂಸದ. ಮೊನ್ನೆ ನಡೆದ ಅವಿಶ್ವಾಸ ನಿರ್ಣಯದಲ್ಲಿ ಚಂದ್ರಬಾಬುವನ್ನೇ ಧಿಕ್ಕರಿಸಿ ಕಾಂಗ್ರೆಸ್ ಬೆಂಬಲಿಸಿದ ಆದಿಕೇಶವುಲು ವಿರುದ್ಧ ಮೊದಲೇ ಪಕ್ಷಕ್ಕೆ ಸಿಟ್ಟಿತ್ತು. ಇನ್ನೆಲ್ಲಿ ತನ್ನನ್ನು ಚಂದ್ರಬಾಬು ವಜಾ ಮಾಡುತ್ತಾರೋ ಎನ್ನುವಾಗಲೇ ಖದೀಮ ಆದಿಕೇಶವುಲು ಚಿರಂಜೀವಿಯ ಕಾಲಿಗೆ ಬಿದ್ದಿದ್ದಾನೆ. ಜೊತೆಗೆ ಕಾಂಗ್ರೆಸ್ ಮತ್ತು ತೆಲುಗುದೇಶಂಗಳ ಜಿಲ್ಲಾ ಮಟ್ಟದ ಅನೇಕ ಮುಖಂಡರು ಪಕ್ಷ ತೊರೆದು ಚಿರಂಜೀವಿಯ ಪಕ್ಷ ಸೇರುತ್ತಿದ್ದಾರೆ.


ಹೊಸಗಾಳಿ?

ಆದರೆ ಚುನಾವಣೆಗಿನ್ನೂ ವರ್ಷ ಬಾಕಿಯಿದೆ. ಸದ್ಯ ಪ್ರತ್ಯೇಕ ತೆಲಂಗಾಣದ ವಿಷಯವೇ ಆಂಧ್ರದ ಅತೀದೊಡ್ಡ ಸಮಸ್ಯೆ. ಚಿರಂಜೀವಿ ಐಕ್ಯ ಆಂಧ್ರವನ್ನು ಪ್ರತಿಪಾದಿಸುತ್ತಾರೆ. ಹೊಸ ಪಕ್ಷ ಕಟ್ಟುವ ಸುದ್ದಿ ಹೊರಬೀಳುತ್ತಿದ್ದಂತೆ ಬಿಜೆಪಿ ರಾಷ್ಟ್ರನಾಯಕ ಎಲ್.ಕೆ. ಅಡ್ವಾಣಿಯೇ ಫೋನ್ ಮಾಡಿ ಚಿರಂಜೀವಿಗೆ ಶುಭ ಕೋರಿದ್ದು ಮುಸ್ಲಿಮರಲ್ಲಿ ಆತಂಕ ಹುಟ್ಟಿಸಿದೆ. ಕಾಪು ಜಾತಿಯವರೇ ಅಧಿಕವಾಗಿರುವ ಗುಂಟೂರು, ಕೃಷ್ಣಾ, ವೆಸ್ಟ್ ಗೋದಾವರಿ, ಈಸ್ಟ್ ಗೋದಾವರಿ ಜಿಲ್ಲೆಗಳ ರಾಜಮಂಡ್ರಿ, ಕಾಕಿನಾಡ ಪ್ರದೇಶಗಳಲ್ಲಿ ಸದ್ಯ ಚಿರಂಜೀವಿಗೆ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದೆ. ಅಮೆರಿಕದ ಬಹುತೇಕ ತೆಲುಗರೆಲ್ಲ ಸೇರಿ ಚಿರಂಜೀವಿ ಪಕ್ಷಕ್ಕೆಂದು ನಿಧಿ ಸಂಗ್ರಹಿಸುತ್ತಿದ್ದಾರೆ. ಆಂಧ್ರದ ಒಟ್ಟೂ 294 ವಿಧಾನಸಭಾ ಕ್ಷೇತ್ರಗಳ ಪೈಕಿ ಕಾಪು ಪ್ರಾಬಲ್ಯದ ಜಿಲ್ಲೆಗಳ ಸರಿಸುಮಾರು ಐವತ್ತು ಸ್ಥಾನಗಳಲ್ಲಿ ಚಿರಂಜೀವಿಯ ಅಭ್ಯರ್ಥಿಗಳು ಸಲೀಸಾಗಿ ಗೆಲ್ಲಬಹುದು. ಮಿಕ್ಕಂತೆ ಚಿರಂಜೀವಿ ಪಕ್ಷದಿಂದ ಚಂದ್ರಬಾಬು ನಾಯ್ಡುವಿನ ತೆಲುಗುದೇಶಂಗೇ ಹೆಚ್ಚು ಹಾನಿಯಾಗುತ್ತದೆ. ಕಾಂಗ್ರೆಸ್‌ನ ಶೇ. 20 ರಷ್ಟು ಮತದಾರರು ಚಿರಂಜೀವಿಯನ್ನು ಬೆಂಬಲಿಸಬಹುದು.

ಕೇವಲ ಒಂಭತ್ತೇ ತಿಂಗಳಲ್ಲಿ ಪಕ್ಷ ಕಟ್ಟಿ ಮುಖ್ಯಮಂತ್ರಿಯಾದ ಎನ್‌ಟಿಆರ್‌ನಂತೆ ಚಿರಂಜೀವಿ ಕೂಡ ಒಂದೇ ವರ್ಷಕ್ಕೆ ಹೊಸ ಪಕ್ಷ ಸ್ಥಾಪಿಸಿ ಮುಖ್ಯಮಂತ್ರಿಯಾಗುವ ಕನಸು ಕಾಣುತ್ತಿದ್ದಾನೆ. ಕಾಂಗ್ರೆಸ್ ಮತ್ತು ತೆಲುಗುದೇಶಂಗಳೆರಡನ್ನೂ ತೆಲುಗರು ನೋಡಾಗಿದೆ. ಹೊಸಗಾಳಿ ಬೀಸುತ್ತಾ? ಕಾದು ನೋಡಬೇಕು. ■

ಚಿರಂಜೀವಿಯ ಟ್ರಸ್ಟ್ ವತಿಯಿಂದಲೇ ನಡೆಸಲಾಯಿತು.

ಅಲ್ಲಿಗೆ ಚಿರಂಜೀವಿಯ ರಾಜಕೀಯ ಪ್ರವೇಶಕ್ಕೊಂದು ವೇದಿಕೆ ಸಜ್ಜಾಗಿತ್ತು, ಸ್ವತಃ ರಾಷ್ಟ್ರಪತಿ ಅಬ್ದುಲ್ ಕಲಾಂರನ್ನೇ ಹೈದರಾಬಾದಿಗೆ ಕರೆಸಿದ ಚಿರಂಜೀವಿ ಅವರ ಕೈಯಾರೇ ರಕ್ತದಾನ ಶಿಬಿರಗಳನ್ನು ಉದ್ಘಾಟಿಸಿದ. ತನ್ನ ಹುಟ್ಟಿದ ಹಬ್ಬದಂದು ಪ್ರತಿಅಭಿಮಾನಿಯೂ ಒಂದೊಂದು ಸಸಿ ನೆಡುವಂತೆ ಕರೆಕೊಟ್ಟ. ಬಹುಶಃ ಚಿರಂಜೀವಿಗೆ ಸಮಾಜಸೇವೆಯ ಪಾಠ ಕಲಿಸಿದ್ದು ತಮಿಳಿನ ಸೂಪರ್ ಸ್ಟಾರ್ ರಜನೀಕಾಂತ್. ರಾಜಕೀಯದ ಗಂಧವೇ ಇಲ್ಲದೇ ಪ್ರಚಾರವನ್ನೇ ಬಯಸದೇ ರಜನೀಕಾಂತ್ ಆ ಕಾಲದಿಂದಲೂ ಮಾಡಿಕೊಂಡು ಬಂದಿದ್ದ ಜನಸೇವೆಗೂ ಈಗ ಚಿರಂಜೀವಿ ಶುರುಹಚ್ಚಿಕೊಂಡ ಪ್ರಚಾರಕಾಳಜಿಗೂ ಎಂಥಾ ವ್ಯತ್ಯಾಸವಲ್ಲವೇ? ■



ದ್ಯಾವೇಗೌಡ ಹುಟ್ಟು ಕುರುಬ ಕಂಡ್ರೀ

"ಹಗಲೆಲ್ಲ ಅಕ್ಕ, ರಾತ್ರಿಯೆಲ್ಲ ಪಕ್ಕ" ಎಂಬ ಗಾದೆಗೆ ಪಕ್ಕಾಗಿ ಹೊಂದಿಕೊಳ್ಳುವ ಎಡೂರಪ್ಪನಿಗೆ ಬಿಜೆಪಿ ಸರ್ಕಾರ ಸೀಗಡಿ ಬಲೆಯಂತೆ ಸುತ್ತಿಕೊಂಡಿದೆಯಂತಲ್ಲಾ. ಒಂದೆಡೆ ಅಮೆರಿಕದಲ್ಲಿ ಅಕ್ಕನನ್ನು ನೋಡಲು ಹೋಗುವುದೊ, ಇಂಗ್ಲೆಂಡಿನ ಕೈಗಾರಿಕೆ ಜನರನ್ನು ಮಾತನಾಡಿಸಲು ಹೋಗುವುದೊ, ಇಲ್ಲ ಮುಂದಿನ ಲೋಕಸಭಾ ಚುನಾವಣೆಗಾಗಿ ಜಿಲ್ಲೆಗಳನ್ನು ಸಜ್ಜುಗೊಳಿಸುವುದೊ ಎಂಬ ತಾರಾತಿಗಡಿ ಲೆಕ್ಕಾಚಾರದಲ್ಲಿ ದಿಕ್ಕೇತೋಚ ದಂತಾಗಿದೆಯಂತಲ್ಲಾ. ಈ ನಡುವೆ ಆಡಳಿತದ ಗಂಧಗಾಳಿಯಿಲ್ಲದ ಮಂತ್ರಿಗಳು, ಅನನುಭವಿ ಶಾಸಕರು, ತುಂಬಲಾರದ ಜೋಳಿಗೆ ಹಿಡಿದು ನಿಂತಿರುವ ರಾಘವೇಶ್ವರನೆಂಬ ಯಾಚಕ, ಇವರೆಲ್ಲರನ್ನು ಸಂಭಾಳಿಸಲಾಗದ ಎಡೂರಪ್ಪನನ್ನು ಸಂಪೂರ್ಣ ಕೈಗೆ ತೆಗೆದುಕೊಂಡಿರುವ ರೆಡ್ಡಿಗಳು ಸದ್ಯಕ್ಕೆ ಗೃಹಖಾತೆಯನ್ನು ಸಂಪೂರ್ಣ ವಶಪಡಿಸಿಕೊಂಡಿವೆಯಂತಲ್ಲಾ. ಇದೇ ರೀತಿ ಮುಂದೆ ಎಲ್ಲಾ ಖಾತೆಗಳ ಮೇಲೂ ಹಿಡಿತ ಸಾಧಿಸಿದರೆ, ಆಗ ಮಾತ್ರ ಹಂಡ್ರೆಡ್ ಪರಸೆಂಟ್ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದು, ಎಡೂರಪ್ಪ ಕೇವಲ ನಾಮಕಾವಸ್ಥೆ ಮುಖ್ಯಮಂತ್ರಿಯಾಗಿ ಕಂಗೊಳಿಸಲಿದ್ದಾರೆಂದು ಉಡುಪಿ ಆಚಾರಿಯ ಪಡೆ ಹಗಲುಗನಸು ಕಾಣುತ್ತಿದೆಯಂತಲ್ಲಾ, ಥೂತ್ತೇರಿ!

ಥೂತ್ತೇರಿ — ಯಾಹೂ

****

ಇಂತಹ ಬೇಸರದ ಸಮಯದಲ್ಲಿ ಕರ್ನಾಟಕ ಕಂಡರಿಯದ ರಾಜಕಾರಣಿಯಾದ ಚಿನ್ನಿಗಪ್ಪನನ್ನು ಮಾತನಾಡಿಸಿ, ಮನಸ್ಸನ್ನು ಹಗುರ ಮಾಡಿಕೊಳ್ಳಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಿದರೆ ಸಿಕ್ಕೇಬಿಟ್ಟರು.

ರಿಂಗ್ ಟೋನ್: "ಕ್ಯಂಚಾಲೊ ಮಚ್ಚಾಲೊ ಯಂಗವ್ರುಲಾ ನಿನ್ ಕನಸ್‌ಗಳು... ಕ್ಯ....

"ಹಲೋ, ಯಾರು?"

"ನಾನು ಸಾರ್, ಪತ್ರಕರ್ತ, ಯಾಹೂ ಅಂತ."

"ಪತ್ರಕರ್ತರೆ ನಮಸ್ಕಾರ. ಈಗ ಮಾತಾಡಕ್ಕೆ ಟೈಮಿಲ್ಲ; ಇನ್ನೊಂದು ವಾರ ಬಿಟ್‌ಗಂಡು ಫೋನ್ ಮಾಡ್ತಿರಾ?"

"ಇಲ್ಲ ಚಿನ್ನಿಗಪ್ಪನೋರೆ, ಈಗ್ಲೆ ಒಂದೆರಡು ಮಾತಾಡಿ. ನಿಮ್ಮ ಅನಾಥಾಶ್ರಮ ಇಂಜಿನಿಯರ್ ಕಾಲೇಜು ಮಾಡಿದ್ರಂತೆ, ಯಾಕ್ ಸಾರ್?"

"ಅನಾಥ ಮಕ್ಳೆ ಬರದೆ ಹೋದ್ರೆ ನಾನೇನು ಶ್ಯಾಟ ಮಾಡ್ಲಿ?"

"ಅನಾಥಾಶ್ರಮ ಮಾಡೋರಲ್ಲಿ ತಂದೆ ಗುಣ, ತಾಯಿ ಗುಣ ಇವೆಲ್ಲ ಇರಬೇಕಾಗುತ್ತಲ್ಲವ ಸಾರ್?"

"ನಮ್ಮತ್ರ ಅವ್ಯಲ್ಲ ಅವೆಕಂಡ್ರೀ. ನಾನೂ ಮಕ್ಕಳೊಂದಿಗ. ಮಗನ್ನ ಓದಿಸಿ, ಬ್ಯಳಿಸಿ, ಎಮ್ಮೆಲ್ಲೆ ಮಾಡಿದ್ದಿನಿ ಕಂಡ್ರಿ."

"ನಿಮ್ಮ ಮಗ ತುಂಬ ಒಳ್ಳೆ ಹುಡುಗ ಸಾರ್. ನೋಡಕ್ಕು ವಳ್ಳೆ ಸಿನುಮ ಈರೊ ಕಂಡಂಗೆ ಕಾಣ್ತನೆ."

"ಅದ್ಕೆ ಕಂಡ್ರಿ, ನಾನು ತುಂಬ ಯೇಚ್ನೆ ಮಾಡಿ ಈ ದ್ಯಾವೇಗೌಡ್ರು, ಮಕ್ಕಳ ಸವಾಸ ಬ್ಯಾಡ ಕಣಪ್ಪ, ಹಾಳಾಗೋಯ್ತಿ, ಹುಟ್ಟು ಮನಿಯಾಳ ಮುಂಡೆಮಕ್ಕಳು ಅವ್ರುರು ಅಂತ ತಲಿಗಿಡಿಯಂಗೆ ಬುದ್ಧಿಯೇಳಿ ಬಿಜೆಪಿಗೆ ಕಳಿಸಿದ್ದಿನಿ."

"ದ್ಯಾವೇಗೌಡ್ರ ಮಕ್ಕಳು ಅಷ್ಟು ಕೆಟ್ಟವೇನ್ರಿ?"

"ಅಯ್ಯೋ, ಕೆಟ್ಟವ್ರು ಅಂತ ಕೇಳ್ತಿರಾ? ಆ ಕುಮಾರ ಸ್ವಾಮಿಗೆ ತಲೆಲಿ ಏನೂಯಿಲ್ಲ, ಇನ್ನು ಆ ರೇವಣ್ಣ ಎತ್ತಿದ್ದಂಗವ್ರುನು. ಅವ್ರುರಪ್ಪನ್ನಂತು ಕೇಳಲೆಬ್ಯಾಡಿ, ಹುಟ್ಟು ಕುರುಬ ಅವ್ರುನು."

"ಮತ್ತೆ ಅಪ್ಪಾಜಿ ಅಂತ ಕರಿತಿದ್ರಿ?"

"ಕರಿಬೇಕಾಯ್ತದೆ ಒಂದೊಂದು ಸತಿಯ. ಆಗ ಅವ್ರುರ ಪಾರ್ಟಿಲಿದ್ದೆ ಮಂತ್ರಿಯಾಗಿದ್ದೆ, ಅದಕಿಂತ್ಲು ಅವ್ರುರೆ ಮಂತ್ರಿ ಮಾಡಿದ್ರು. ಅಪ್ಪಾಜಿ ಅನ್ನಬೇಕು. ಅಂಗಂತ ಕಡೆವರಿಗೂ ಅನ್ನಕ್ಯಾಯ್ತದಾ?"

"ಗಣಿ ದುಡ್ಡಿಗೆ ಸಂಬಂಧಪಟ್ಟಂಗೆ ಸಿ.ಡಿ. ಬಿಡುಗಡೆ ಮಾಡಿ ಅಂದವ್ರುರಲ್ಲ ಕುಮಾರಸ್ವಾಮಿ?"

"ಮಾಡ್ಲಿ, ನನಿಗೂ ಅದೆ ಬೇಕಾಗಿರದು. ಇವ್ರುರು ದುಡ್ಡೀಸಗಂಡು ಬಾ ಅಂದಿದ್ರು. ನಾನೋಗಿ ಕೇಳಿ ಈಸಗಂಡು ಬಂದೆ. ಅದರಿಂದ ನಾನೇನು ಹೆದರದಿಲ್ಲ, ಅವ್ರುರದೂ ಈಚಿಗೆ ಬತ್ತದೆ, ನಂದೂ ಬತ್ತದೆ, ಬರ್ಲಿ ನೋಡನ."

"ಗಣಿದುಡ್ಡ ನೀವು ಕುಮಾರಸ್ವಾಮಿಗೆ ತಂದು ಕೊಡ್ಲಿಲವಂತೆ?"

"ನಾನು ಈಸಗಂಡಿರದು. ಸಿ.ಡಿ.ಲಿರಬವುದು. ಕುಮಾರಣ್ಣನಿಗೆ ಕೊಟ್ಟಿರದು ಇಲ್ಲೆ ಇರಬಹುದು. ನಾನು ಕೊಟ್ಟಿರದು ಸುಳ್ಳು ಅನ್ನದಾದ್ರೆ, ಅವ್ರುನು, ಅವ್ರುನೆದ್ರಿ, ಮಗನ್ನ ಕರಕಂಡು ಧರ್ಮಸ್ಥಳಕ್ಕೆ ಬರ್ಲಿ, ನಾನೂ ನನ್ನೆದ್ರಿ, ಮಗನ್ನ ಕರಕಂಡು ಧರ್ಮಸ್ಥಳಕ್ಕೆ ಬತ್ತಿನಿ. ಇಬ್ರು ಪ್ರಮಾಣ ಮಾಡನ."

"ದನ ತಿನ್ನೊನಿಗೆ ಗೊಬ್ಬರದಾಣೆ ಅಂತ ಕುಮಾರಸ್ವಾಮಿ ಪ್ರಮಾಣ ಮಾಡಿ ಬುಟ್ರೆ ಏನು ಮಾಡ್ತಿರಿ?"

"ನೋಡ್ರಿ ಇವ್ರುರೆ, ಧರ್ಮಸ್ಥಳದ ಮಂಜುನಾಥನ ಸನ್ನಿಧಿ ಅಂದ್ರೆ ಸುಮ್ಮನೆ ಅಲ್ಲ, ಪ್ರಮಾಣ ಮಾಡಿದ ಕೆಲವೇ ದಿನದಲ್ಲಿ ತೋರೇಬಿಡ್ತನೆ."

"ಅಲ್ಲಾ ಚಿನ್ನಿಗಪ್ಪನೋರೆ, ಧರ್ಮಸ್ಥಳದ ಮಂಜುನಾಥ ತಪ್ಪಿತಸ್ಥರಿಗೆ ಶಿಕ್ಷೆ ಕೊಡೊದಾದ್ರೆ ನೀವೇ ಕ್ಯಲಸ ಮಾಡಿದ್ದ ಪೊಲೀಸ್ ಸ್ಟೇಷನ್ ಯಾಕೆ? ಕೋರ್ಟ್ಯಾಕೆ? ಯಲ್ಲಾರು ಹೋಗಿ ಪ್ರಮಾಣ ಮಾಡಬವುದಲ್ಲಾ."

"ನಾನೇಳದ ಸ್ವಲುಪ ಅರ್ಥ ಮಾಡಿಕಳ್ರಿ ಇವರೆ. ಕೋರ್ಟ್‌ನಲ್ಲಿ ಇತ್ಯರ್ಥ ಆಗವೇ ಬ್ಯಾರೆ, ಧರ್ಮಸ್ಥಳದಲ್ಲಿ ಇತ್ಯರ್ಥ ಆಗವೇ ಬ್ಯಾರೆ ಕೇಸು ಕಂಡ್ರಿ."

"ಓ ಧರ್ಮಸ್ಥಳ ಇರದು ನಿಮ್ಮಂಥೋರಿಗೆ ಅನ್ನಿ?"

"ಹೌದು ಮತ್ತೆ? ಆ ಸ್ವಾಮಿನೆ ಇಲ್ದೆಯಿದ್ರೆ ದ್ಯಾವೇಗೌಡ್ರು ಮನಿಯೋರು ಇನ್ನೂ ಆಟ ಆಡೋರು."

"ತಂದೆ ಸಮಾನವಾದ ದೇವೇಗೌಡ್ರ ಬುಟ್ಟು ಬಿಜೆಪಿಗೆ ಹ್ವಂಟ್ರಲ್ಲ ಯಾಕೆ?"

"ಯಾವನೆ ತಂದೆ ಆಗ್ಲಿ ಎಷ್ಟು ದಿನ ಅವ್ರುನತ್ರ ಇರಕ್ಯಾಯ್ತದರಿ? ಪಾಲ ತಗಂಡು ಹೋಗ್ಲೆಬೇಕು. ಅಂಗೆ ನಾನೂ ಹೋಯ್ತಾಯಿದ್ದಿನಿ. ಆಗ ಸರ್ಕಾರ ಮಾಡಬೇಕಾದ್ರೆ ಕುಮಾರಣ್ಣನೆ ದ್ಯಾವೇಗೌಡ್ರ ಬುಟ್ಟು ಮಾಡಲಿಲ್ವೆ, ಅದೂ ಸ್ವಂತ ಮಗ?"

"ಈಗ ಬಿಜೆಪಿಲಿ ಹ್ಯಂಗಿರತಿರಿ?"

"ಯಂಗೆ ಅಂದ್ರೆ, ವಳ್ಳೆ ಚನಾಗೇಳ್ತಿರಿ ಕಂಡ್ರಿ ನೀವು. ಜೆ.ಡಿ.ಎಸ್ನಲಿ ಇದ್ದದಕಿಂತ ಚನ್ನಾಗಿರ್‍ತಿನಿ. ಪಾಪ ಎಡೂರಪ್ಪ ವಳ್ಳೆ ಮನ್ಸ ಕಂಡ್ರಿ."

"ರೆಡ್ಡಿಗಳು?"

"ಅವ್ರುರೂ ವಳ್ಳೆ ಜನ. ದುಡ್ಡಿನ ಮಕ ನೋಡದಿಲ್ಲ. ಈ ದೇವೇಗೌಡನ ಕುಟುಂಬಕ್ಕೆ ಓಲಿಸಿದ್ರೆ ನಿಜವಾಗ್ಲು ವಳ್ಳೆ ಜನ ಕಂಡ್ರಿ ಅವ್ರುರು. ಸುಮ್ಮನೆ ಜನ ರೆಡ್ಡಿಗಳನ್ನ ರೌಡಿಗಳು, ಗಣಿಕಳ್ರು ಅಂತ ಏನೇನೊ ಮಾತಾಡಿಕತ್ತರೆ. ನಿಜವಾಗ್ಲು ದೇವರಂತ ಜನ ಅವ್ರುರು."

"ಆಗೊಂದ ಸತಿ ನೀವು ಅವ್ರುರನ್ನ ಬಾಯಿಗೆ ಬಂದಂಗೆ ಬೋದಿದ್ರಿ?"

"ಆಗ ಜೆಡಿಎಸ್ನಲಿದ್ದೆ ಮಂತ್ರಿಯಾಗಿದ್ದೆ. ದ್ಯಾವೇಗೌಡ್ರು ಅವ್ರುರಿಗೇನಾರ ಬೈಯಪ್ಪ ಅಂತ ಫೋನು ಮಾಡತಿದ್ರು, ಬೈತಿದ್ದೆ. ಈಗ್ಲೂ ಬೈಯಕ್ಯಾಯ್ತದೇನ್ರಿ?"



"ಈಗ ದ್ಯಾವೇಗೌಡ್ರು ಫೋನು ಮಾಡಿದ್ರೆ ಏನು ಮಾಡ್ತಿರಿ?"

"ಮಾಡುತ್ಲೆ ಆಫ್ ಮಾಡಿಬುಡ್ತಿನಿ."

"ದೇವೇಗೌಡ್ರು ನಕಲಿ ಮಣ್ಣಿನ ಮಗ ಅಂದ್ರಲ್ಲ, ಸರಿನೆ?"

"ಈಗ್ಲು ಹೇಳ್ತಿನಿ, ದ್ಯಾವೇಗೌಡ ವಲ ಉತ್ತೊನಲ್ಲ, ಕಳೆ ಕಿತ್ತೋನಲ್ಲ, ಆಗ ಈಗಿನಂಗೆ ಟಾರ್ ರಸ್ತೆ ಇರಲಿಲ್ಲ, ಬರೀ ಮಣ್ಣಿನ ರಸ್ತೆಯಿದ್ದೊ. ಈ ಆಸಾಮಿ ತುಂಡುಗುತ್ತಿಗೆ ಕಂಟ್ರಾಟು ಮಾಡ್ತಿದ್ದ, ತುಂಡು ಗುತ್ತಿಗೆ ಕಂಟ್ರಾಟು ಅಂದ್ರೆ ಒಂದು ಮೈಲಿ ರಸ್ತೆಗೆ ಆ ಕಡೆ ಈ ಕಡೆ ಮಣ್ಣು ತಗುದು ಯಸಿಯದು, ಬಲ್ಲು ಮಾಡದು, ಇದೇ ಅವ್ರುರ ಕ್ಯಲ್ಸ ಕಂಡ್ರಿ. ಈ ರಸ್ತೆಗೆ ಯಸಿಯೋ ಮಣ್ಣದಲ್ಲ, ಅದು ನಕಲಿ ಮಣ್ಣು. ಅಂತ ಮಣ್ಣಲಿ ಕಾಸು ಮಾಡಿ ಮಕ್ಕಳು ಸಾಕಿದ್ರು. ಅದ್ಕೆ ನಾನು ಇವ್ರುರು ನಕಲಿ ಮಣ್ಣಿನಮಕ್ಕಳು ಅಂತ ಮೈಕಲ್ಲೆ ಹೇಳಿದ್ದಿನಿ."

"ದೇವೇಗೌಡ್ರು ಸೇಡು ತೀರಿಸಿಗಂಡ್ರೆ?"

"ತೀರಿಸಿಗಳಕೆ ಬಂದ್ರೆ ನಾನೇನು ಪಟ್ಟೆಯಿಲ್ಲ ಕಂಡ್ರಿ. ನನ್ನ ಇತ್ತೆ ಬಿಜೆಪಿ ಜನವ್ರುರೆ, ಅದರಲ್ಲು ಗಣಿರೆಡ್ಡಿಗಳವ್ರುರೆ. ದ್ಯಾವೇಗೌಡ ಪಂಚೆ ಯಳಿತರೆ ಗೊತ್ತ?"

"ಥೂತ್ತೇರಿ!!!" ■



ನೂರಾರು ವರ್ಷಗಳಿಂದ ಸಾರ್ವಜನಿಕರ ಸ್ವತ್ತಾಗಿದ್ದ, ಸ್ವಾತಂತ್ರ್ಯಾನಂತರ ಸರ್ಕಾರದ ನಿಯಂತ್ರಣದಲ್ಲಿದ್ದ ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ಈಗ ಅದರ ಪರಿವಾರ ದೇವಸ್ಥಾನಗಳ ಸಮೇತ ರಾಮಚಂದ್ರಾಪುರ ಮಠದ ವಶಕ್ಕೆ ಹೋಗಿದೆ. ರಾಜಕೀಯ ಅಧಿಕಾರ ಹಸ್ತಾಂತರಕ್ಕಿಂತ ಸಲೀಸಾಗಿ, ಗಣಿ ಲೂಟಿಗಿಂತ ಸರಾಗವಾಗಿ, ಲಂಚ ಹೊಡೆಯುವುದಕ್ಕಿಂತ ಆರಾಮಾಗಿ, ರಿಯಲ್ ಎಸ್ಟೇಟ್ ಡೀಲ್‌ಗಳಿಗಿಂತ ಸುಸೂತ್ರವಾಗಿ ನಡೆದಿರುವ ಈ 'ದೇವಸ್ಥಾನ ಹಸ್ತಾಂತರ' ಹಾಲಿ ಬಿಜೆಪಿ ಸರ್ಕಾರದ ಮೇಲೆ ಬ್ರಾಹ್ಮಣಶಾಹಿಗಳ ಪ್ರಭಾವ ಎಷ್ಟಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

■ ಬಿಳಿದಾಳೆ ಪಾರ್ವತೀಶ



ಗೋಕರ್ಣದಲ್ಲಿ ಪ್ರತಿಭಟನಾ ಮೆರವಣಿಗೆ

ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದ ತಿಜೋರಿ ಅಕ್ಷರಶಃ ಲೂಟಿಯಾಗಿದೆ.

ಆಗಸ್ಟ್ 14 ರ ನಡು ಮಧ್ಯಾಹ್ನ ಸರ್ಕಾರಿ ಕಾಗದದ ಚೂರೊಂದನ್ನು ಕೈಲಿಡಿದುಕೊಂಡು ನೂರಾರು ಸಶಸ್ತ್ರ ಪೊಲೀಸರನ್ನು ಕರೆದುಕೊಂಡು ಗೋಕರ್ಣ ದೇವಸ್ಥಾನಕ್ಕೆ ನುಗ್ಗಿದ ಜಗದೀಶ ಶರ್ಮ ಹಾಗೂ ಸುಬ್ರಮಣ್ಯ ಎಂಬಿಬ್ಬರು ಕಳ್ಳರು ಲೂಟಿ ಮಾಡಿಕೊಂಡು ಹೋದ ದುಡ್ಡೆಷ್ಟು ಗೊತ್ತೆ?

32 ಲಕ್ಷ ರೂಪಾಯಿ ಕ್ಯಾಷ್!

12 ಕೆಜಿ ಬಂಗಾರ!!

ಕೆಜಿ ಚಿನ್ನಕ್ಕೆ ಇವತ್ತಿನ ಮಾರುಕಟ್ಟೆ ರೇಟು 11.30 ಲಕ್ಷ ರೂಪಾಯಿ.


ಯಡಿಯೂರಪ್ಪನಿಗೆ ತಲೆ ಸಮಾ ಇದೆಯಾ ಎಂಬ ಅನುಮಾನ ಬರುತ್ತಿದೆ. ಪಕ್ಕಾ ಮೆಂಟಲ್ ಗಿರಾಕಿಯೊಬ್ಬ ಮಾತ್ರ ಮಾಡಬಹುದಾದ ಅಸಂಬದ್ಧ ಕೆಲಸವನ್ನು ಯಡ್ಡಿ ಮಾಡಿ ತೋರಿಸಿದ್ದಾರೆ.

ಚೋರ ಗುರುವಿನ ಪಿತೂರಿ

ಕರ್ನಾಟಕದ ಹಾಲಿ ಮಠಾಧೀಶರುಗಳ ಪೈಕಿ ದುಡ್ಡು, ಆಸ್ತಿ ಸಂಪಾದಿಸಲು ಅತ್ಯಂತ ಆಕ್ರಮಣಕಾರಿ ಪ್ರವೃತ್ತಿ ತೋರಿಸುತ್ತಿರುವ ರಾಮಚಂದ್ರಾಪುರ ಮಠದ ರಾಘವೇಶ್ವರ ಸ್ವಾಮಿಗೂ ಗೋಕರ್ಣದ ಮಹಾಬಲೇಶ್ವರ ದೇವಳಕ್ಕೂ ಯಾವುದೇ ಸಂಬಂಧವಿಲ್ಲ, ಈ ಹಿಂದೆಯೂ ಇರಲಿಲ್ಲ, ಈ ದೇವಸ್ಥಾನದ ನಿತ್ಯ ಕೈಂಕರ್ಯ ನಡೆಸುತ್ತಿರುವ ಬ್ರಾಹ್ಮಣ ಪುರೋಹಿತರಲ್ಲಿ ಕೋಟಾ ಬ್ರಾಹ್ಮಣರು, ಹವ್ಯಕ ಬ್ರಾಹ್ಮಣರಿಬ್ಬರೂ ಇದ್ದಾರೆ. ನಿತ್ಯ ಆಡಳಿತ, ಕಾರ್ಯಕ್ರಮಗಳನ್ನು ನಿಭಾಯಿಸಲು ಸರ್ಕಾರವೇ ನೇಮಿಸಿರುವ ಉಪಾಧಿವಂತ ಮಂಡಳವೆಂಬ ಸಮಿತಿಯೂ ಇದೆ.

ಈ ಉಪಾಧಿನಂತರದ್ದೇ ಒಂದು ರಗಳೆ. ಈ ಮಂಡಳದಲ್ಲಿ ಯಾರ್ಯಾರಿರಬೇಕೆಂಬ ಬಗ್ಗೆ ಬೇಕಾದಷ್ಟು ಜಗಳಗಳಾಗಿ ಕೋರ್ಟಿಗೂ ಹೋಗಿತ್ತು. 1928 ರಲ್ಲೊಮ್ಮೆ ಪಟ್ಟಿ ಪ್ರಕಟವೂ ಆಯಿತು. ನಂತರ ಜಗಳ ಮತ್ತೊಮ್ಮೆ ಕೋರ್ಟ್ ಮೆಟ್ಟಲೇರಿತು. (ಕೇಸ್ ನಂ. 1246/49). ಕೊನೆಗೆ 15.12.1949 ರಲ್ಲಿ ಒಂದು ಅಂತಿಮ ತೀರ್ಮಾನವಾಗಿ ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ಮತ್ತದರ ಪರಿವಾರ ದೇವರುಗಳ ನಿತ್ಯ ಕೈಂಕರ್ಯವನ್ನು ಯಾರ್ಯಾರು ನಡೆಸಬೇಕೆಂದು ಪಟ್ಟಿ ರೆಡಿಯಾಯಿತು. ಅದರಲ್ಲಿ ಹಿರೇ ಅಣ್ಣಪ್ಪ, ಸುಬ್ಬ ಆಡಿ, ಸುಬ್ರಾಯ ಕೃಷ್ಣಭಟ್ಟ.... ಹೀಗೆ ಒಟ್ಟು 60 ಹೆಸರುಗಳಿವೆ. ಆದರೆ ರಾಮಚಂದ್ರಾಪುರ ಮಠದ ಪ್ರಸ್ತಾಪವೇ ಇಲ್ಲ.

ಡಕಾಯಿತ ಸ್ವಾಮಿ ಮೆಂಟಲ್ ಮುಖ್ಯಮಂತ್ರಿ





ಸ್ವಾಮಿ ರಾಘವೇಶ್ವರ

ಗೋಕರ್ಣ ಲೂಟಿ

ಅಂದರೆ 12 ಕೇಜಿ ಬಂಗಾರದ ಮೌಲ್ಯವೇ 1 ಕೋಟಿ 36 ಲಕ್ಷ. ಆ ಲೆಕ್ಕದಲ್ಲಿ ಆಗಸ್ಟ್ 14 ರಂದು ಗೋಕರ್ಣದಲ್ಲಿದ್ದ 12 ಕಾಣಿಕೆ ಹುಂಡಿಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸಂಗ್ರಹವಾಗಿದ್ದ ಭಕ್ತರ ಕಾಣಿಕೆಯ ಮೊತ್ತ ನಗದು-ಚಿನ್ನ ಸೇರಿ ಹೆಚ್ಚುಕಡಿಮೆ ಒಂದೂ ಮುಕ್ಕಾಲು ಕೋಟಿ ರೂಪಾಯಿಗಳಾಗುತ್ತದೆ. ಅದನ್ನು ಹಾಡುಹಗಲೇ ಲೂಟಿ ಮಾಡಲಾಗಿದೆ.

ಅಂದಹಾಗೆ ಈ ಕಳ್ಳರ ಪೈಕಿ ಜಗದೀಶ ಶರ್ಮ ಹೊಸನಗರದ ರಾಮಚಂದ್ರಾಪುರ ಮಠದ ಕಾರ್ಯದರ್ಶಿಯಾದರೆ ಸುಬ್ರಮಣ್ಯ ಎಂಬುವನು ಅದೇ ಮಠದ ಜಿಪಿಎ ಹೋಲ್ಡರ್ ಆಗಿದ್ದಾನೆ. ಅವತ್ತು ಕದ್ದುಕೊಂಡು ಹೋದ ದುಡ್ಡು ತಲುಪಿದ್ದು ಈ ಢಕಾಯ್ತರ ಗುರು ರಾಘವೇಶ್ವರ ಸ್ವಾಮಿ ಎಂಬಾತನ ಜೋಳಿಗೆಗೆ. ಕೇವಲ ಹದಿನೈದಿಪ್ಪತ್ತು ದಿನಗಳ ಹಿಂದೆಯಷ್ಟೇ ರಾಜ್ಯದ ಅಮೃತಮಹಲ್ ರಾಸುಗಳ ತಳಿ ಅಭಿವೃದ್ಧಿ ಕೇಂದ್ರಕ್ಕೆ ಸೇರಿದ್ದ ಸಾವಿರಾರು ಎಕರೆ ಭೂಮಿ ಸಮೇತ ತಳಿ ಕೇಂದ್ರವನ್ನೇ ಅಕ್ರಮವಾಗಿ ಆಪೋಶನ ತೆಗೆದುಕೊಂಡಿದ್ದ ರಾಮಚಂದ್ರಾಪುರ ಮಠದ ರಾಘವೇಶ್ವರ ಸ್ವಾಮಿ ಈಗ ಥೇಟ್ ಪಾಳೆಯಗಾರನಂತೆ ಪುಂಡಾಟಿಕೆಗಿಳಿದಿದ್ದಾನೆ.

ಗೋಕರ್ಣ ದೇವಸ್ಥಾನದ ಮೇಲೆ ದಂಡೆತ್ತಿ ಹೋಗಿ ಕೊಳ್ಳೆ ಹೊಡೆದಿರುವ ಪ್ರಕರಣವೇ ಇದಕ್ಕೆ ಸಾಕ್ಷಿ.

ಗೋಕರ್ಣ ಈಗ ಅಕ್ಷರಶಃ ಕುದಿಯುತ್ತಿದೆ. ಅಲ್ಲಿನ ಸ್ಥಳೀಯ ಪುರೋಹಿತರು, ಭಕ್ತಾದಿ ಜನತೆಯಷ್ಟೇ ಅಲ್ಲ ಶೃಂಗೇರಿ ಮಠಾಧೀಶರು, ಉತ್ತರ ಕನ್ನಡ ಜಿಲ್ಲೆಯ ಸ್ವರ್ಣವಲ್ಲಿ, ಚಿತ್ರಾಪುರ, ಕವಳೆ ಸೋಂದಾ ಮಠಾಧೀಶರು, ಈ ಮಠಗಳ ಭಕ್ತರೂ ರೊಚ್ಚಿಗೆದ್ದಿದ್ದಾರೆ. ಆದಿಚುಂಚನಗಿರಿ ಮಠಾಧೀಶ ಬಾಲ ಗಂಗಾಧರ ಸ್ವಾಮಿಯೂ ಸಿಟ್ಟಿಗೆದ್ದಿದ್ದಾರೆ.







ನೂರಾರು ವರ್ಷಗಳಿಂದ ಸಾರ್ವಜನಿಕರ ಸ್ವತ್ತಾಗಿದ್ದ, ಸ್ವಾತಂತ್ರ್ಯಾನಂತರ ಸರ್ಕಾರದ ನಿಯಂತ್ರಣದಲ್ಲಿದ್ದ ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ಈಗ ಅದರ ಪರಿವಾರ ದೇವಸ್ಥಾನಗಳ ಸಮೇತ ದೂರದ ಶಿವಮೊಗ್ಗ ಜಿಲ್ಲೆಯ ಹೊಸನಗರದ ರಾಮಚಂದ್ರಾಪುರ ಮಠದ ವಶಕ್ಕೆ ಹೋಗಿದೆ. ರಾಜಕೀಯ ಅಧಿಕಾರ ಹಸ್ತಾಂತರಕ್ಕಿಂತ ಸಲೀಸಾಗಿ, ಗಣಿ ಲೂಟಿಗಿಂತ ಸರಾಗವಾಗಿ, ಲಂಚ ಹೊಡೆಯುವುದಕ್ಕಿಂತ ಆರಾಮಾಗಿ, ರಿಯಲ್ ಎಸ್ಟೇಟ್ ಡೀಲ್‌ಗಳಿಗಿಂತ ಸುಸೂತ್ರವಾಗಿ ನಡೆದಿರುವ ಈ 'ದೇವಸ್ಥಾನ ಹಸ್ತಾಂತರ' ಹಾಲಿ ಬಿಜೆಪಿ ಸರ್ಕಾರದ ಮೇಲೆ ಬ್ರಾಹ್ಮಣಶಾಹಿಗಳ ಪ್ರಭಾವ ಎಷ್ಟಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಈ ಹಸ್ತಾಂತರ ಪ್ರಕ್ರಿಯೆಯಲ್ಲಿ ನಡೆದಿರುವ ಅಕ್ರಮಗಳು, ಸುಳ್ಳು ವರದಿಗಳು, ಮೋಸ, ಕಾನೂನುಬಾಹಿರ ನಡವಳಿಕೆಗಳನ್ನು ಗಮನಿಸಿದರೆ ಮುಖ್ಯಮಂತ್ರಿ

ಕಾಲಾನಂತರ ಈ ಉಪಾಧಿವಂತ ಮಂಡಳದ ಸದಸ್ಯರು ಒಬ್ಬೊಬ್ಬರಾಗಿ ಮೃತಪಟ್ಟಂತೆ ಅವರ ಮಕ್ಕಳು ಅಥವಾ ವಾರಸುದಾರರೇ ಉಪಾಧಿವಂತರಾಗಿ ಮುಂದುವರೆಯುತ್ತಾ ಬಂದಿದ್ದರು. ಕೆಲವರ ಜಾಗ ಖಾಲಿ ಬಿದ್ದವು. ಈಗ ಈ ಉಪಾಧಿಗಳ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟಿದೆ. 1950 ರ ಬಾಂಬೆ ಪಬ್ಲಿಕ್ ಟ್ರಸ್ಟ್ ಕಾಯ್ದೆಯಂತೆ ಸರ್ಕಾರದ ಮುಜರಾಯಿ ಇಲಾಖೆಗೆ ಸೇರಿದ್ದ ಗೋಕರ್ಣ ದೇವಸ್ಥಾನದಲ್ಲಿ ಆಡಳಿತಕ್ಕೆ ಸಂಬಂಧಿಸಿದಂತೆ ಕೆಲವು ಸಣ್ಣಪುಟ್ಟ ತಕರಾರು, ಜಗಳಗಳು ಇದ್ದೇ ಇದ್ದವು. ಅಂತ ಯಾವ ಸಂದರ್ಭದಲ್ಲೂ ರಾಮಚಂದ್ರಾಪುರ ಮಠದ ಪ್ರಸ್ತಾಪ ಬಂದೇ ಇಲ್ಲ.

ಈ ನಡುವೆ ಕರ್ನಾಟಕ ಸರ್ಕಾರವು ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ದತ್ತಿ ಕಾಯ್ದೆ ಎಂಬ ಹೊಸ ಶಾಸನ ರೂಪಿಸಿ ರಾಜ್ಯದ ಸಾವಿರಾರು ಸಾರ್ವಜನಿಕರ ದೇವಾಲಯಗಳನ್ನು ಈ ಕಾಯ್ದೆ ವ್ಯಾಪ್ತಿಗೆ ಸೇರಿಸಿತು. ಅದರಲ್ಲಿ ಗೋಕರ್ಣವೂ ಸೇರಿದಂತೆ ಮೈಸೂರಿನ ಚಾಮುಂಡೇಶ್ವರಿ, ಉಡುಪಿ ಕೃಷ್ಣ ದೇವಸ್ಥಾನ, ಯಡಿಯೂರು ಸಿದ್ಧಲಿಂಗೇಶ್ವರ, ಮಲೆಮಹದೇಶ್ವರ, ನಂಜನಗೂಡಿನ ನಂಜುಂಡೇಶ್ವರ ಮುಂತಾದ ಪ್ರಸಿದ್ಧ ದೇವಸ್ಥಾನಗಳೂ ಇವೆ. ಇವೆಲ್ಲಾ ಮುಜರಾಯಿ ಇಲಾಖೆಯ ನೇರ ಆಡಳಿತಕ್ಕೊಳಪಟ್ಟಿದ್ದು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ, ಉಪವಿಭಾಗದಲ್ಲಿ ಎಸಿ ಹಾಗೂ ತಾಲ್ಲೂಕು ಹಂತದಲ್ಲಿ ತಹಶೀಲ್ದಾರ್‌ಗಳು ಮುಜರಾಯಿ ಇಲಾಖೆ ಪರವಾಗಿ ಸರ್ಕಾರದ ಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರನ್ನು ಕಾರ್ಯ ನಿರ್ವಹಣಾಧಿಕಾರಿಗಳೆಂದು ಕರೆಯುತ್ತಾರೆ. ಪೂಜೆ, ನಿತ್ಯ ಕೈಂಕರ್ಯ ಇತ್ಯಾದಿಗಳನ್ನು ಪುರೋಹಿತರು ನಡೆಸಿದರೆ ಹುಂಡಿ ಹಣ, ಆಭರಣ ಉಸ್ತುವಾರಿ ಹಾಗೂ ರಕ್ಷಣೆ, ಜಾತ್ರೆ ನಿರ್ವಹಣೆ ಇತ್ಯಾದಿ ಆಡಳಿತಾತ್ಮಕ ಕೆಲಸಗಳು ಈ ಸರ್ಕಾರಿ ಆಫೀಸರ್‌ಗಳದ್ದು.

ಇಂಥದ್ದೇ ಒಂದು ಸಂದರ್ಭದಲ್ಲಿ ಗೋಕರ್ಣ ದೇವಸ್ಥಾನಕ್ಕೆ ಅಸಿಸ್ಟೆಂಟ್ ಕಮಿಷನರ್ ಒಬ್ಬರನ್ನು ಸರ್ಕಾರವು ಎಕ್ಸಿಕ್ಯೂಟಿವ್ ಆಫೀಸರ್ ಆಗಿ 4.3.2005 ರಲ್ಲಿ ರೂಢಿಯಂತೆ ನೇಮಿಸಿದಾಗ ಹೊಸ ವಿವಾದ ಶುರುವಾಯಿತು. ಉಪಾಧಿವಂತ ಮಂಡಳದ ವಿಘ್ನೇಶ್ವರ ದಾಮೋದರ ದೀಕ್ಷಿತ್ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿಯೊಂದನ್ನು ಸಲ್ಲಿಸಿ (ಪ್ರಕರಣ ಸಂಖ್ಯೆ 33012-33015/2003) ಇದಕ್ಕೆ ತಡೆಯಾಜ್ಞೆ ಕೋರಿದ್ದರು. ಇದರ ವಿಚಾರಣೆಯ ಹಂತದಲ್ಲೇ ವಿ.ಡಿ. ದೀಕ್ಷಿತ್ 3.11.2004 ರಲ್ಲಿ ಮೃತಪಟ್ಟಿದ್ದರು.

ಈ ಕೇಸ್‌ನ ಮಟ್ಟಿಗೆ 1997 ರ ಕರ್ನಾಟಕ ಧಾರ್ಮಿಕ ದತ್ತಿ ಕಾಯ್ದೆಗೆ ತಡೆಯಾಜ್ಞೆ ಇತ್ತೆಂಬುದು ನಿಜ. ಆದರೆ ದೀಕ್ಷಿತರ ಮಗ ಕೇಸ್ ಮುಂದುವರೆಸಿದ್ದರಿಂದಾಗಿ ಗೋಕರ್ಣ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಸರ್ಕಾರವು ಏಕಪಕ್ಷೀಯವಾಗಿ ಯಾವುದೇ ತೀರ್ಮಾನ ಕೈಗೊಳ್ಳುವಂತಿರಲಿಲ್ಲ.

ಆವಾಗ ಈಗ ಕಾಯ್ದೆ ಕಾನೂನು, ಕೊನೆಗೆ ಹೈಕೋರ್ಟ್‌ನ್ನು ಲೆಕ್ಕಿಸದೆ ರಾಘವೇಶ್ವರ ಸ್ವಾಮಿ ಗೋಕರ್ಣವನ್ನು ಕಬಳಿಸಿದ್ದಾನೆ.

ವಿಚಿತ್ರವೆಂದರೆ ಸ್ವತಃ ಹವ್ಯಕ ಬ್ರಾಹ್ಮಣರಾಗಿದ್ದರೂ ಹವ್ಯಕರ ರಾಮಚಂದ್ರಾಪುರ ಮಠದ ಬಗ್ಗೆ ವಿಶೇಷ ಒಲವು ಇಟ್ಟುಕೊಂಡಿರಲಿಲ್ಲ.

ಕಳೆದ ನಾಲ್ಕಾರು ವರ್ಷಗಳಿಂದ ಗೋ ರಕ್ಷಣೆ, ಗಂಜಲ, ಸಗಣಿ ಇತ್ಯಾದಿ ...ದಂಧೆ ಶುರು ಮಾಡಿಕೊಂಡಿರುವ ರಾಘವೇಶ್ವರ ಸ್ವಾಮಿ ಚೆಡ್ಡಿ ...ಗಳ ಕೃಪೆಯಿಂದ ಬೇಗನೆ ಪ್ರಚಾರಕ್ಕೆ ಬಂದಿದ್ದಾನೆ. ಈತ ಏನೇ ಸರ್ಕಸ್ ಮಾಡಿದರೂ ಪ್ರಚಾರ ಸಿಕ್ಕುತ್ತಿತ್ತೇ ವಿನಃ ಈತನ ಹೊಸನಗರ ಮಠ ಜನರನ್ನು ಸೆಳೆಯುವ ತೀರ್ಥ ಕ್ಷೇತ್ರವಾಗಲೇ ಇಲ್ಲ, ನಂಜನಗೂಡು, ಉಡುಪಿ, ಶೃಂಗೇರಿ, ಮೇಲುಕೋಟೆ, ಯಡಿಯೂರುಗಳಿಗೆ ಲಕ್ಷಾಂತರ ಭಕ್ತರು ಹೋಗುವಂತೆ ಹೊಸನಗರಕ್ಕೆ ಹೋಗಲಿಲ್ಲ. ಇದಕ್ಕೆ ಸ್ವಾಮಿ ಬೇರೆಯೇ ತಂತ್ರ ಯೋಚಿಸಿದ. ...ನ ತನ್ನ ಹತ್ತಿರ ಬರದಿದ್ದರೇನು ಜನ ಹೋಗುವ ದೇವಸ್ಥಾನವನ್ನೇ ಕಸಿದುಕೊಂಡರೆ ...ಗೆ ಎಂದು ಗೋಕರ್ಣ ಕಬಳಿಸಲು ಒಂದು ಮಾಸ್ಟರ್ ಪ್ಲಾನ್ ರೆಡಿ ಮಾಡಿಕೊಂಡ.

ಆಪರೇಷನ್ ಗೋಕರ್ಣ

ಈಗ ಬಿಜೆಪಿಗಳು ನಡೆಸುತ್ತಿರುವ 'ಆಪರೇಷನ್ ಕಮಲ'- ಹೇಗೆ ಅನ್ಯ ಪಕ್ಷ ಶಾಸಕರು, ನಾಯಕರನ್ನು ಹೈಜಾಕ್ ಮಾಡುತ್ತಿದೆಯೋ ಅದೇ ರೀತಿ ಇತ್ತು ಆಪರೇಷನ್ ಗೋಕರ್ಣ.

ಈ ಪಿತೂರಿಯ ಪ್ರಧಾನ ಪಾತ್ರಧಾರಿಗಳೆಂದರೆ ರಾಘವೇಶ್ವರ ಮತ್ತವನ ...ಲಾಗಳು, ಆಗಿನ ಮುಜರಾಯಿ ಕಮಿಷನರ್ ಶ್ಯಾಂಭಟ್, ಸಚಿವ ಕಾಗೇರಿ, ...ಯು ಕಾಂಗ್ರೆಸ್ ನಾಯಕ ಉಮೇಶ್ ಭಟ್, ಶಾಸಕ ದಿನಕರ ಶೆಟ್ಟಿ ...ಂತಾದವರು.

ಮುಜರಾಯಿ ಸಚಿವ ಕೃಷ್ಣಯ್ಯ ಶೆಟ್ಟಿ ಕಂಡವರ ಸೊತ್ತಿಗೆ ಕೈಹಾಕಿಹಾಕಿಯೇ ...ಮಸಾಗಿದ್ದು ಅವನಿಗಂತೂ ಇದು ತಪ್ಪು ಅನ್ನಿಸುವ ಛಾನ್ಸೇ ಇರಲಿಲ್ಲ, ...ನ್ನು ಸಿಎಂ ಯಡಿಯೂರಪ್ಪ ಇತ್ತಿತ್ತಲಾಗಿ ತಿಕ್ಕಲು ತಿಕ್ಕಲು ಆಡಳಿತ ನಡೆಸುತ್ತಾ ...ತಪ್ಪು ನಿರ್ಧರಿಸುವ ವಿವೇಚನೆಯನ್ನೇ ಕಳೆದುಕೊಂಡಿದ್ದಾರೆ. ಯಡ್ಡಿ ಜೂನ್ ...ರಂದು ಸಿಎಂ ಆಗುತ್ತಿದ್ದಂತೆ ಎದ್ದು ಕುಳಿತ ರಾಘವೇಶ್ವರ ಸ್ವಾಮಿ ರಹಸ್ಯ ...ರ್ಯಾಚರಣೆ ನಡೆಸಿ ಕೇವಲ ಎರಡೇ ತಿಂಗಳಲ್ಲಿ ನೂರಾರು ಕೋಟಿ ...ಬೆಯ ಅಮೃತಮಹಲ್ ತಳಿ ಕೇಂದ್ರ ಹಾಗೂ ಗೋಕರ್ಣ ದೇವಸ್ಥಾನವನ್ನು ... ಮಠಕ್ಕೆ ಹಸ್ತಾಂತರಿಸಿಕೊಂಡಿದ್ದಾನೆ.


ಬಾಲಚಂದ್ರ ಜಂಬೆ

ಇವುಗಳ ಪೈಕಿ ಆಗಸ್ಟ್ 12 ರಂದು ಹೊರಬಿದ್ದ ಸರ್ಕಾರಿ ...ದೇಶ ಗೋಕರ್ಣ ದೇವಳದ ಹಸ್ತಾಂತರದ ದಾಖಲೆಗಳನ್ನು ...ಶೀಲಿಸುತ್ತಾ ಹೋದರೆ ಪ್ರತಿ ಹಂತದಲ್ಲೂ ಅಕ್ರಮಗಳು ...ಚರಿಸುತ್ತಿವೆ.

...ಾಯ್ದೆ-ಕೋರ್ಟ್ ಯಾರಿಗೂ ಬೆಲೆ ಇಲ್ಲ

ಆಗಿನ್ನು ರಾಷ್ಟ್ರಪತಿ ಆಡಳಿತವಿದ್ದ ಸಮಯ. ಉಪಾಧಿವಂತರು ...ವರು 18.3.2008 ರಂದು ರಾಜ್ಯಪಾಲ ರಾಮೇಶ್ವರ ...ಕೂರ್‌ಗೆ ಒಂದು ಪತ್ರ ಬರೆದು 'ಗೋಕರ್ಣ ದೇವಸ್ಥಾನವು ...ವಳ ಹಿಂದಿನಿಂದಲೂ ರಾಮಚಂದ್ರಾಪುರ ಮಠದ ಉಸ್ತುವಾರಿಯಲ್ಲಿದೆ. ...ಚೆಗೆ ದೇವಳ ಕಾರ್ಯ ಚಟುವಟಿಕೆ ಸರಿಯಾಗಿ ನಡೆಯದ ಕಾರಣ ...ವನ್ನು ರಾಮಚಂದ್ರಾಪುರ ಮಠಕ್ಕೆ ವಹಿಸಿಕೊಡುವಂತೆ' ಕೋರುತ್ತಾರೆ. ಆದರೆ ...ಲೇ ಉಪಾಧಿವಂತ ಮಂಡಳದ ಸದಸ್ಯ ಬಾಲಚಂದ್ರ ಜಂಬೆಗೆ ಈ ಬಗ್ಗೆ ...ಮತ ಇರಲಿಲ್ಲ.

ಇದು ಮುಜರಾಯಿ ಇಲಾಖೆಗೆ ಬರಲಾಗಿ ಅವರು ಉತ್ತರ ಕನ್ನಡ ಜಿಲ್ಲಾಧಿಕಾರಿಗೆ ಪತ್ರ ಬರೆದು ಅಭಿಪ್ರಾಯ ಕೇಳಿದ್ದಾರೆ. ದಿನಾಂಕ 1.4.2008 ...ದು (ಪತ್ರ ಸಂಖ್ಯೆ 58/ಪಿಎಸ್/ಸಿಆ/5.2003-04) ಉತ್ತರ ಬರೆದ ಜಿಲ್ಲಾಧಿಕಾರಿಯು "ಗೋಕರ್ಣ ದೇವಸ್ಥಾನವು ಒಂದು ಸಾರ್ವಜನಿಕ ದೇವಸ್ಥಾನವಾಗಿರುವ ಕಾರಣ ಖಾಸಗಿ ಸಂಸ್ಥೆ ಅಥವಾ ಮಠಗಳಿಗೆ ಹಸ್ತಾಂತರಿಸಲು ಕಾನೂನಿನಂತೆ ಅವಕಾಶವಿಲ್ಲವೆಂದು" ಸ್ಪಷ್ಟವಾಗಿ ನಿರಾಕರಣೆಯ ಅಭಿಪ್ರಾಯ ಕೊಟ್ಟಿದ್ದರು. ಅಲ್ಲಿಗೂ ಸುಮ್ಮನಾಗದ ರಾಘವೇಶ್ವರ ತನ್ನ ಶಿಷ್ಯ ಶ್ಯಾಂಭಟ್ ಮೂಲಕ ಮತ್ತೊಮ್ಮೆ ಫೈಲ್‌ಗೆ ಜೀವ ಕೊಡಿಸಿ ಈ ಬಾರಿ ಕಂದಾಯ ಕಮಿಷನರ್‌ಗೆ ಪತ್ರ ಬರೆಸಿದ್ದರು.

... ಗೋಕರ್ಣ ಮಹಾಬಲೇಶ್ವರ ದೇವಸ್ಥಾನವನ್ನು ಮುಜರಾಯಿ ಇಲಾಖೆ ಪಟ್ಟಿಯಿಂದ ಡಿನೋಟಿಫೈ ಮಾಡಿಸುವ ಪ್ರಸ್ತಾಪ ಅದಾಗಿತ್ತು.



ಹುಂಡಿ ಹಣ ಯಾರದು?

ಗೋಕರ್ಣ ದೇವಸ್ಥಾನ ಹಸ್ತಾಂತರಕ್ಕೆ ಸರ್ಕಾರ ನೀಡಿರುವ ಆದೇಶದಲ್ಲಿ ಕಳೆದ ನಾಲ್ಕು ವರ್ಷಗಳಿಂದ 12 ಹುಂಡಿಗಳಲ್ಲಿ ಸಂಗ್ರಹವಾಗಿದ್ದ ಭಾರಿ ಮೊತ್ತದ ಬಗ್ಗೆ ಏನನ್ನು ಸ್ಪಷ್ಟವಾಗಿ ಹೇಳಿಲ್ಲ.

ಒಂದು ವೇಳೆ ಆಗಸ್ಟ್ 12 ರಿಂದಾಚೆಗೆ ಈ ದೇವಸ್ಥಾನ ರಾಮಚಂದ್ರಾಪುರ ಮಠಕ್ಕೆ ಸೇರುತ್ತವೆ ಎಂದಾದರೂ ಅದಕ್ಕೂ ಹಿಂದಿನ ಹುಂಡಿ ಹಣದ ಮೇಲೆ ರಾಘವೇಶ್ವರನಿಗೆ ಹಕ್ಕು ಹೇಗೆ ಬಂತು?

ಇದು ಹಗಲು ದರೋಡೆ ಅಲ್ಲವಾ?

ಇಲ್ಲಿ ದೋಚಿದ ಮೊತ್ತ ಒಂದು ಮುಕ್ಕಾಲು ಕೋಟಿ ರೂಪಾಯಿಗಳು. ಈ ಲೂಟಿ ನಡೆಯುತ್ತಿದ್ದಾಗ ಮುಜರಾಯಿ ಇಲಾಖೆಯ ಯಾವೊಬ್ಬ ಅಧಿಕಾರಿಯೂ ಸ್ಥಳದಲ್ಲಿರಲಿಲ್ಲ ಏಕೆ? ಇಷ್ಟಕ್ಕೂ ದೇವಸ್ಥಾನದ ಬೀಗದ ಕೈಗಳನ್ನು ರಾಮಚಂದ್ರಾಪುರ ಮಠದ ಪ್ರತಿನಿಧಿಗಳಿಗೆ ಹಸ್ತಾಂತರಿಸಿದ್ದು ಶಾಸಕ ದಿನಕರ ಶೆಟ್ಟಿ!


ಶಾಸಕ ದಿನಕರ್ ಶೆಟ್ಟಿ

ಹಾಗೆ ಮಾಡಲು ಇವನಿಗೂ ದೇವಸ್ಥಾನಕ್ಕೂ ಯಾವ ಸಂಬಂಧವಿತ್ತು? ಡಿಸಿ, ಎಸಿ, ತಹಶೀಲ್ದಾರ ಅವತ್ತು ಸ್ಥಳದಲ್ಲಿರದೆ ಎಲ್ಲಿ ಕತ್ತೆ ಮೇಯಿಸಲು ಹೋಗಿದ್ದರು?

ವಿರೋಧ ಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್ ಇದನ್ನೆಲ್ಲಾ ಯಾಕೆ ಪ್ರಶ್ನಿಸುತ್ತಿಲ್ಲ?

1997 ರ ಕರ್ನಾಟಕ ಧಾರ್ಮಿಕ ಸಂಸ್ಥೆ ಹಾಗೂ ದತ್ತಿ ಕಾಯ್ದೆಯ ಸೆಕ್ಷನ್ 1(4), (1) ರಲ್ಲಿ 'ಒಂದು ಮಠಕ್ಕೆ ಅಥವಾ ಅದಕ್ಕೆ ಸೇರಿದ ಒಂದು ದೇವಸ್ಥಾನಕ್ಕೆ ಈ ಕಾಯ್ದೆ ಅನ್ವಯಿಸುವುದಿಲ್ಲ'ವೆಂಬ ಅಂಶವನ್ನು ಹಿಡಿದುಕೊಂಡು ಗೋಕರ್ಣ ದೇವಳವನ್ನು ಡಿನೋಟಿಫೈ ಮಾಡಿಸಿ ತಮ್ಮದೆಂದು ಹಕ್ಕು ಸಾಧಿಸಲು ಈ ವಂಚಕರು ಬಯಸಿದ್ದರು.

ಆದರೆ ಕಂದಾಯ ಇಲಾಖೆ ಈ ವಂಚಕರ ಕೆನ್ನೆಗೆ ಬಾರಿಸಿತು.

ಆಗಿನ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಸಿ.ಎಸ್. ಸೀತಾರಾವ್ ದಿನಾಂಕ 14.5.2008 ರಲ್ಲಿ ಮುಜರಾಯಿ ಆಯುಕ್ತ ಶ್ಯಾಂ ಭಟ್ಟರಿಗೆ ನೇರವಾಗಿ ಒಂದು ಪತ್ರ ಬರೆದರು (ಸಂಖ್ಯೆ ಅ.ಸ. ಪತ್ರ ಸಂಖ್ಯೆ ಕಂಇ 42 ಮುಅಬಿ: 2008). ಅದರಲ್ಲಿ "ಕಂದಾಯ ಇಲಾಖೆಯ ಕಾನೂನು ಕೋಶದ ಮುಖ್ಯಸ್ಥರು ಯಾವುದೇ ದೇವಸ್ಥಾನವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಡಬಾರದು (denotification) ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆಂದು, ಹೇಳಿ ಕೊನೆಗೆ ಇದನ್ನು ರಾಜ್ಯಪಾಲರೂ ಒಪ್ಪಿದ್ದಾಗಿಯೂ ಇನ್ನು ಮುಂದೆ ಯಾವುದೇ ದೇವಸ್ಥಾನವನ್ನು ಡಿನೋಟಿಫೈ ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬಾರದೆಂದೂ, ಆದೇಶ ನೀಡಲಾಗಿತ್ತು.

ಅಂದರೆ ಇದರರ್ಥ ಗೋಕರ್ಣ ದೇವಸ್ಥಾನವನ್ನು ಖಾಸಗಿ ಸಂಸ್ಥೆಯವರಿಗೆ ಹಸ್ತಾಂತರಿಸಬಾರದೆಂತಲೂ ಅದು ಕಾನೂನುಬಾಹಿರವೆಂದೂ ಜಿಲ್ಲಾಧಿಕಾರಿ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಇಲಾಖಾ ಕಾನೂನು ಮುಖ್ಯಸ್ಥ ಕೊನೆಗೆ ರಾಜ್ಯಪಾಲರೂ ಸ್ಪಷ್ಟವಾದ ಖಚಿತ ಆದೇಶ ನೀಡಿದ್ದರು ಎಂದಾಯಿತು. ಇಷ್ಟೆಲ್ಲಾ ನಿರಾಕರಣೆಗಳ ನಂತರವೂ ಗೋಕರ್ಣ ಆಗಸ್ಟ್ 12 ರಂದು ರಾಮಚಂದ್ರಾಪುರ ಮಠಕ್ಕೆ ಹೇಗೆ ಹಸ್ತಾಂತರವಾಯಿತು.

ಅದನ್ನು ತಿಳಿಯಲು ಹಸ್ತಾಂತರಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ನೋಡಬೇಕು.

ಕಂಇ56 ಮುಅಬಿ 2008 ಬೆಂಗಳೂರು ದಿ. 12.8.2008 ರ ಈ ಸರ್ಕಾರಿ ಆದೇಶದಲ್ಲಿ ಮಹಾಬಲೇಶ್ವರ ದೇವಸ್ಥಾನ ಹಿಂದೆ ಶ್ರೀರಾಮಚಂದ್ರಾಪುರ ಮಠದ ಆಡಳಿತ ವ್ಯಾಪ್ತಿಗೆ ಒಳಪಟ್ಟ ಸಂಸ್ಥೆ ಎಂಬ ಮನವಿಯ ಹಿನ್ನೆಲೆಯಲ್ಲಿ ಡಿನೋಟಿಫೈ ಮಾಡಬಹುದೆಂದು ಅಡ್ವೋಕೇಟ್ ಜನರಲ್ ಅಭಿಪ್ರಾಯ ನೀಡಿರುವುದರಿಂದ ಈ ದೇವಸ್ಥಾನದ ಸಂಪೂರ್ಣ ಆಡಳಿತವನ್ನು ಶಿವಮೊಗ್ಗ ಜಿಲ್ಲೆಯ ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರಿಸುವಂತೆ ಉತ್ತರ ಕನ್ನಡ ಜಿಲ್ಲಾಧಿಕಾರಿಗೆ ಆದೇಶ ನೀಡಲಾಗಿದೆ" ಎಂದು ಹೇಳಲಾಗಿದೆ.

ಅಲ್ಲಿಗೆ ಮುಜರಾಯಿ ಇಲಾಖೆಯ ಅಧಿಸೂಚಿತ ಸಂಸ್ಥೆಗಳ ಪಟ್ಟಿಯ 734 ನೇ ಪುಟದಲ್ಲಿದ್ದ ಕ್ರಮಸಂಖ್ಯೆ 92 ರಲ್ಲಿನ ಗೋಕರ್ಣ ಶ್ರೀಮಹಾಬಲೇಶ್ವರ ದೇವಸ್ಥಾನ ಮತ್ತದರ ಪರಿವಾರ ದೇವರುಗಳು ರಾಘವೇಶ್ವರ ಸ್ವಾಮಿ ಎಂಬ ಬಕಾಸುರನ ಬಾಯಿಗೆ ಬಂದು ಬಿದ್ದಂತಾಯಿತು.


ಯಡಿಯೂರಪ್ಪ RSS ರಕ್ತವನ್ನೇ ತುಂಬಿಕೊಂಡಿರಬಹುದು, ಆತ ಬ್ರಾಹ್ಮಣಶಾಹಿಗಳ ಗುಲಾಮನೂ ಆಗಿರಬಹುದು, ಆದರೆ ಸಾರ್ವಜನಿಕರಿಗೆ ಸೇರಿರುವ, ಎಲ್ಲಾ ಜಾತಿ ಜನಾಂಗಗಳ ಶ್ರದ್ಧಾ ಭಕ್ತಿ ಕೇಂದ್ರದಂತಿರುವ ಗೋಕರ್ಣ ದೇವಸ್ಥಾನವನ್ನು ಕೇವಲ ಬ್ರಾಹ್ಮಣರಿಗೆ ಸೇರಿರುವ ಒಂದು ಮಠಕ್ಕೆ ಹೇಗೆ ಹಸ್ತಾಂತರಿಸಲು ಒಪ್ಪಿಕೊಂಡರು. ಅದೂ ಕಾಯ್ದೆ ಕಾನೂನುಗಳೆಲ್ಲಾ ಅದಕ್ಕೆ ವಿರೋಧವಾಗಿರುವಾಗ, ಕೋರ್ಟಿನಲ್ಲಿ ಕೇಸ್ ಪೆಂಡಿಂಗ್ ಇರುವಾಗ, ಸ್ವತಃ ಶೃಂಗೇರಿ, ಆದಿಚುಂಚನಗಿರಿ ಮಠಾಧೀಶರು, ಮಾಜಿ ರಾಜ ಶ್ರೀಕಂಠದತ್ತ ಒಡೆಯರ್ ಥರದವರೂ ವಿರೋಧ ವ್ಯಕ್ತಪಡಿಸುತ್ತಿರುವಾಗಲೂ ಯಡಿಯೂರಪ್ಪ ರಾಘವೇಶ್ವರನ ಪರ ಯಾಕಿದ್ದಾರೆ?

ರಾಘವೇಶ್ವರ ಸ್ವಾಮಿ ಕೇಳಿದ್ದಕ್ಕೆಲ್ಲಾ 'ಅಸ್ತು' ಎನ್ನುತ್ತಿರುವುದೇಕೆ?

ಇದಕ್ಕೆ ಬರೀ ಚೆಡ್ಡಿ ಸಂಘ ಪರಿವಾರದ ಸಂಬಂಧ ಒಂದೇ ಕಾರಣವಾಗಿರಲಾರದು ಎನ್ನಿಸುತ್ತಿದೆ. ಏಕೆಂದರೆ ಪೇಜಾವರ... ಚೆಡ್ಡಿ ಚಿಂತನೆಗಳ ಚಾಂಪಿಯನ್ನರೆ. ಆದರೂ ...ರಿಗಿಲ್ಲದ ...ಫಿಟ್ ... ರಾಘವೇಶ್ವರ ಸ್ವಾಮಿಗೆ ಮಾತ್ರ ಸಿಗುತ್ತಿದೆ...

ಯಡ್ಡಿ ಬ್ಲಾಕ್‌ಮೇಲ್‌ಗೆ ಒಳಗಾಗಿದ್ದಾರೆ!

ಅದು ಯಾವ ತರಹ ...ಬ್ಲಾಕ್‌ಮೇಲ್‌ಗೆ ಒಳಗಾದವನಿಗೆ ಮತ್ತದರ ಫಲಾನುಭವಿಗೆ ಮಾತ್ರ ... ಸಂಗತಿ. ■



ಪ್ರಜಾವಾಣಿ-ವಿಜಯ ಕರ್ನಾಟಕ

ಪತ್ರಿಕಾ ಸಮರ

ಇದೊಂದು ದ್ವಂದ್ವ ಯುದ್ಧ

ಆಗಸ್ಟ್ 14 ರಂದು ಗೋಕರ್ಣ ದೇವಸ್ಥಾನದ ಹಸ್ತಾಂತರವೆಂಬ ವಂಚನೆ ಬಹಿರಂಗವಾಗುತ್ತಿದ್ದಂತೆ ರಾಜ್ಯದೆಲ್ಲೆಡೆಯಿಂದ ತೀವ್ರ ಪ್ರತಿಕ್ರಿಯೆಗಳು ಬಂದವು.

ಪ್ರಜಾವಾಣಿ ಹಾಗೂ ವಿಜಯ ಕರ್ನಾಟಕಗಳೂ ಪರಸ್ಪರ ಪರ ವಿರೋಧದ ಕದನ ನಡೆಸಿದವು.

ಪ್ರಜಾವಾಣಿಯಲ್ಲಿ 'ಹಸ್ತಾಂತರ, ನಿಯಮ ಗಾಳಿಗೆ' ಪೊಲೀಸ್ ಸರ್ಪಗಾವಲು, ದೇವಸ್ಥಾನ ಒಬ್ಬರ ಸ್ವತ್ತಲ್ಲ, ಹಸ್ತಾಂತರಕ್ಕೆ ಪ್ರತಿಭಟನೆ ಎಂಬ ಹೆಡ್ಡಿಂಗ್‌ಗಳಲ್ಲಿ ವರದಿಗಳು ಪ್ರಕಟವಾದವು. ಅದೇ ವೇಳೆ ವಿಜಯ ಕರ್ನಾಟಕದಲ್ಲಿ ಹಸ್ತಾಂತರಕ್ಕೆ ಸ್ವಾಗತ, ನೈಜ ಸ್ವಾತಂತ್ರ್ಯ ಶ್ಲಾಘನೆಯ ಮಹಾಪೂರ, ಹುಂಡಿ ಹಣ ಎಣಿಕೆ ನಿರಾಳ ಎಲ್ಲವೂ ಶಾಂತ ಸುಸೂತ್ರವೆಂಬ ತಲೆಬರಹದ ವರದಿಗಳು ಪ್ರಕಟವಾದವು.

ಒಬ್ಬ ಬ್ರಾಹ್ಮಣ ಸ್ವಾಮಿಗೆ ಲಾಭವಾಗುವುದಾದರೆ ವಿಜಯ ಕರ್ನಾಟಕಕ್ಕೆ ಕಳ್ಳತನವೂ ಸ್ವಾಗತಾರ್ಹ ವಂಚನೆಗೂ ಶ್ಲಾಘನೆ. ಕೋಟಿಗಟ್ಟಲೆ ಹುಂಡಿ ಹಣ ದೋಚಿದ್ದು ಪುಣ್ಯಕಾರ್ಯ ಎಂದಾಯಿತು. ಇದೇ ಪತ್ರಿಕೆಯಲ್ಲಿ ಪ್ರತಾಪ ಸಿಮ್ಮನೆಂಬ ಬಾಲಕ ದೇವಸ್ಥಾನ ಹಸ್ತಾಂತರಿಸಿದ್ದು ಸರಿ, ಮುಜರಾಯಿ ಇಲಾಖೆ ...ಹಿಂದೂ ದೇವಸ್ಥಾನಗಳಲ್ಲಿ ಸಂಗ್ರಹವಾಗುವ ಹಣವನ್ನು ಚರ್ಚ್, ಮಸೀದಿಗಳಿಗೆ ಖರ್ಚು ಮಾಡುತ್ತಿವೆ. ಇನ್ನು ಮುಂದೆ ಅದು ತಪ್ಪಿ ಹಿಂದೂಗಳ ಹಣದಿಂದ ಹಿಂದೂಗಳಿಗೆ ಲಾಭವಾಗುತ್ತದೆ' ಎಂದಿದ್ದಾನೆ. ಈ ಮೂರ್ಖನಿಗೆ ಹಿಂದೂ ಧಾರ್ಮಿಕ ಸಂಸ್ಥೆ ಕಾಯ್ದೆ ವ್ಯಾಪ್ತಿಗೆ ಮಸೀದಿ-ಚರ್ಚ್ ಬರುವುದಿಲ್ಲ ಎಂಬುದೂ ಗೊತ್ತಿಲ್ಲ.



ಅದಿರಲಿ

ಹಿಂದೂ ದೇವಳದ ಹಣ ಹಿಂದೂಗಳಿಗೆ ಹೋಗುತ್ತೆ ಬಿಡಿ ಅನ್ನುತ್ತಾನಲ್ಲಾ ಈ ಅವಿವೇಕಿ. ಈಗ ಆ ಲಾಭ ಮಾಡಿಕೊಂಡ ಹಿಂದೂ ಯಾರೆಂದರೆ ಬ್ರಾಹ್ಮಣ ಸ್ವಾಮಿ ಮಾತ್ರ. ಇದರಲ್ಲಿ ಲಿಂಗಾಯತರೋ, ಒಕ್ಕಲಿಗರೋ, ಕುರುಬ, ಗೊಲ್ಲ, ದಲಿತರೋ ಸಂತೋಷಪಡಲು ಏನಿದೆ?

ಬ್ರಾಹ್ಮಣ ಮಠಾಧೀಶನೊಬ್ಬ ಉಂಡು ತೇಗಿದರೆ ಹಿಂದೂ ಧರ್ಮ ಉದ್ಧಾರವಾಗಿಬಿಡುತ್ತಾ ಅಂತಾ?

ತದಡಿ ಸ್ಥಾವರದ ಸೈಡ್ ಡೀಲಾ?


16 ಸಾವಿರ ಕೋಟಿ ಬಂಡವಾಳದ ತದಡಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗೆ ಇಡೀ ಉತ್ತರ ಕನ್ನಡದ ಜನತೆಯ ವಿರೋಧವಿದೆ. ಈ ಬಗ್ಗೆ ಕೆಲ ವರ್ಷಗಳಿಂದ ಪ್ರತಿಭಟನೆಗಳೂ ನಡೆಯುತ್ತಿವೆ. ಈ ... ಪರಿಸರವಾದಿಗಳ ಜೊತೆ ಕೆಲ ಮಠಾಧೀಶರೂ ವಿರೋಧದ ದನಿ ಎತ್ತುತ್ತಿದ್ದಾರೆ. ಇತ್ತೀಚೆಗೆ ರಾಘವೇಶ್ವರ ಸ್ವಾಮಿಯೂ ವಿರೋಧದ ಮಾತಾಡುತ್ತಾ ಒಂದಷ್ಟು ಪ್ರಚಾರ ಗಿಟ್ಟಿಸಿಕೊಂಡಿದ್ದಾನೆ.

ಆದರೆ ಯಡ್ಡಿ ... ಇಡೀ ... ಈ ಯೋಜನೆ ಬೇಕಾಗಿದೆ. ... ಹಾಗಾಗಿ ಈ ಯೋಜನೆಗೆ ... ತಗ್ಗಿಸಲು ರಾಘವೇಶ್ವರನ ಬಾಯಿಗೆ ಗೋಕರ್ಣವನ್ನು ... ಎಂಬ ಪುಕಾರುಗಳಿವೆ.

ಈ ಕೊಲೆ ಯಾಕೆ ನಡೆಯಿತು?

ಉಡುಪಿ ಜಿಲ್ಲೆಯ ಹೆರ್ಡೂರು ಸಮೀಪದ ಅಲಂಗಾರು-ಗರಡಿಮನೆ ಎಂಬ ಹಳ್ಳಿಯಲ್ಲಿ ಮೊನ್ನೆ ಆಗಸ್ಟ್ 18ರಂದು ನಟ್ಟಿರುಳಿನಲ್ಲಿ ಸದಾನಂದ ಪೂಜಾರಿ ಎಂಬ ನಡುವಯಸ್ಕರನ್ನು ಇರಿದು ಕೊಲ್ಲಲಾಯಿತು. ಈ ಕೊಲೆಯ ಹಿಂದೆ ಏನಿದೆ? ಆಸ್ತಿಗಾಗಿ ಈ ಅಕೃತ್ಯ ನಡೆಯಿತೋ? ಅಥವಾ ರಾಜಕೀಯ ಕಾರಣಕ್ಕೋ? ಕರಾವಳಿಯ ಪತ್ರಿಕೆಗಳು ಈ ಘಟನೆಯ ಬಗ್ಗೆ ಎರಡು ಬಗೆಯ ವರದಿಗಳನ್ನೂ ಪ್ರಕಟಿಸಿವೆ. ಸದ್ಯಕ್ಕೆ ಚಾಲ್ತಿಯಲ್ಲಿರುವ ಒಂದು ಆಧುನಿಕೋತ್ತರವಾದದ ಪ್ರಕಾರ ವಾಸ್ತವವೆಂಬುದೇ ಇಲ್ಲ; ಇರುವುದು ಕೇವಲ ವರದಿಗಳು ಅಥವಾ ನಿರೂಪಣೆಗಳು ಅಥವಾ ಚಿತ್ರಣಗಳು. ಅಲಂಗಾರು ಕೊಲೆ ಕುರಿತ ಪತ್ರಿಕಾ ವರದಿಗಳು ಇದನ್ನೇ ಸಾಬೀತುಪಡಿಸುವಂತಿವೆ. ವಾಸ್ತವವೆಂಬುದು ಇದೆಯೋ ಇಲ್ಲವೋ ಈ ವಾದವಂತೂ ಆಕರ್ಷಕವಾಗಿದೆ. ಎಲ್ಲವೂ ಬರೇ ನಿರೂಪಣೆಯಾದರೆ ನಾವು ಬದುಕಿನಿಂದಲೇ ರಜೆ ತೆಗೆದುಕೊಂಡು ಬಿಡಬಹುದು. ವಾಸ್ತವದ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾದ್ದೇ ಇಲ್ಲ; ವಾಸ್ತವಕ್ಕೆ ಸ್ಪಂದಿಸುವ ನೈತಿಕ ಜವಾಬ್ದಾರಿಯಂತೂ ಮೊದಲೇ ಇಲ್ಲ. ಅಲಂಗಾರಿನ ಘಟನೆಯನ್ನೇ ನೋಡಿ. ಅದರ ಬಗ್ಗೆ ಎರಡು ಬಗೆಯ ವರದಿಗಳಿವೆ. ಈ ವರದಿಗಳು ಕೊಟ್ಟಿರುವಷ್ಟೇ ವಿವರಗಳಿಂದ ನೀವು ಇನ್ನೂ ಹಲವು ನಮೂನೆಯ ವರದಿಗಳನ್ನು ಮಾಡಿಕೊಳ್ಳಬಹುದು. ಆದರೆ ಉಡುಪಿ ಜಿಲ್ಲೆಯ ಅಲಂಗಾರು ಎಂಬ ಕುಗ್ರಾಮದಲ್ಲಿ ಒಂದು ಕೊಲೆ ನಡೆದಿರುವುದಂತೂ ಹೌದು. ಯಾವ ವರದಿಯೂ ಅದನ್ನು ಅಲ್ಲಗಳೆಯಲಾರದು; ಕೊಲೆ ಒಂದು ಪಾಪಕೃತ್ಯ ಎಂಬ ಬಗೆಗೂ ಸಂದೇಹವಿರಲಾರದು.

ಈ ಘಟನೆಯಲ್ಲಿ ಮೃತರಾದ ಸದಾನಂದ ಪೂಜಾರಿ ಮತ್ತು ಮುಖ್ಯ ಆರೋಪಿಗಳಾದ ಸುಂದರ ಪೂಜಾರಿ, ಅವರ ಮಗ ನವೀನ ಮತ್ತು ಅಳಿಯ ಸತೀಶ ಹತ್ತಿರದ ಸಂಬಂಧಿಗಳು. ಅವರ ನಡುವೆ, ಒಂದು ತುಂಡು ಭೂಮಿಯ ಒಡೆತನದ ವಿವಾದ ಇದ್ದು ಅದು ಕೋರ್ಟಿನವರೆಗೂ ಹೋಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದವರಲ್ಲಿ ಯಾರೂ ಅನುಕೂಲಸ್ಥರಲ್ಲ. ಹೆಸರೇ ಸೂಚಿಸುವಂತೆ ಅವರೆಲ್ಲರೂ ಬಿಲ್ಲವ ಸಮುದಾಯಕ್ಕೆ ಸೇರಿದವರು ಮತ್ತು ಸಣ್ಣಪುಟ್ಟ ಕೂಲಿ, ಎಲೆಕ್ಟ್ರಿಕ್ ರಿಪೇರಿ, ಗಾರೆಕೆಲಸ ಮುಂತಾದ್ದನ್ನು ಮಾಡುತಿದ್ದವರು. ಸದಾನಂದ ಪೂಜಾರಿ ದನದ ವ್ಯಾಪಾರವನ್ನು ಮಾಡುತ್ತಿದ್ದರು. ಬಿಜೆಪಿಯ ಅಂಗಸಂಸ್ಥೆಯಾದ ಭಜರಂಗದಳದವರು ಪೂಜಾರಿಯವರಿಗೆ ಈ ವೃತ್ತಿ ಬಿಡಬೇಕು ಎಂದು ತಾಕೀತು ಮಾಡಿದ್ದರು ಅಥವಾ ಕರಾವಳಿಯ ಪತ್ರಿಕೆಗಳ ಭಾಷೆಯಲ್ಲಿ ಹೇಳುವುದಾದರೆ "ಎಚ್ಚರಿಕೆ" ನೀಡಿದ್ದರು. ಅಂದರೆ ದನದ ವ್ಯಾಪಾರ ಮಾಡುವುದು ಅಪರಾಧ ಎಂಬುದನ್ನು ಭಜರಂಗದಳ ಮಾತ್ರವಲ್ಲ, ಕರಾವಳಿಯ ಪತ್ರಿಕೆಗಳೂ



ಕೊಲೆಯಾದ ಸ್ಥಳದಲ್ಲಿ ನಿಗೂಢವಾಗಿ ನಿಂತಿದ್ದ ಆಂಬುಲೆನ್ಸ್

ಮಾನ್ಯ ಮಾಡಿವೆ! ಮೃತ ಸದಾನಂದ ಪೂಜಾರಿ ಈ "ಎಚ್ಚರಿಕೆ"ಗಳನ್ನು ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ. ಈ ಕೊಲೆಯ ಮುಖ್ಯ ಆರೋಪಿಯೂ ಮೃತನ ಸೋದರಳಿಯನೂ ಆಗಿರುವ ಸುಂದರ ಪೂಜಾರಿ, ಅವರ ಮಗ ಹಾಗೂ ಅಳಿಯ ಕೂಡ ಭಜರಂಗದಳದಲ್ಲಿದ್ದು ಪೂಜಾರಿಯವರ ಪತ್ನಿ ಹೆರ್ಡೂರು ಗ್ರಾಮಪಂಚಾಯತಿಯ ಸದಸ್ಯೆಯೂ ಆಗಿದ್ದಾರೆ. ಅವರು ಬಿಜೆಪಿ ಪಕ್ಷಕ್ಕೆ ಸೇರಿದವರು. ಮೃತರಿಗೆ ದನದ ವ್ಯಾಪಾರ ಮಾಡಕೂಡದು ಎಂಬ ಧಮಕಿ ಯಾನೆ ಎಚ್ಚರಿಕೆ ನೀಡಿದವರ ಪೈಕಿ ಅವರ ಕುಟುಂಬದವರೂ ಸೇರಿದ್ದರೋ ಇಲ್ಲವೋ, ಘಟನೆ ನಡೆದ ಸ್ಥಳದಲ್ಲಿ ಬಿಜೆಪಿ ಪರಿವಾರದ ಸಂಸ್ಥೆಯಾಗಿರುವ 'ವಿಹಿಂಪ'ದ ಆಂಬ್ಯುಲೆನ್ಸ್ ಮತ್ತು ಭಜರಂಗದಳದ ಕಾರ್ಯಕರ್ತರೊಬ್ಬರ ರಿಕ್ಷಾ ಇದ್ದದ್ದು ಆಸ್ತಿ ವಿವಾದದ ಜೊತೆ ರಾಜಕೀಯ ಕಾರಣವನ್ನು ಸೂಚಿಸುವಂತಿದೆ. ಪೊಲೀಸರು ಈ ಆಂಬ್ಯುಲೆನ್ಸ್ ಮತ್ತು ರಿಕ್ಷಾಗಳನ್ನು ವಶಪಡಿಸಿಕೊಂಡು ಹಿರಿಯಡ್ಕ ಪೊಲೀಸ್ ಠಾಣೆಯ ಅಂಗಳದಲ್ಲಿ ನಿಲ್ಲಿಸಿದ್ದಾರೆ.

ಹಗಲು ಹೊತ್ತಿಗೂ ಮನುಷ್ಯ ಸುಳಿಯದ ಅಲಂಗಾರು-ಗರಡಿ ಮನೆಯ ಸದಾನಂದ ಪೂಜಾರಿಯವರ ಮನೆಯೆದುರು ಆ ನಡುರಾತ್ರಿ ಈ ವಾಹನಗಳು ಯಾಕೆ ಬಂದುವು ಎಂಬುದರ ಬಗ್ಗೆಯೂ ಪತ್ರಿಕೆಗಳು ತರಹೇವಾರಿ "ಕಥನ"ಗಳನ್ನು ಈಗಾಗಲೇ ಸೃಷ್ಟಿಸಿವೆ. ಪೊಲೀಸರು ಸಹ 'ಸೂಕ್ತ ಸಾಕ್ಷ್ಯಾಧಾರ'ಗಳ ಸಮೇತ ಆ ಬಗ್ಗೆ ತಮ್ಮದೇ ಆದ ಒಂದು ನಿರೂಪಣೆಯನ್ನು ಆಳುವ ಪಕ್ಷದವರಿಗೂ ನೀಡಿ, ಆ ವಾಹನಗಳನ್ನು 'ಆರೋಪ ಮುಕ್ತ'ಗೊಳಿಸುವ ಸಂಭವವೂ ನಿಚ್ಚಳವಾಗಿ ಕಾಣುತ್ತಿದೆ.

ವಾಸ್ತವವೆಂಬುದೇ ಇಲ್ಲ; ಎಲ್ಲವೂ ಬರೇ ನಿರೂಪಣೆಗಳು ಎಂದಾದರೆ ಯಾವ ನಿರೂಪಣೆಯೂ ಇನ್ನೊಂದರಷ್ಟೇ ಸತ್ಯ ಅಥವಾ ಸುಳ್ಳು. ನ್ಯಾಯಾನ್ಯಾಯದ ಪ್ರಶ್ನೆಯಂತೂ ಬರುವುದೇ ಇಲ್ಲ. ಆದಾಗ್ಯೂ ಸದಾನಂದ ಪೂಜಾರಿಯವರ ಕೊಲೆಗೆ ಸಂಬಂಧಿಸಿದ ಹಾಗೆ ಯಾರೂ ಅಲ್ಲಗಳೆಯಲಾರದ ಇನ್ನೊಂದು ಸತ್ಯವಿದೆ. ಅದೇನೆಂದರೆ ಕೃಷ್ಣನ ನೆಲೆವೀಡಾದ ಈ ಪುಣ್ಯಭೂಮಿ ಅರ್ಥಾತ್ ಉಡುಪಿ ಜಿಲ್ಲೆಯಲ್ಲೂ ಗೋವುಗಳ ಲೇವಾದೇವಿ ನಡೆಯುತ್ತದೆ. ದನ ಎಮ್ಮೆ ಗೊಡ್ಡಾದ ಮೇಲೆ, ಎತ್ತು ಕೋಣ ಮುದಿಯಾದ ಮೇಲೆ ಅವನ್ನು ಸಾಕಿದವರಲ್ಲಿ ಬಹುತೇಕ ಜನ ಅವನ್ನು ಮಾರುತ್ತಾರೆ. ಜನ ಗೋವುಗಳನ್ನು ಪೂಜಿಸುವುದು ಹೌದು; ದುಡಿಸಿಕೊಳ್ಳುವುದೂ ಹೌದು. ದನಕರುಗಳನ್ನು ದೇವರು ಎಂದಷ್ಟೇ ಭಾವಿಸುವವರು ಜಾನುವಾರು ಸಂತೆಗಳನ್ನು ಮರೆತೇ ಬಿಡುತ್ತಾರೆ. ಸಂತೆ ಎಂದಮೇಲೆ ಕೊಳ್ಳುವವರೂ ಇರುವ ಹಾಗೆಯೇ ಮಾರುವವರೂ ಇರುತ್ತಾರೆ. ಈ ಸಂತೆಗಳ ಜೊತೆಗೆ ಹಳ್ಳಿಹಳ್ಳಿಗಳಲ್ಲೂ ಜಾನುವಾರುಗಳ ಮಾರಾಟ ಕುದುರಿಸುವ ದಲ್ಲಾಳಿಗಳಿದ್ದಾರೆ. ಜಾನುವಾರುಗಳನ್ನು ಮಾರಾಟ ಮಾಡುವವರಂತೆ, ಈ ದಲ್ಲಾಳಿಗಳಲ್ಲೂ ಹೆಚ್ಚಿನವರು ಹಿಂದೂಗಳು. ಆದರೆ ಬಿಜೆಪಿ ಮತ್ತು ಅದರ ಅಂಗಸಂಸ್ಥೆಗಳು ಈಗ ಈ ವ್ಯವಹಾರವನ್ನೇ ಅಪರಾಧ ಎಂಬಂತೆ ಚಿತ್ರಿಸುತ್ತಿವೆ. ಉಡುಪಿಯ ಮಠಾಧೀಶರು, ರಾಮಚಂದ್ರಾಪುರದ ಸ್ವಾಮಿಗಳು ಮತ್ತು ಇನ್ನೂ ಹಲವು ಮಠಮಂದಿರಗಳ ಮುಖ್ಯಸ್ಥರು, ಬಿಜೆಪಿಗಳ ಜೊತೆ ಸೇರಿಕೊಂಡು ಗೋವನ್ನು 'ಮಾತೆ'ಯ ಮಟ್ಟಕ್ಕೆ ಏರಿಸಿದರೆ, ಭಜರಂಗದಳದಂತಹ ಸಂಘಟನೆಯವರು ದನಕರು ಸಾಗಿಸುವವರನ್ನು ಸಿಕ್ಕಸಿಕ್ಕಲ್ಲಿ ಹಿಡಿದು ಮುಖಮೋರೆ ನೋಡದೆ ಚಚ್ಚುತ್ತಾರೆ. ಮಠಾಧೀಶರುಗಳಿಗೆ, ಗೋವು ರೈತರ ದುಡಿಮೆಯ ಸಂಗಾತಿ ಮತ್ತು ಬಡಕುಟುಂಬಗಳಿಗೆ ಹಾಲುಹೈನುಗಳ ಆದಾಯ ಮೂಲ ಎಂಬುದರ ಪರಿವೆಯೇ ಇಲ್ಲ. ಭಜರಂಗದಳವರಿಗೆ ರಾಜ್ಯದಲ್ಲಿ ಗೋಹತ್ಯೆ ಮತ್ತು ಸಾಗಾಣಿಕೆಗಳಿಗೆ ಸಂಬಂಧಿಸಿದ ಹಾಗೆ ಒಂದು ಕಾನೂನಿದೆ ಹಾಗೂ ಆ ಕಾನೂನಿನಲ್ಲಿ ಷರತ್ತುಗಳಿಗೆ ಒಳಪಟ್ಟು ಗೋಹತ್ಯೆಗೆ ಅವಕಾಶವಿದೆ ಎನ್ನುವುದು ಗೊತ್ತಿಲ್ಲ. ಗೊತ್ತಿದ್ದರೂ ಅವರು ಅದಕ್ಕೆ ಕ್ಯಾರೇ ಅನ್ನುವವರಲ್ಲ. ಗುಂಪುಕಟ್ಟಿಕೊಂಡು ಅಸಹಾಯಕರಿಗೆ ಹೊಡೆಯುವವರಿಗೆ ಕಾನೂನು ಇದ್ದರೆಷ್ಟು? ಬಿಟ್ಟರೆಷ್ಟು? ಬಿಜೆಪಿಯ ಈ ಗೋವಿನ ರಾಜಕೀಯ ನಿಂತಿರುವುದೇ ಸುಳ್ಳು, ಸೋಗಲಾಡಿತನ ಮತ್ತು ಹಿಂಸೆಗಳ ಮೇಲೆ. ಈ ರಾಜಕೀಯಕ್ಕೆ ಗೋಸಾಕಣೆ ರೈತರಿಗೆ ಅವರ ದಾದ ಒಂದು ಆರ್ಥಿಕ ವ್ಯವಹಾರ ಎಂಬ ಸತ್ಯವನ್ನು ಮರೆಮಾಚುವುದೂ ಅನಿವಾರ್ಯವಾಗಿದೆ. ಬಹುತೇಕ ಹಿಂದುಗಳು ತಮ್ಮ ನಿರುಪಯೋಗಿ ಜಾನುವಾರುಗಳನ್ನು ಮಾರಾಟ ಮಾಡುತ್ತಾರೆ ಎಂಬ ಸರಳ ಸತ್ಯ ಕೂಡಾ ಬಿಜೆಪಿ ಈಗ ಮರೆಮಾಚುತ್ತಿದೆ. ಹಾಗಾಗಿ ದನಕರುಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಅಥವಾ ಕಸಾಯಿಖಾನೆಗೆ ಸಾಗಿಸುವವರು, ಅವನ್ನು ಕದ್ದೇ ಸಾಗಿಸುತ್ತಾರೆ ಎಂಬ ಸುಳ್ಳನ್ನು ಸಹ ಬಿಜೆಪಿ ಮತ್ತು ಅದರ ಕರಪತ್ರದಂತೆ ವರ್ತಿಸುವ ಪತ್ರಿಕೆಗಳು ಹುಟ್ಟುಹಾಕಿವೆ.


ಆದಿ ಉಡುಪಿ ಬೆತ್ತಲೆ ಪ್ರಕರಣಕ್ಕೂ ಈ ಸುಳ್ಳನ್ನೇ ಕಾರಣವೆಂದು ಹೇಳಲಾಯಿತು. ಆದರೆ ತಮ್ಮ ವಾಹನದಲ್ಲಿ ದನಕರು ಸಾಗಿಸುತ್ತಿದ್ದ ಹಾಜಬ್ಬ ಹಸನಬ್ಬ ಅವನ್ನು ಕ್ರಯಕೊಟ್ಟು ಖರೀದಿಸಿದ್ದರು. ಮಾರಾಟ ಮಾಡಿದ ವ್ಯಕ್ತಿ ಓರ್ವ ಹಿಂದೂ ಆಗಿದ್ದರು. ಎರಡು ವರ್ಷಗಳ ಕೆಳಗೆ ಉಡುಪಿಗೆ ಸಮೀಪದ ಕಾವಡಿ ಗ್ರಾಮದಲ್ಲಿ ಕೊಲೆಯಾದ ಪಾಟಾಳಿ ಕೃಷ್ಣಯ್ಯ ತನ್ನ ಕೃಷಿಯ ಜೊತೆಗೆ ದನಕರು ಎತ್ತು ಎಮ್ಮೆಗಳನ್ನು ಮಾತ್ರವಲ್ಲ ಕಂಬಳದ ಕೋಣಗಳನ್ನು ಸಾಕಿದ್ದರು. ಅವರು ಮೇಲುಸಂಪಾದನೆಗಾಗಿ ದನದ ವ್ಯಾಪಾರವನ್ನೂ ಮಾಡುತ್ತಿದ್ದುದೇ ಅವರಿಗೆ ಮುಳುವಾಯಿತು. ಪಾಟಾಳಿ ಕೃಷ್ಣಯ್ಯ ಹಿಂದೂ ಅಷ್ಟೇ ಅಲ್ಲ; ಅವರ ಊರಿನ ದೇವಸ್ಥಾನದ ಚಾಕರಿ ಮಾಡುತ್ತಿದ್ದ ಬ್ರಾಹ್ಮಣ ಕೂಡ.

ಉಡುಪಿ

ಅಲಂಗಾರು-ಗರಡಿಮನೆಯ ಸದಾನಂದ ಪೂಜಾರಿಯವರ ಕೊಲೆ, ಆಸ್ತಿ ವಿವಾದ, ವೈಮನಸ್ಯ ಮುಂತಾದ ಕೌಟುಂಬಿಕ ಕಾರಣಕ್ಕೇ ನಡೆದಿರಬಹುದು; ಅವರ ಕೊಲೆಯ ಆರೋಪಿಗಳೂ ಅವರ ಹತ್ತಿರದ ಸಂಬಂಧಿಕರೇ. ಆದರೆ ದನದ ವ್ಯಾಪಾರದ ಸಲುವಾಗಿ ಸದಾನಂದ ಪೂಜಾರಿಯವರಿಗೆ ಬೆದರಿಕೆ ಹಾಕುತ್ತಿದ್ದ ಭಜರಂಗದಳಕ್ಕೆ ಈ ಆರೋಪಿಗಳು ನಿಷ್ಠೆ ಹೊಂದಿದ್ದರು. ಭಜರಂಗದಳವೇ ಆರೋಪಿಗಳಿಗೆ ಈ ದುಸ್ಸಾಹಸಕ್ಕೆ ಮುಂದಾಗಲು ಧೈರ್ಯವನ್ನು, ನೆರವನ್ನೂ ನೀಡಿರಬಹುದಲ್ಲವೇ? ಈ ಸಾಧ್ಯತೆಯ ಬಗ್ಗೆ ಪೊಲೀಸರು ಪ್ರಾಮಾಣಿಕವಾಗಿ ತನಿಖೆ ನಡೆಸಿದರೆ ಘಟನೆಯ ಕುರಿತು ಸತ್ಯ ಬಯಲಾಗಬಹುದು. ಕೊನೆಗೂ ಈ ಕೊಲೆಯ ನೈಜ ಹಿನ್ನೆಲೆ ಏನೆಂಬುದು ನಿಗೂಢವಾಗಿಯೇ ಉಳಿಯಬಹುದು. ಆದರೆ ಅಪರಾಧಿಗಳಿಗೆ ಶಿಕ್ಷೆಯಾದರೂ ಆಗುವಂತೆ ಕಾನೂನು ವ್ಯವಸ್ಥೆ ನಡೆದುಕೊಳ್ಳಬೇಕು.

■ ಜಿ.ರಾಜಶೇಖರ

ಕೊಪ್ಪಳ: ನಿಲೂಗಲ್ಲನ ನುಂಗಾಟ, ಸುನೀಲನ ಕಂಟ್ರಾಟ್!


ನಿಲೂಗಲ್ಲ


ಶಾಸಕ ಸಂಗಣ್ಣ ಕರಡಿಯ ಆಶ್ರಯ ಪ್ಲಾಟ್ ಹಗರಣ, ಬಡವರಿಗೆ ದಕ್ಕಬೇಕಿದ್ದ ಆಹಾರ ಧಾನ್ಯಗಳ ಹಗರಣ, ಹೀಗೆ ವರ್ಷಕ್ಕೊಂದು ಕೋಟ್ಯಂತರ ರೂಪಾಯಿಗಳ ಹಗರಣಗಳನ್ನು ಕಾಣುತ್ತಿರುವ ಕೊಪ್ಪಳದಲ್ಲೀಗ ಮತ್ತೊಂದು ಹೊಸ ಹಗರಣ ಬಯಲಾಗಿದೆ.

ಅದು ಭೂ ಖರೀದಿಯ ನೆಪದಲ್ಲಿ ಭ್ರಷ್ಟ ಅಧಿಕಾರಿಗಳು ಮತ್ತು ತಲೆಹಿಂಡುಕ ಬ್ರೋಕರ್‌ಗಳು ಜೊತೆಗೂಡಿ ಒಂದೆಡೆ ಗೃಹ ಮಂಡಳಿಗೂ, ಇನ್ನೊಂದೆಡೆ ಬಡ ಭೂಮಾಲೀಕರಿಗೂ ಮೋಸವೆಸಗಿರುವ ಹಗರಣ!

ಆಗಿದ್ದೇನೆಂದರೆ, ಕೊಪ್ಪಳ ಜಿಲ್ಲಾಧಿಕಾರಿ ಕಚೇರಿ ಹತ್ತಿರವಿರುವ ಒಟ್ಟು 46 ಎಕರೆ 29 ಗುಂಟೆ ಜಮೀನನ್ನು ಕರ್ನಾಟಕ ಗೃಹ ಮಂಡಳಿಯ ಕೊಪ್ಪಳ ವಿಭಾಗಕ್ಕೆ ವಶಪಡಿಸಿಕೊಳ್ಳಲಾಯಿತು. 11.6.07 ರಂದು ಮಾಡಿಕೊಂಡ ಒಪ್ಪಂದದ ಪ್ರಕಾರ ಈ ಭೂಮಿಯ ಮಾಲೀಕರಿಗೆ ಪ್ರತಿ ಎಕರೆಗೆ 7 ಲಕ್ಷ ರೂಪಾಯಿಯಂತೆ ಒಟ್ಟು 3 ಕೋಟಿ, 59 ಲಕ್ಷ, 78 ಸಾವಿರ ರೂಪಾಯಿಗಳನ್ನು ಸರಕಾರ ನೀಡಬೇಕಿತ್ತು.

ಆದರೆ ನಡೆದದ್ದೇ ಬೇರೆ. ಜಮೀನನ್ನು ಖರೀದಿಸಿದ ಮೇಲೆ ಸರ್ಕಾರಿ ನಿಯಮದ ಪ್ರಕಾರ ಭೂಮಾಲೀಕರಿಗೆ (ಅಂದರೆ ಸರಕಾರಕ್ಕೆ ತಮ್ಮ ಭೂಮಿಯನ್ನು ಮಾರಿದವರಿಗೆ) ಸರ್ಕಾರವು ನೇರವಾಗಿ ಕ್ರಾಸ್ ಮಾಡಿದ ಚೆಕ್ ಮೂಲಕ ಮೊತ್ತವನ್ನು ನೀಡಬೇಕು. ಆದರೆ ಬ್ರೋಕರ್ ಮಲ್ಲಪ್ಪ ಉಲ್ಲತ್ತಿ, ಅಭಯ ಸಾಲ್ವೆಂಟನ ಮ್ಯಾನೇಜರ್ ಮಾರವಾಡಿ ಖದೀಮ ಮಹಾವೀರ ಮೆಹತಾ ಮತ್ತು ಕರ್ನಾಟಕ ಗೃಹಮಂಡಳಿಯ ಕೊಪ್ಪಳದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಚ್.ವೈ. ನಿಲೂಗಲ್ ಎಂಬ ಲಫಂಗರು ಸೇರಿಕೊಂಡು ಈ ಭೂಮಿಗೆ ಯಾವುದೇ ಸಂಬಂಧ ಹೊಂದಿರದ ಬೆಂಗಳೂರಿನ ಸುನೀಲ್‌ಕುಮಾರ ಎಂಬಾತನ ಹೆಸರಿಗೆ 1 ಕೋಟಿ, 23 ಲಕ್ಷ 47 ಸಾವಿರ ರೂಪಾಯಿಯ ಚೆಕ್ ನೀಡಿ ಹಣ ತಿಂದಿದ್ದಾರೆ.

ಉಲ್ಲತ್ತಿ, ಮಹಾವೀರ, ಸುನೀಲ್ ಹಾಗೂ ನಿಲೂಗಲ್ ಎಂಬ ನಾಲ್ವರು ವಂಚಕರು ಪ್ರತಿ ಎಕರೆಗೆ 7 ಲಕ್ಷ ನೀಡಿದ್ದೇವೆ ಎಂದು ಸರಕಾರಕ್ಕೆ ದಾಖಲೆ ತೋರಿಸಿದ್ದಾರೆ. ಆದರೆ ಅದೇ ಹೊತ್ತಿಗೆ ಬೆಂಗಳೂರಿನ ಸುನೀಲ್ ಕುಮಾರ್ ಎಂಬಾತನಿಗೆ ಪ್ರತಿ ಎಕರೆಗೆ ಮೂರು ಲಕ್ಷ ಕೊಡಬೇಕೆಂದು ರೈತರಿಗೆ ಗೊತ್ತಾಗದಂತೆ ಅವರಿಂದ ಕಾಗದ ಪತ್ರಗಳಿಗೆ ಸಹಿ ಮಾಡಿಸಿಕೊಂಡಿದ್ದಾರೆ.



ಹೀಗೆ ಖರೀದಿಯಾದ ಸರ್ವೆ ನಂ. 358:ಎ ರ ಭೂಮಾಲೀಕರಾದ ಶ್ರೀಮತಿ ಸಣ್ಣ ಹುಸೇನಮ್ಮ ಎಂಬುವವರಿಗೆ ಪ್ರತಿ ಎಕರೆಗೆ ನೀಡಬೇಕಿದ್ದ 7 ಲಕ್ಷ ರೂ.ಗಳಲ್ಲಿ ಬರೀ ನಾಲ್ಕು ಲಕ್ಷದಂತೆ ರೂ.ಗಳನ್ನು ನೀಡಿ ಉಳಿದ ಹಣ ನೀಡದೇ ಕೈ ಎತ್ತಿದ್ದಾರೆ. ಅಂದರೆ ಸಣ್ಣ ಹುಸೇನಮ್ಮನ ಭೂ ಖರೀದಿಯೊಂದರಲ್ಲಿಯೇ ಆಕೆಗೂ ಲಕ್ಷಾಂತರ ರೂಪಾಯಿ ವಂಚನೆ, ಸರ್ಕಾರಕ್ಕೂ 19 ಲಕ್ಷ 77 ಸಾವಿರ ರೂಪಾಯಿ ವಂಚನೆ. ಅದೇ ರೀತಿ ಮರ್ದಾನಸಾಬ ಎಂಬುವವರಿಗೆ ಕೊಡಬೇಕಿದ್ದ 44 ಲಕ್ಷದಲ್ಲಿ ಕೇವಲ 18 ಲಕ್ಷ ರೂಪಾಯಿ ನೀಡಿ ಉಳಿದ 26 ಲಕ್ಷ ರೂಪಾಯಿಗಳನ್ನು ಗುಳುಂ ಮಾಡಿದ್ದಾರೆ.


ಸಂಗಣ್ಣ ಕರಡಿ

ಈ ಹಗರಣದ ವಾಸನೆ ಹಿಡಿದ ಪೀರಸಾಬ ಬೆಳಗಟ್ಟಿ ಎಂಬುವವರು ದೂರು ನೀಡಿದಾಗ ಎ.ಸಿ. ಮಾನ್ಕರ್ ತನಿಖೆ ನಡೆಸಿದರು. ಆ ತನಿಖೆಯಿಂದ ಗೊತ್ತಾಗಿದ್ದೇನೆಂದರೆ ಸದರಿ 46 ಎಕರೆ ಜಮೀನಿನ ಎಲ್ಲ ಭೂಮಾಲೀಕರ ಹೆಸರಿಗೆ ಪ್ರತಿ ಎಕರೆಗೆ 7 ಲಕ್ಷದಂತೆ ಪರಿಹಾರ ಧನದ ಚೆಕ್ಕನ್ನು ಬರೆದು, ಅನಂತರ ಅದನ್ನು ಕಾಟು ಹೊಡೆದು ಸಂಬಂಧವಿರದ ಸುನೀಲ್‌ಕುಮಾರ ಎಂಬುವವರಿಗೆ ಚೆಕ್ ಬರೆಯಲಾಗಿದೆ.



ಇದು ಗೊತ್ತಾಗುತ್ತಿದ್ದಂತೆ ಮಾನ್ಕರ್ ನಡೆಸುತ್ತಿದ್ದ ವಿಚಾರಣೆಗೆ ಬರದೇ ತಲೆತಪ್ಪಿಸಿಕೊಂಡು ತಿರುಗಲಾರಂಭಿಸಿದ ಕಳ್ಳ ನಿಲೂಗಲ್ ಕೊನೆಗೂ ಹೇಳಿದ್ದೇನೆಂದರೆ "ರೈತ ಹೆಸರಿಗೆ ಬರೆದ ಚೆಕ್‌ಗಳನ್ನು ಅವರು ಸ್ವೀಕರಿಸಲಿಲ್ಲ. ಅದಕ್ಕೆ ಅವುಗಳನ್ನು ರದ್ದುಮಾಡಲಾಯಿತು" ಎಂಬುದಾಗಿ. ಆದರೆ ಬರೆದ ಚೆಕ್‌ಗಳನ್ನು ರದ್ದುಪಡಿಸಿದ್ದನ್ನು ಆತ ಸರ್ಕಾರಕ್ಕಾಗಲಿ, ಮೇಲಧಿಕಾರಿಗಳ ಗಮನಕ್ಕಾಗಲಿ ತಾರದೇ ಈಗ ಸಿಕ್ಕುಬಿದ್ದಿದ್ದಾನೆ. ಅಷ್ಟೇ ಅಲ್ಲ, ಗೃಹ ಮಂಡಳಿಯ ಕಾನೂನು ಸಲಹೆಗಾರರಾದ ವಕೀಲ ಆರ್.ಎಚ್. ಹುಲಿಗಿಯವರು ಹೇಳುವಂತೆ ರೈತರ ಬದಲಾಗಿ ಬೇರೆಯವರ ಹೆಸರಿಗೆ ಚೆಕ್ ನೀಡುವ ಪ್ರಮೇಯವೇ ಇಲ್ಲ.

ಇದೆಲ್ಲದರಿಂದ ಸ್ಪಷ್ಟವಾಗುವುದೇನೆಂದರೆ ಉಲ್ಲತ್ತಿ, ಮಹಾವೀರ, ಸುನೀಲ್ ಹಾಗೂ ನಿಲೂಗಲ್ ಸೇರಿಕೊಂಡು ಭೂಮಾಲೀಕರಿಗೆ ಬರಬೇಕಿದ್ದ 1 ಕೋಟಿ, 23 ಲಕ್ಷ 47 ಸಾವಿರ ರೂಪಾಯಿಗಳನ್ನು ನುಂಗಿದ್ದಾರೆ.

ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿರುವ ಈ ಖದೀಮರ ಬಗೆಗಿನ ವರದಿ ಈಗ ಜಿಲ್ಲಾಧಿಕಾರಿ ರಾಮಣ್ಣ ನಾಯಕರ ಟೇಬಲ್ ಮೇಲಿದೆ. ಅವರು ತಡಮಾಡದೇ ಇವರೆಲ್ಲ ಮೋಸದಿಂದ ತಿಂದಿರುವ ಬಡವರ ಹಣವನ್ನು ಕಕ್ಕಿಸಲೇಬೇಕಿದೆ.

■ ವರದಿಗಾರ

ಎಚ್ಚೆತ್ತ ಪೋಲೀಸರು - ಸಿಕ್ಕಿಬಿದ್ದ ಖದೀಮರು

'ಲಂಕೇಶ್' ವರದಿಯ ಪ್ರಭಾವ



ರಮೇಶ್

ಕಳೆದ ವಾರವಷ್ಟೆ 'ಲಂಕೇಶ್' ಹುಬ್ಬಳ್ಳಿ-ಧಾರವಾಡಗಳಲ್ಲಿ ಹೇಗೆ ಬಡವರ ಮನೆ ಸೇರಬೇಕಾದ ದವಸ ಧಾನ್ಯ ಖದೀಮರ ಗೋಡೋನ್ ಸೇರುತ್ತಿದೆ ಎಂಬ ಬಗ್ಗೆ ವಿವರವಾದ ವರದಿಯನ್ನು ಪ್ರಕಟಿಸಿತ್ತು. ಅದನ್ನು ಓದಿ ಕುಂಭಕರ್ಣ ನಿದ್ರೆಯಿಂದೆದ್ದ ಪೋಲೀಸರು ವರದಿಯ ಜಾಡನ್ನೇ ಹಿಡಿದು ಕಾರ್ಯಾಚರಣೆ ನಡೆಸಿ ಅಂತೂ ಒಂದಿಷ್ಟು ಖದೀಮರನ್ನು ಬಂಧಿಸಿದ್ದಾರೆ.

ಹಳೇ ಹುಬ್ಬಳ್ಳಿಯ ಹಾಗೂ ಕೇಶ್ವಾಪೂರದಲ್ಲಿರುವ ಕೆಲವು ಅಕ್ಕಿ ಗೋದಾಮುಗಳ ಮೇಲೆ ದಾಳಿ ನಡೆಸಿರುವ ಕಸಬಾಪೇಟೆ ಮತ್ತು ಕೇಶ್ವಾಪೂರ್ ಠಾಣೆಯ ಪೋಲೀಸರು ಲಕ್ಷಾಂತರ ಮೌಲ್ಯದ ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರಲ್ಲದೇ ಅದರಲ್ಲಿ ಶಾಮೀಲಾಗಿರುವ ಕೆಲವು ಖದೀಮರನ್ನೂ ಬಂಧಿಸಿದ್ದಾರೆ.

ಬಂಧಿತರಲ್ಲಿ ಮಹ್ಮದ್ ಹುಸೇನ್ ಕೊಳೂರ್ ಕೂಡ ಒಬ್ಬ. ಈತ ಈ ಮೊದಲು ಎಫ್‌ಸಿಐ ಗೋಡೋನ್‌ನಲ್ಲಿ ಕ್ಲರ್ಕ್ ಆಗಿ ಕಾರ್ಯನಿರ್ವಹಿಸುತ್ತಿದ್ದ. ಆಗಲೇ ಬಡವರಿಗೆ ಸೇರಬೇಕಾದ ದವಸಧಾನ್ಯಗಳನ್ನು ಕದ್ದು ಮಾರುವ ಕೆಟ್ಟ ಚಟವನ್ನು ಬೆಳೆಸಿಕೊಂಡಿದ್ದ. ಯಾವಾಗ ಕಳ್ಳತನದ ರುಚಿ ಹತ್ತಿತ್ತೋ ಅಕ್ಕಿಯನ್ನು ದೊಡ್ಡ ಪ್ರಮಾಣದಲ್ಲಿ ಕದ್ದು ಲಕ್ಷಾಂತರ ರೂಪಾಯಿ ದುಡ್ಡು ಮಾಡಿಕೊಂಡ. ಕೊನೆಗೆ ತನ್ನ ಕ್ಲರ್ಕ್‌ಗಿರಿಗೆ ರಾಜಿನಾಮೆ ಕೊಟ್ಟು ಫುಲ್‌ಟೈಮ್ ಅಕ್ಕಿ ಕದಿಯುವ ದಂಧೆಗೆ ಇಳಿದ. ಇವನ ಕಳ್ಳತನಕ್ಕೆ ಮಾಜಿ ಶಾಸಕ ಜಬ್ಬಾರ್ ಖಾನ್ ಹೊನ್ನಳ್ಳಿಯ ಸಂಪೂರ್ಣ ಬೆಂಬಲವಿದ್ದುದ್ದರಿಂದಲೇ ಪೋಲೀಸರೂ ತೆಪ್ಪಗಿದ್ದರು. ಈಗ ಖಾನ್ ಮಾಜಿಯಾದ ಮೇಲೆ ಭಗಣಿ ಕೂಟ ಬಡಿದಿದ್ದಾರೆ.

ಸಿಕ್ಕಿಬಿದ್ದ ಇನ್ನಿಬ್ಬರು ಅಕ್ಕಿ ಕಳ್ಳರೆಂದರೆ ಇಡೀ ಹುಬ್ಬಳ್ಳಿಯಲ್ಲಿಯೇ ಅತಿದೊಡ್ಡ ಅಕ್ಕಿ ವ್ಯಾಪಾರಿಗಳಾದ ಹರ್ಲಾಪುರ್ ಮತ್ತು ತಿಳವಳ್ಳಿ. ಇವರ ಕೇಶ್ವಾಪೂರ್ ಗೋಡೋನ್ ಮೇಲೆ ದಾಳಿ ಮಾಡಿ ಕಳ್ಳತನದ ಅಕ್ಕಿ ವಶಪಡಿಸಿಕೊಂಡದ್ದಲ್ಲದೇ ಈ ಇಬ್ಬರೂ ಖದೀಮರನ್ನು ಹೆಡೆಮುರಿ ಕಟ್ಟಿ ಎಳೆದೊಯ್ದಿದ್ದಾರೆ. ಈ ಇಬ್ಬರೂ ಬಡಬಗ್ಗರಿಗೆ ಸೇರಬೇಕಾದ ಅಕ್ಕಿಯನ್ನು ಎಫ್‌ಸಿಐ ಗೋಡೋನ್‌ಗಳಿಂದ ಕದ್ದು, ಆಮೇಲೆ ಅದನ್ನು ದೊಡ್ಡ ದೊಡ್ಡ ಅಕ್ಕಿ ಬ್ರ್ಯಾಂಡ್ ನೇಮ್ ಹೆಸರಲ್ಲಿ ಮಾರುವುದನ್ನೇ ದಂಧೆ ಮಾಡಿಕೊಂಡಿದ್ದವರು. ಅತ್ತ ಬಡವರ ಹೊಟ್ಟೆ ಮೇಲೆ ಹೊಡೆಯುತ್ತಾ, ಇತ್ತ ದುಬಾರಿ ಬೆಲೆ ಕೊಟ್ಟು ದೊಡ್ಡ ಬ್ರ್ಯಾಂಡ್ ನೇಮ್ ಅಕ್ಕಿ ಕೊಳ್ಳುವ ಗ್ರಾಹಕರಿಗೂ ತಿರುಪತಿ ನಾಮ ಹಾಕುತ್ತಾ ಲಕ್ಷಾಂತರ ರೂಪಾಯಿ ಕೊಳ್ಳೆ ಹೊಡೆದಿದ್ದಾರೆ.


ಎನ್.ಶಿವಕುಮಾರ್

ಈಗ ಹರ್ಲಾಪೂರ್ ಎಂಬ ಖದೀಮನನ್ನು ಹೇಗಾದರೂ ಮಾಡಿ ರಕ್ಷಿಸಬೇಕೆಂದು ವಿಶ್ವ ಹಿಂದೂ ಪರಿಷತ್ತಿನ ರಮೇಶ್ ಭಾಪಣ ಓಡಾಡುತ್ತಿದ್ದಾನೆ. ಈ ರಮೇಶ್ ಜಗದೀಶ್ ಶೆಟ್ಟರ್‌ನ ಖಾಸಾ ಬಳಗದಲ್ಲಿರುವಾತ. ರಾಜ್ಯದಲ್ಲಿರುವ ಬಿಜೆಪಿ ಸರ್ಕಾರ, ಜಗದೀಶ್ ಶೆಟ್ಟರ್‌ನ ವೈಯಕ್ತಿಕ ಪ್ರಭಾವ ಬಳಸಿಕೊಂಡು ಹರ್ಲಾಪೂರ್ ಎಂಬ ಕಳ್ಳನನ್ನು ರಕ್ಷಿಸುವ ಜವಾಬ್ದಾರಿಯನ್ನು ಈತ ಹೊತ್ತುಕೊಂಡಿದ್ದಾನೆ. ಇದಕ್ಕಾಗಿ ಪೋಲೀಸ್ ಕಮೀಷನರ್ ಆಫೀಸಿನಲ್ಲಿ ಕ್ರೈಮ್ ಬ್ರಾಂಚ್‌ನ ಇನ್ಸ್‌ಪೆಕ್ಟರ್ ಆಗಿರುವ ತಡಕೋಡ ಎಂಬುವವನನ್ನು ಮಧ್ಯವರ್ತಿಯನ್ನಾಗಿ ಮಾಡಿಕೊಂಡು ಕಮೀಷನರ್ ಮೇಲೆ ಒತ್ತಡ ತರುತ್ತಿದ್ದಾನೆ. ಅದೂಅಲ್ಲದೇ, ಈ ವಿಚಾರ ಪತ್ರಿಕೆಗಳಿಗೆ ಗೊತ್ತಾಗದಂತೆ ಗೌಪ್ಯವಾಗಿಡುವಲ್ಲಿಯೂ ಒಂದಿಷ್ಟು ಯಶಸ್ವಿಯಾಗಿದ್ದಾನೆ. ಪೋಲೀಸ್ ಕಮೀಷನರ್ ಪೊಲಿಟಿಕಲ್ ಅಂಡ್ ಮನಿ ಪವರ್‌ಗೆ ಬಗ್ಗುತ್ತಾರೋ ಅಥವಾ ಖದೀಮರನ್ನು ಬಗ್ಗಿಸಿ ಕರ್ತವ್ಯನಿಷ್ಠೆ ಮೆರೆಯುತ್ತಾರೋ ಇನ್ನೆರಡು ದಿನಗಳಲ್ಲಿ ಗೊತ್ತಾಗುತ್ತದೆ.

■ ಹುಬ್ಬಳ್ಳಿಯಾಂವ

ಕಾರಜೋಳರಿಗೆ ಗೊತ್ತಿರಲಿ!



"ಖದೀಮ ಅಧಿಕಾರಿಗಳು ಬೆಸ್ಟು, ದಕ್ಷ ಅಧಿಕಾರಿಗಳು ವೇಸ್ಟು" - ಇದು ಕೊಪ್ಪಳ ಜಿಲ್ಲೆಯ ರಾಜಕಾರಣಿಗಳ ಅಘೋಷಿತ ನಿಯಮ.

ಕೊಪ್ಪಳದ ಪಕ್ಕದಲ್ಲಿಯೇ ಡ್ಯಾಂ ಇದ್ದರೂ ಮಳೆಗಾಲದಲ್ಲೂ ಇಲ್ಲಿ ಕುಡಿಯುವ ನೀರು ಸಿಗುವುದಿಲ್ಲ. ರೈತನ ಭೂಮಿಗೆ ನೀರು ಹರಿಯದಿದ್ದರೂ ಅವುಗಳಿಗೆ ಈಗ ಬಂಗಾರದ, ಅಲ್ಲಲ್ಲ ಮೈನ್ಸ್‌ನ ಬೆಲೆ. ಆದರೆ ಅಲ್ಲಿಯೂ ರೈತರಿಗಾಗುತ್ತಿರುವುದು ವಂಚನೆಯೇ.

ಕೊಪ್ಪಳದ ಇಡೀ ವ್ಯವಸ್ಥೆ ಎಷ್ಟು ಕೆಟ್ಟಿದೆ ಎಂದರೆ ಇದು ಭ್ರಷ್ಟರಿಗೆ ಹೇಳಿಮಾಡಿಸಿರುವಂತಹ, ...ಕ್ಷರಿಗೆ ಜಾಗ ಇಲ್ಲದಂತಹ ಜಿಲ್ಲೆ ಎನಿಸಿಕೊಂಡಿದೆ. ಅದಕ್ಕೆ ಲೇಟೆಸ್ಟ್ ಉದಾಹರಣೆ ಮಾನ್ಸರ್ ಎಂಬ ದಕ್ಷ ...ಧಿಕಾರಿ. ಗೃಹ ಮಂಡಳಿಯ ಪ್ರಸ್ತುತ ಹಗರಣ ಸೇರಿದಂತೆ ಈ ಹಿಂದೆ 'ಲಂಕೇಶ್' ವಾರ ಪತ್ರಿಕೆ ...ಳಕಿಗೆ ತಂದಿದ್ದ ಶಾಸಕ ಸಂಗಣ್ಣ ಕರಡಿಯ ಆಶ್ರಯ ಪ್ಲಾಟ್ ಹಗರಣ ಮತ್ತು ಆಹಾರ ಇಲಾಖೆಯ ...ಟ್ಯಂತರ ರೂಪಾಯಿಗಳ ಹಗರಣಗಳ ತನಿಖೆಗಳನ್ನೂ ನಡೆಸುತ್ತಿದ್ದಾರೆ.

ಅವರ ತನಿಖೆಯಿಂದ ತಮ್ಮ ಹರಾಮಿತನ ಎಲ್ಲಿ ಬಯಲಾಗುತ್ತದೋ ಎಂದು ಹೆದರಿರುವ ಇಲ್ಲಿನ ... ರಾಜಕಾರಣಿಗಳು, ಅವರ ಪುಂಡ ಹಿಂಬಾಲಕರು, ಭ್ರಷ್ಟ ಅಧಿಕಾರಿಗಳು ಮತ್ತು ಪುಢಾರಿಗಳು ...ಮಾನ್ಸರ್ ಅವರನ್ನು ವರ್ಗಾಯಿಸಿ' ಎಂದು ಗಂಟಲು ಹರಿಯುವಂತೆ ಕೂಗಾಡುತ್ತಿದ್ದಾರೆ, ರಸ್ತೆತಡೆ ...ಮಾಡಿದ್ದಾರೆ, ಊಟ ಬಿಟ್ಟು ಉಪವಾಸ ಕೂತಿದ್ದಾರೆ. ಹೇಗಾದರೂ ಮಾಡಿ ಅವರನ್ನು ಇಲ್ಲಿಂದ ಟ್ರಾನ್ಸ್‌ಫರ್ ...ಮಾಡಿಸಬೇಕೆಂದು ವಿಧಾನಸೌಧಕ್ಕೂ ಒಂದು ರೌಂಡ್ ಅಲೆದು ಬಂದಿದ್ದಾರೆ.

ಅವರ ಈ ಬೇಡಿಕೆಗೆ ಎರಡು ಮುಖ್ಯ ಕಾರಣಗಳಿವೆ. ಒಂದು ಮಾನ್ಸರ್ ಇಲ್ಲಿಯವರೆಗೂ ಕೈ-ಬಾಯಿ ...ಕೊಳ್ಳದೇ ದಕ್ಷತೆಯಿಂದ ಕೆಲಸ ಮಾಡಿರುವುದು. ಎರಡನೆಯದು ಅವರು ದಲಿತ ಸಮುದಾಯಕ್ಕೆ ...ದವರು ಎಂಬುದು.

ಇದು ಜಿಲ್ಲಾ ಉಸ್ತುವಾರಿ ಮಂತ್ರಿ, ಗೋವಿಂದ ಕಾರಜೋಳರಿಗೆ ಗೊತ್ತಿರಲಿ. ■

ಹುಬ್ಬಳ್ಳಿ ಚಿಪ್ಸ್

ಕರ್ನಾಟಕ ವಿಶ್ವವಿದ್ಯಾಲಯ

ಪ್ರೊ. ಪಾವಟೆಯದ್ದು ಮಾನವ ಶಾಸ್ತ್ರವೋ, ಮಂಗಶಾಸ್ತ್ರವೋ?

ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯ ಒಂದು ಕಾಲದಲ್ಲಿ ತನ್ನ ಉನ್ನತ ಧ್ಯೇಯ, ಪರಿಶ್ರಮ, ಬೋಧನೆ, ಅಧ್ಯಯನ, ಸಂಶೋಧನೆ ಮುಂತಾದವುಗಳಿಂದಾಗಿ ಇಡೀ ರಾಜ್ಯದಲ್ಲೇ ಹೆಸರುವಾಸಿಯಾಗಿತ್ತು. ಆದರೆ ಈಗ ಅದೇ ವಿವಿ ಎಂಥ ಅಧೋಗತಿಗೆ ಇಳಿದಿದೆ ಎಂದರೆ ಅದನ್ನು ಕರ್ನಾಟಕ ವಿಶ್ವವಿದ್ಯಾಲಯ ಎನ್ನುವುದರ ಬದಲಿಗೆ 'ಕರ್ನಾಟಕ ಕಪಿಗಳ ಆಲಯ' ಎಂದು ಮರುನಾಮಕರಣ ಮಾಡಿದರೇನೇ ಸರಿಯೆನಿಸುತ್ತದೆ.

ಮಾನವಂತ ಕುಟುಂಬಗಳ ಹುಡುಗಿಯರು ಇಲ್ಲಿ ಅಭ್ಯಾಸ ಮಾಡುವುದಕ್ಕೆ ಹಿಂದುಮುಂದು ನೋಡಬೇಕಾದ ಪರಿಸ್ಥಿತಿಯಿದೆ ಎಂದರೆ ಬಹಳಷ್ಟು ಜನರು ನಂಬಲಿಕ್ಕಿಲ್ಲ. ಆದರೂ ಇದು ನಂಬಲೇಬೇಕಿರುವ ಸತ್ಯ. ಹುಡುಗಿಯರಿಗೆ ಲೈಂಗಿಕ ಕಿರುಕುಳ ಎನ್ನುವುದು ಇಲ್ಲಿ ಸರ್ವೇಸಾಮಾನ್ಯವಾಗಿಬಿಟ್ಟಿದೆ. ಹುಡುಗಿಯರಿಗೆ ಈ ರೀತಿ ತೊಂದರೆ ಕೊಡುತ್ತಿರುವವರು ಸಹಪಾಠಿ ಹುಡುಗರಲ್ಲ, ಸಾಕ್ಷಾತ್ ಪ್ರಾಧ್ಯಾಪಕ-ಪ್ರೊಫೆಸರ್‌ಗಳೇ!


ಈ ಹಿಂದೆ ಈ ವಿವಿಯಲ್ಲಿ ನಡೆದ ಅದೆಷ್ಟೋ ಲೈಂಗಿಕ ಕಿರುಕುಳದ ಪ್ರಕರಣಗಳು ಹೊರಜಗತ್ತಿಗೆ ಗೊತ್ತಾದದ್ದು ತೀರಾ ವಿರಳ. ಏಕೆಂದರೆ ಅವುಗಳನ್ನು ಮುಚ್ಚಿಹಾಕುವಲ್ಲಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ಪ್ರವೀಣನಾಗಿಬಿಟ್ಟಿದೆ. ಈತನಕ ನಡೆದ ಎಲ್ಲಾ ಲೈಂಗಿಕ ಕಿರುಕುಳ ಪ್ರಕರಣಗಳನ್ನೇ ನೋಡಿ. ಅವು ಹೊರಬಿದ್ದ ತಕ್ಷಣ ಸ್ಥಳೀಯ ವಿಭಾಗೀಯ ಮುಖ್ಯಸ್ಥರನ್ನು ತನಿಖೆಗಾಗಿ ನೇಮಿಸಲಾಗುತ್ತದೆ. ಅವರು ವಿಶ್ವವಿದ್ಯಾಲಯದ ಮಾನ-ಮರ್ಯಾದೆ ಬೀದಿಯಲ್ಲಿ ಹರಾಜಾಗುವುದು ಬೇಡ ಅಂತ ಕಿರುಕುಳಕ್ಕೊಳಗಾದ ಬಲಿಪಶುಗಳನ್ನೇ ಮನವೊಲಿಸುವ ಮೂಲಕವೋ, ಬೆದರಿಸುವ ಮೂಲಕವೋ ಮುಚ್ಚಿ ಹಾಕಿಬಿಡುತ್ತಾರೆ.

ಈಗ ಇಂತಹುದೇ ಮತ್ತೊಂದು ಪ್ರಕರಣ ನಡೆದಿದೆ. ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಪ್ರೊಫೆಸರ್ ಪಾವಟೆ ಇದರ ಖಳನಾಯಕ. ಈ ವಿಭಾಗದಲ್ಲಿ ಓದುತ್ತಿರುವ ಏಕೈಕ ವಿದ್ಯಾರ್ಥಿನಿಯೇ ಇದರ ಬಲಿಪಶು.

ಮಾನವಶಾಸ್ತ್ರ ಸಾಮಾನ್ಯವಾಗಿ ಮನುಷ್ಯನ ಅಂಗಾಂಗಗಳ ಕುರಿತಂತೆಯೇ ಅಧ್ಯಯನ ಮಾಡುತ್ತದೆ. ಕರ್ನಾಟಕ ವಿಶ್ವವಿದ್ಯಾಲಯ ಸಿದ್ಧಪಡಿಸಿದ ಪಠ್ಯದಲ್ಲೂ ಇದರ ಕುರಿತೇ ಪಾಠಗಳಿವೆ. ಒಬ್ಬ ಬೋಧಕನಾಗಿ ಪಾವಟೆ ಅವುಗಳನ್ನು ಬೋಧಿಸಿದ್ದರೆ ಯಾರೂ ತಕರಾರು ಎತ್ತುತ್ತಿರಲಿಲ್ಲ. ಆದರೆ ಆತ ಹಾರ್ಮೋನು, ಮನುಷ್ಯನ ಗುಪ್ತಾಂಗಗಳು ಮುಂತಾದ ವಿಷಯಗಳ ಬಗ್ಗೆ ಬೋಧಿಸುವ ನೆಪದಲ್ಲಿ ವಿದ್ಯಾರ್ಥಿನಿಗೆ ಲೈಂಗಿಕವಾಗಿ, ಮಾನಸಿಕವಾಗಿ ಕಿರುಕುಳ ಕೊಡುತ್ತಿದ್ದಾನೆ. ಹಾಲಿವುಡ್ ನಟಿಯರ ಬೆತ್ತಲೆ ಚಿತ್ರಗಳನ್ನಿಟ್ಟುಕೊಂಡು ಬಹಳ ಅಸಹ್ಯವಾಗಿ ಹೆಣ್ಣಿನ ಅಂಗಗಳನ್ನು ವರ್ಣಿಸುತ್ತಾನೆ. ಎಷ್ಟರಮಟ್ಟಿಗೆ ಎಂದರೆ, ಖುದ್ದು ವಿದ್ಯಾರ್ಥಿಯೇ ಇದಕ್ಕೆಲ್ಲಾ ರೋಸಿಹೋಗಿ "ನಾನು ಕಲಿಯಲು ಬಂದಿದ್ದು ಮಾನವಶಾಸ್ತ್ರವೇ ಹೊರತು ವಾತ್ಸಾಯನನ ಕಾಮಸೂತ್ರವನ್ನಲ್ಲ" ಎಂದು ವಿಭಾಗದ ಮುಖ್ಯಸ್ಥರಿಗೆ ದೂರು ಕೊಟ್ಟಿದ್ದಾಳೆ.


ಇದು ಕುಲಸಚಿವರಿಗೂ ಗೊತ್ತಿದೆ. ಆದರೆ ಅವರು "ವಿದ್ಯಾರ್ಥಿನಿ ಲಿಖಿತ ದೂರು ಕೊಟ್ಟಿಲ್ಲ" ಎಂದು ಹಾರಿಕೆ ಉತ್ತರ ಕೊಡುವ ಮೂಲಕ ಜಾಣಕುರುಡನ್ನು ಪ್ರದರ್ಶಿಸುತ್ತಿದ್ದಾರೆ. ಇನ್ನು ಪಾವಟೆಯಂತೂ "ಮಾನವಶಾಸ್ತ್ರದ ಪಠ್ಯದಲ್ಲಿ ಮನುಷ್ಯರ ಗುಪ್ತಾಂಗಗಳ ಬಗ್ಗೆ ಇರುವ ಭಾಗಗಳನ್ನು ತೆಗೆಸಿಬಿಡಿ, ಆವಾಗ ನಾನು ನಿಲ್ಲಿಸುತ್ತೇನೆ" ಎಂದು ಬಂಡ ಉತ್ತರ ನೀಡುತ್ತಾನೆ.

ಕರ್ನಾಟಕ ವಿಶ್ವವಿದ್ಯಾಲಯ ಎತ್ತ ಸಾಗುತ್ತಿದೆ?



ಇದೇ ಮಾತನ್ನು ಮುಸ್ಲಿಮರು ಆಡಿದ್ದರೆ!?

ಈಗ ಎಲ್ಲೆಂದರಲ್ಲಿ ಬಾಂಬ್ ಸ್ಫೋಟ ನಡೆಯುತ್ತಿರುವುದು, ಅಮಾಯಕ ಜನ ಸಾಯುತ್ತಿರುವುದು ಎಲ್ಲರಲ್ಲೂ ಸಹಜವಾಗಿ ಆತಂಕ ಮೂಡಿಸಿದೆ. ಈಗ ಇನ್ನಷ್ಟು ಬಾಂಬ್‌ಗಳು ಸುರಿಯುವ, ಇನ್ನಷ್ಟು ಹೆಣಗಳು ಉರುಳುವ ದಿನಗಳೂ ದೂರವಿಲ್ಲ. ಏಕೆಂದರೆ ಈಗ ಕೇವಲ ಇಸ್ಲಾಮಿಕ್ ಸಂಘಟನೆಗಳು ಮಾತ್ರವಲ್ಲ, ಹಿಂದೂ ಸಂಘಟನೆಗಳೂ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿವೆ.


ಪ್ರಮೋದ್ ಮುತಾಲಿಕ್

ಕರ್ನಾಟಕದ ವಿಚಾರಕ್ಕೆ ಬರುವುದಾದರೆ, ಹಿಂದೂ ಲಾಡೆನ್ ಪ್ರಮೋದ್ ಮುತಾಲಿಕ್ ಎಂಬ ಉಗ್ರ ಭಯೋತ್ಪಾದಕ ಹಿಂದೂಗಳನ್ನು ಇಸ್ಲಾಮಿಕ್ ಭಯೋತ್ಪಾದನೆಯಿಂದ ರಕ್ಷಿಸುವುದಕ್ಕೆ ತನ್ನದೇ ಸೈನ್ಯ ಕಟ್ಟುತ್ತಿದ್ದಾನಂತೆ. ಮೊನ್ನೆ ಆಗಸ್ಟ್ ಹತ್ತೊಂಬತ್ತರಂದು ಹುಬ್ಬಳ್ಳಿಯಲ್ಲಿ ಆತ ಬಹಿರಂಗವಾಗಿ ಹೇಳಿದ್ದಾನೆ. ಆತನ ಮಾತುಗಳನ್ನು ಇಲ್ಲಿ ಕೊಡಲಾಗಿದೆ:


"ಜಿಹಾದ್ ಹೆಸರಿನಲ್ಲಿ ಎಲ್ಲೆಂದರಲ್ಲಿ ಬಾಂಬ್ ಸ್ಫೋಟಿಸುತ್ತಾ ಹಿಂದೂಗಳನ್ನು ಕೊಲ್ಲಲಾಗುತ್ತಿದೆ. ಇಸ್ಲಾಮಿಕ್ ಭಯೋತ್ಪಾದಕರು ಕರ್ನಾಟಕವನ್ನು ಕಾರಸ್ಥಾನ ಮಾಡಿಕೊಂಡಿದ್ದಾರೆ. ಇದು ಕರ್ನಾಟಕದ ಪೋಲೀಸರಿಗೆ ಗೊತ್ತಿದ್ದರೂ ಅವರೂ ಸರ್ಕಾರಿ ಸಂಬಳ ತಿಂದು ಕತ್ತೆ ಕಾಯುತ್ತಿದ್ದಾರೆ. ಅವರೆಲ್ಲಾ ಮುಸ್ಲಿಮರ ಬಾಲಂಗೋಚಿಗಳಾಗಿ ಇಸ್ಲಾಮಿಕ್ ಭಯೋತ್ಪಾದನೆಗೆ ಬೆಂಬಲ ಕೊಡುತ್ತಿದ್ದಾರೆ. ಇಂಥ ಪೋಲೀಸರಿಂದ ಹಿಂದೂಗಳ ರಕ್ಷಣೆ ಸಾಧ್ಯವಿಲ್ಲ. ಹಾಗಾಗಿ ನಾನು ಅಖಂಡ ಕರ್ನಾಟಕದ ಹಿಂದೂಗಳ ರಕ್ಷಣೆಗಾಗಿ ಶ್ರೀರಾಮ ಸೇನೆಯ ನೇತೃತ್ವದಲ್ಲಿ ನಮ್ಮದೇ ಆದ ಸ್ವಂತ ಹಿಂದೂ ಸೇನೆಯನ್ನು ಕಟ್ಟುತ್ತಿದ್ದೇನೆ. ಈಗಾಗಲೇ 700 ಯುವ ಹಿಂದೂಗಳು ಇದರಲ್ಲಿ ಸೇರ್ಪಡೆಗೊಂಡಿದ್ದಾರೆ. ಅವರೆಲ್ಲರಿಗೂ ಹುಬ್ಬಳ್ಳಿಯಲ್ಲಿಯೇ ಬಾಂಬ್ ತಯಾರಿಸುವ ಬಗ್ಗೆ, ಆತ್ಮಾಹುತಿ ದಾಳಿಗಳನ್ನು ನಡೆಸುವ ಬಗ್ಗೆ, ಮಾನವ ಬಾಂಬ್ ರೂಪಿಸುವ ಬಗ್ಗೆ, ಶಸ್ತ್ರಾಸ್ತ್ರಗಳನ್ನು ಬಳಸುವ ಬಗ್ಗೆ, ಇನ್ನೂ ಮುಂತಾದವುಗಳ ಬಗ್ಗೆ ತರಬೇತಿ ನೀಡುತ್ತಿದ್ದೇನೆ."

ಈಗಹೇಳಿ, ಇದೇ ಮಾತುಗಳನ್ನು - ಬೇಡ, ಇದರಲ್ಲಿ ಒಂದೇ ಒಂದು ವಾಕ್ಯವನ್ನು - ಮುಸ್ಲಿಮ್ ವ್ಯಕ್ತಿಯೊಬ್ಬ ಹೇಳಿದ್ದರೆ ಅವನ ಗತಿ ಏನಾಗುತ್ತಿತ್ತು? ಈಗಾಗಲೇ ಎಲ್ಲೇ ಒಂದು ಸಣ್ಣಪುಟ್ಟ ಪಟಾಕಿ ಸಿಡಿದರೂ ಸಾಕು ಯಾವುದೇ ತನಿಖೆ ನಡೆಸದೇ ಅದನ್ನು ಮುಸ್ಲಿಮರೇ ಮಾಡಿದ್ದಾರೆಂಬ ತೀರ್ಮಾನಕ್ಕೆ ಬರುವ ನಮ್ಮ ಪೋಲೀಸರು ಮುಸ್ಲಿಮ್ ವ್ಯಕ್ತಿಯೊಬ್ಬ ಇಂತಹ ಮಾತುಗಳನ್ನಾಡಿದ್ದರೆ ಬಿಡುತ್ತಿದ್ದರೆ? ಮುತಾಲಿಕ್‌ನಂತಹ ಭಯೋತ್ಪಾದಕರು ಸಮಾಜದಲ್ಲಿ ಕೋಮುಗಲಭೆ ಎಬ್ಬಿಸುವುದಕ್ಕೆ ಏನೆಲ್ಲಾ ಬೇಕೋ ಅದನ್ನು ಮಾಡುತ್ತಿದ್ದಾರೆ.

ಬೆಂಗಳೂರಿನ ಮಸೀದಿಗಳಲ್ಲಿ ಹಂದಿ ತಲೆ ಇಟ್ಟು ಹಿಂದೂ-ಮುಸ್ಲಿಮರ ನಡುವೆ ಗಲಾಟೆಯೆಬ್ಬಿಸಲು ಇದೇ ಮುತಾಲಿಕ್ ಶಿಷ್ಯಂದಿರು ಪ್ರಯತ್ನಿಸಿದ್ದು ಪೋಲೀಸರ ತನಿಖೆಯಿಂದ ಗೊತ್ತಾಗಿದೆ. ಆದರೂ ಮುತಾಲಿಕ್‌ನನ್ನು ಪೋಲೀಸರು ಇಲ್ಲಿಯತನಕ ಮುಟ್ಟಿಲ್ಲ. ಈಗ ಬಹಿರಂಗವಾಗಿ ಬಾಂಬ್ ತಯಾರಿಸುವುದಾಗಿ, ಮಾನವ ಬಾಂಬ್ ರೂಪಿಸುವುದಾಗಿ, ಶಸ್ತ್ರಾಸ್ತ್ರ ತರಬೇತಿ ಕೊಡುವುದಾಗಿ, ಗಲಾಟೆ ಎಬ್ಬಿಸುವುದಾಗಿ ಬೊಗಳಿದರೂ ಅವನನ್ನು ಮುಟ್ಟುವ ತಾಕತ್ತಿಲ್ಲ.

ಸಣ್ಣಪುಟ್ಟ ಪಿಕ್‌ಪಾಕೆಟರ್‌ಗಳನ್ನು ಹಿಡಿದು ಪೇಪರ್‌ಗಳಿಗೆ ಫೋಜು ಕೊಟ್ಟು ತಮ್ಮ ಶೌರ್ಯ ಪ್ರದರ್ಶಿಸುವ ಪೋಲೀಸರಿಗೆ ಮುತಾಲಿಕ್‌ನಂತಹ ಭಯೋತ್ಪಾದಕರನ್ನು ಮಟ್ಟಹಾಕುವ ಧೈರ್ಯ ಇದೆಯೇ?

■ ಹುಬ್ಬಳ್ಳಿಯಾಂವ



ಅಭ್ಯಾಸದಂತೆ ಸಂಜೀವರಾವ್ ಬರೀ ಹೊಟ್ಟೆಯಲ್ಲೆ ಕಾಫಿ ಗುಟುಕಿಸುತ್ತಾ ದಿನಪತ್ರಿಕೆಯನ್ನು ತಿರುವಾಕುತ್ತಿದ್ದನು. ಸಿಟಿ ಎಡಿಷನ್‌ನಲ್ಲಿ ಪ್ರಕಟಿಸಿದ್ದ ಒಂದು ಜಾಹೀರಾತನ್ನು ನೋಡಿ ಅವನು ಬೆಚ್ಚಿಬಿದ್ದನು. ದಿನಾ ಟಿವಿಯಲ್ಲೂ, ದಿನಪತ್ರಿಕೆಯಲ್ಲೂ ಅನೇಕ ಘೋರಗಳನ್ನು ನೋಡಿ, ಓದಿ ರೋಸೋಗಿದ್ದ ಅವನು ಕೂಡ ಆ ಜಾಹೀರಾತಿನಿಂದ ಬೆದರಿ ಹೋದನು.

ಕಣ್ಣುಜ್ಜಿಕೊಂಡು ಆ ಜಾಹೀರಾತಿನ ಕಡೆ ಮತ್ತೊಂದು ಸಾರಿ ನೋಡಿದನು. ಅನುಮಾನವಿಲ್ಲ, ಅದರಲ್ಲಿರುವುದು ತನ್ನ ಫೋಟೋನೆ! ಆ ಜಾಹೀರಾತು ಕೊಟ್ಟಿರುವುದು ತನ್ನ ಹೆಂಡತಿ ನಿರ್ಮಲಳೇ!

'ಮೇಲಿನ ಫೋಟೋದಲ್ಲಿರುವ ನನ್ನ ಗಂಡ ಸಂಜೀವರಾವ್, ಕಳೆದ ಎರಡು ವರ್ಷಗಳಿಂದ ಕಾಣಿಸುತ್ತಿಲ್ಲ. ಮನುಷ್ಯನನ್ನು ಮತ್ತೊಬ್ಬ ಮನುಷ್ಯ ದೋಚಿಕೊಳ್ಳುವ ದುಷ್ಟ ಸಮಾಜವನ್ನು ಬದಲಿಸುವ ಕೆಲಸದಲ್ಲಿ ತಲೆ ಮುಳುಗಿಸಿಕೊಂಡಿದ್ದಾರೆ. ಸ್ತ್ರೀ-ಪುರುಷರ ಪ್ರೇಮಾನುರಾಗವನ್ನೇ ಆಧರಿಸಿ ಮದುವೆಗಳು ನಡೆಯಬೇಕೆಂದು ಆಶಿಸುವ ಮನುಷ್ಯ, ಎಲ್ಲ ರೀತಿಯ ಅಸಮಾನತೆಗಳು ಪ್ರಪಂಚದಿಂದ ಶಾಶ್ವತವಾಗಿ ತೊಲಗಬೇಕೆಂದು ಕ್ಷಣಕ್ಷಣವೂ ಶ್ರಮಿಸುವ ಮನಸುಳ್ಳ ಮನುಷ್ಯ. ಆತನ ಸುಳಿವು ಸಿಕ್ಕರೆ ಈ ಕೆಳಗಿನ ನಂಬರ್‌ಗೆ ಫೋನ್ ಮಾಡಬೇಕೆಂದು ಪ್ರಾರ್ಥನೆ-ನಿರ್ಮಲ'. ಅದೇ ಜಾಹೀರಾತು!

"ನಿರ್ಮಲಾ... ನಿರ್ಮಲಾ!" ಅಂತ ಸಂಜೀವರಾವ್ ಕಿರುಚುತ್ತಾ ಬಾಲ್ಕನಿಯಿಂದ ಮನೆಯೊಳಕ್ಕೆ ಬಂದನು.

ನಿರ್ಮಲ ಈಜಿಛೇರಿನಲ್ಲಿ ಕುಳಿತುಕೊಂಡು, ಪುಸ್ತಕವನ್ನು ಓದುತ್ತಾ ಪ್ರಶಾಂತವಾಗಿ ಕಂಡಳು. ಆತ್ಮಗೌರವ ಕಾರಣದಿಂದ ಅವಳಲ್ಲಿರುವ ಉದಾತ್ತಗುಣವನ್ನು ತನಗಿಂತ ಅವಳು ಹೆಚ್ಚು ಸಂಬಳ ತೆಗೆದುಕೊಳ್ಳುತ್ತೇನೆಂಬ ಅಹಂಕಾರವೆಂದು ಆತ ಅಪಾರ್ಥ ಮಾಡಿಕೊಂಡಿದ್ದನು.

ಸಂಜೀವರಾವ್ ಸಿಟಿ ಎಡಿಷನ್‌ನನ್ನು ಅವಳ ಮೇಲೆ ಎಸೆದು "ದಿನದಿನಕ್ಕೆ ನಿನ್ನ ಹುಚ್ಚು ಹೆಚ್ಚಾಗುತ್ತಿದೆ. ಏನಿದು ಜಾಹೀರಾತು?" ಅಂತ ಅರಚಿದನು. ನಿರ್ಮಲ ತೀಕ್ಷ್ಣವಾಗಿ ಆ ಜಾಹೀರಾತನ್ನು ನೋಡಿ "ನನ್ನ ಬಾಳ ಸಂಗಾತಿ ಕಾಣೆಯಾಗಿದ್ದರೆ, ನಾನಲ್ಲದೆ ಇನ್ನಾರು ಕಾಳಜಿ ವಹಿಸುತ್ತಾರೆ?" ಅಂದಳು ಮುಗ್ಧಳಂತೆ.

"ಇಲ್ಲಿವರೆಗೂ ನಿನಗೆ ಅಹಂಕಾರ ಮಾತ್ರವೆ ಜಾಸ್ತಿ ಎಂದು ಅಂದುಕೊಂಡಿದ್ದೆ. ನಿನಗೆ ಹುಚ್ಚು ಕೂಡ ಜಾಸ್ತಿಯಾಗಿದೆಯೆಂದು ಈಗ ಅರ್ಥವಾಗುತ್ತಿದೆ. ಗಂಡ ಗುಂಡುಕಲ್ಲಿನಂತೆ ನಿನ್ನ ಮುಂದೆಯೇ ಇರುವಾಗ ಆತ ಕಾಣೆಯಾಗಿದ್ದಾನೆನ್ನುವುದೇನು?" ಅಂದನು ಬೇಸರದಿಂದ.

"ನೀವು ನನ್ನ ಗಂಡ ಅಲ್ಲ, ನನ್ನ ಗಂಡನ ರೂಪದಲ್ಲಿರುವ ಮಾಯಾವಿ!" ಅಂದಳು ನಿರ್ಮಲ.

"ಈ ಮಧ್ಯೆ ನೀನೇನಾದರೂ ಪೌರಾಣಿಕ ನಾಟಕಗಳನ್ನು ನೋಡಿದ್ದೀಯಾ? ನೀನು ಸತಿ ಶಿರೋಮಣಿನಾ?? ನಾನು ಮಾಯಾ ಜಲಂದರನಾ???.... ನನಗೂ ಕೂಡ ತಾಳ್ಮೆ ಸತ್ತೋಗಿದೆ. ನಾಳೆನೇ ನಿಮ್ಮಣ್ಣನನ್ನು ಇಲ್ಲಿಗೆ ಕರೆಸಿ ಎರಡರಲ್ಲೊಂದು ತೀರ್ಮಾನಿಸುತ್ತೇನೆ..." ಅಂದನು.

"ಇದು ನಮ್ಮಿಬ್ಬರ ಸಮಸ್ಯೆ. ಇದರಲ್ಲಿ ಮಧ್ಯವರ್ತಿಗಳ ಪ್ರಮೇಯವೇಕೆ? ಬೇಕೆಂದರೆ ನಿಮ್ಮ ಪರವಾಗಿ ವಕಾಲತ್ತು ವಹಿಸಲು ನೀವ್ಯಾರನ್ನಾದರೂ ಇಟ್ಟುಕೊಳ್ಳಿ!" ಅಂದಳು ನಿರ್ಮಲ.

ಅವಳ ಮಾತುಗಳು ಅವನ ಕೋಪವನ್ನು ಮತ್ತಷ್ಟು ಹೆಚ್ಚಿಸಿದವು.

* * * * * *

ಆವೇಶವನ್ನು ಅದುಮಿಟ್ಟುಕೊಳ್ಳಲಾಗದ್ದರಿಂದ ಸಂಜೀವರಾವನ ಕೆನ್ನೆಗಳು ಕೆಂಪೇರಿದ್ದವು. ನಿರ್ಮಲ ಮಾತ್ರ ಪ್ರಶಾಂತವಾಗಿ ಹಾಲ್‌ನಲ್ಲಿ ಒಂದು ಕುರ್ಚಿಯಲ್ಲಿ ಕುಳಿತುಕೊಂಡಿದ್ದಳು.

ಅಲ್ಲಿನ ವಾತಾವರಣದಲ್ಲಿನ ಉದ್ರಿಕ್ತತೆಯನ್ನು ಹೇಗೆ ಸಡಿಲಿಸಬೇಕೆಂದು ತಿಳಿಯದೆ, ನಿರ್ಮಲಳ ಅಣ್ಣ ಮೋಹನ್ ಗೊಂದಲಕ್ಕೀಡಾದನು. ಎಷ್ಟಾದರೂ ಸಂಜೀವರಾವ್, ಡಿಗ್ರಿವರೆಗೂ ತನ್ನ ಕ್ಲಾಸ್‌ಮೇಟ್ ಆದ್ದರಿಂದ ಮೊದಲು ಈ ಕಡೆಯಿಂದಲೇ ಮುಗಿಸಿಕೊಂಡು ಬಂದರೆ ಚೆನ್ನಾಗಿರುತ್ತದೆ ಎಂದೆನಿಸಿತು ಆತನಿಗೆ.

"ಸಂಜೀವ್! ನಿರ್ಮಲಳ ವಿಷಯ ನನಗಿಂತ ನಿನಗೇ ಚೆನ್ನಾಗಿ ಗೊತ್ತು. ಅವಳೇನೋ ತಮಾಷೆಗೆ ಪೇಪರ್‌ಗೆ ಜಾಹೀರಾತು ಕೊಟ್ಟರೆ ಅದನ್ನು ನೀವಿಷ್ಟೊಂದು ಗಂಭೀರವಾಗಿ ತೆಗೆದುಕೊಂಡರೆ ಹೇಗೆ ಹೇಳಿ?....."

ನಿರ್ಮಲ ಮಧ್ಯ ಪ್ರವೇಶಿಸಿ "ಇಲ್ಲ ಅಣ್ಣಾ! ನಾನು ಗಂಭೀರವಾಗಿಯೇ ಆ ಜಾಹೀರಾತನ್ನು ಕೊಟ್ಟಿದ್ದೇನೆ. ನಾನು ಪ್ರೀತಿಸಿ ಮದುವೆಯಾದ ಸಂಜೀವ್ ಕಳೆದ ಎರಡು ವರ್ಷಗಳಿಂದ ಕಾಣೆಯಾಗಿದ್ದಾರೆ. ಆ ಸಂಜೀವ್ ಎಷ್ಟು ದೊಡ್ಡ ಮನುಷ್ಯ! ವಿರುದ್ಧ ಶಕ್ತಿಗಳ ನಡುವಿನ ಘರ್ಷಣೆ, ವಿಶ್ವ ಪರಿಣಾಮಕ್ಕೆ, ಜೀವ ಪರಿಣಾಮಕ್ಕೆ, ಸಮಾಜ ಪರಿಣಾಮಕ್ಕೆ ಹೇಗೆ ದಾರಿ ತೋರಿಸಿದೆಯೋ ಅದನ್ನು ಗತಿತಾರ್ಕಿಕವಾಗಿ ನನಗೆ ವಿವರಿಸಿದ ಸಮಾಜ ಶಾಸ್ತ್ರಜ್ಞ! ತನ್ನ ಕಾಲೇಜಿನ ವಿದ್ಯಾಭ್ಯಾಸವನ್ನು ಕೂಡ ಲೆಕ್ಕಿಸದೆ, ಗ್ರಾಮಗಳಿಗೂ ತಯಾರಾಗಿರುವ ಆದರ್ಶ ವಿದ್ಯಾರ್ಥಿ!! ಅಲ್ಲಿವರೆಗೂ ಉಪಯೋಗವಿಲ್ಲದ ಸಿನಿಮಾಗಳನ್ನು ನೋಡುತ್ತಾ, ಕೆಲಸಕ್ಕೆ ಬಾರದ ಕಾದಂಬರಿಗಳನ್ನು ಓದುತ್ತಿದ್ದ ನನಗೆ ಸಾಮಾಜಿಕ ಚಲನಾ ಸೂತ್ರಗಳನ್ನು ಶಾಸ್ತ್ರೀಯವಾಗಿ ವಿವರಿಸುವ ಮಾರ್ಕ್ಸಿಸಂ ಎನ್ನುವ ಮೂರನೇ ಕಣ್ಣನ್ನು ಪ್ರಸಾದಿಸಿದ ಗುರುವೇ ಸಂಜೀವ್!...." ಅಂದಳು.

ಅವಳ ಆಲೋಚನೆಗೆ ತಡೆಯೊಡ್ಡಲು "ಮತ್ತೆ ಎಲ್ಲ ತಿಳಿದ ವ್ಯಕ್ತಿಯೆ ಈಗ ಹೀಗೆ ಬದಲಾಗಿದ್ದಾರೆಂದರೆ, ಅದರ ಹಿಂದೆ ಸರಿಯಾದ ಕಾರಣವೆ ಇರಬಹುದಲ್ಲವೆ!" ಅಂದನು ಮೋಹನ್.

"ಅಣ್ಣಾ! ಅಂತಹ ಪ್ರಗತಿಶೀಲ ಬುದ್ಧಿಜೀವಿಯನ್ನು, ಈ ರಿಯಲ್ ಎಸ್ಟೇಟ್ ಬ್ರೋಕರ್‌ಗೆ ಹೋಲಿಸುವುದರಲ್ಲಿ ಏನಾದರೂ ನ್ಯಾಯವಿದೆಯಾ? ಬೆಳಿಗ್ಗೆ ಎದ್ದರೆ, ಕಾರಿನಲ್ಲಿ ತೆರಳಿ, ಹಣವುಳ್ಳ ಪಾರ್ಟಿಗಳನ್ನು ಹಿಡಿದು, ಅವರಿಗೆ ಸ್ಥಳಗಳನ್ನು ತೋರಿಸಿ, ಅದರಲ್ಲಿನ ಕಮಿಷನ್‌ಗಾಗಿ ಅಂಗಲಾಚುವವನನ್ನು ಹಿಡಿದುಕೊಂಡು ನನ್ನ ಗಂಡ ಸಂಜೀವ್ ಅಂತ ಹೇಗೆ ಹೇಳುತ್ತಿದ್ದೀಯಾ?" ಅಂದಳು.

ಆ ಮಾತುಗಳಿಂದ ಸಂಜೀವರಾವ್‌ಗೆ ಮತ್ತಷ್ಟು ಬಿ.ಪಿ. ಜಾಸ್ತಿಯಾಯಿತು. "ಮೋಹನ್... ನೋಡಿದೆಯಾ, ನಿನ್ನ ತಂಗಿಯ ಅಹಂಕಾರ! ಲೋಕಾರೂಢಿಯಂತೆ ನಾವು ಬದಲಾಗಬೇಕಲ್ಲವಾ!! ಸಮಾಜ.... ಮರ ಬಂಡೆ ಎನ್ನುತ್ತಾ ನಾವು ಹಳೇ ಹುಣಸೆಲುಪ್ಪಿನಕಾಯಿಯ

ಕತೆ

ತೆಲುಗು ಮೂಲ: ಯಾಳ್ಳ ಅಚ್ಚುತರಾಮಯ್ಯ

ಕನ್ನಡಕ್ಕೆ: ನಿರಂಜನ

ಮಾತುಗಳನ್ನಾಡುತ್ತಿದ್ದರೆ ಈ ದಿನಗಳಲ್ಲಿ ನಡೆಯುವುದಿಲ್ಲ. ಬದಲಾದ ವಾತಾವರಣದ ಪರಿಸ್ಥಿತಿಗಳಿಗೆ ಅನುಗುಣವಾಗಿ ಬದಲಾಗದಿರುವುದಕ್ಕಲ್ಲವೆ ಅಂತಹ ದೊಡ್ಡ ಜೀವಿಗಳು-ಡೈನೋಸಾರಸ್‌ಗಳು ನಶಿಸಿಹೋಗಿರುವುದು! ನಾವ್ಯಾವ ಲೆಕ್ಕ?" ಅಂದನು.

"ಪರಿಸರದಲ್ಲಿನ ಬದಲಾವಣೆಗೆ ಅನುಗುಣವಾಗಿ ಬಣ್ಣ ಬದಲಾಯಿಸಿಕೊಂಡು ಊಸರವಳ್ಳಿ ರೀತಿ

"ಭಾವೈಕ್ಯತೆಯುಳ್ಳ ಸ್ತ್ರೀ-ಪುರುಷರ ಮಧ್ಯೆ ಚಿಗುರಿದ ಸ್ನೇಹ, ಪ್ರೇಮಗಳ ಸಹಜ ಪರಿಣಾಮವೇ ಮಕ್ಕಳು. ಯಾವಾಗ ಆತನು ಪೂರ್ತಿಯಾಗಿ ಹಣದ ಮನುಷ್ಯನಾಗಿ ಬದಲಾಗಿ ಹೋದನೊ, ಅಂದಿನಿಂದ ಆತ ನನಗೆ ಪರ ಮನುಷ್ಯನಾಗಿಯೇ ಅನ್ನಿಸುತ್ತಿದ್ದಾನೆ. ಆ ದಿನದಿಂದ ನಾನು ಮಾನಸಿಕವಾಗಿಯೂ, ಶಾರೀರಿಕವಾಗಿಯೂ ಆತನಿಂದ ದೂರವೇ ಇದ್ದೇನೆ. ಈಗ ಈತನಿಂದ ಮಕ್ಕಳನ್ನು ಪಡೆದರೆ ನಾನು ವ್ಯಭಿಚಾರಿಯಾದಂತೆಯೇ! "ಈತನ ಆಲೋಚನೆಗಳು ಸರಿಯಿಲ್ಲವೆಂದು ತಿಳಿಸಿ ಹೇಳುವಲ್ಲಿ ನಾನು ಮಾಡಿದ ಪ್ರಯತ್ನಗಳಲ್ಲಿ ವಿಫಲವಾಗಿದ್ದೇನೆ. ನಮ್ಮ ಆಲೋಚನೆಗಳ ನಡುವೆ ಇಷ್ಟು ಅಂತರ ಇದ್ದಾಗ, ನಮ್ಮ ಭವಿಷ್ಯತ್ತಿನಲ್ಲಿ ಕೂಡಿ ಬಾಳುತ್ತೇವೆಂಬ ನಂಬಿಕೆ ನನಗಿಲ್ಲ. ಹಾಗಿದ್ದಾಗ ಈ ಪ್ರೇಮವಿಲ್ಲದ ಪ್ರಪಂಚಕ್ಕೆ ಮಕ್ಕಳನ್ನು ಆಹ್ವಾನಿಸುವುದು ಅಪರಾಧವೆಂದು ನನಗೆ ಅನಿಸುತ್ತಿದೆ...."

ಬದುಕುವುದಕ್ಕಿಂತ, ಡೈನೋಸಾರಸ್ ತರಹ ನಶಿಸಿ ಹೋಗುವುದೇ ವಾಸಿ ಅಲ್ಲವೆ!" ಅಂದಳು ನಿರ್ಮಲ.

ಇವಳ ಹತ್ತಿರ ವಾದಿಸಿ ಲಾಭ ಇಲ್ಲವೆಂದುಕೊಂಡು ಸಂಜೀವರಾವ್ ಮೋಹನ್‌ಗೆ ಮೊರೆಯಿಡಲು ಪ್ರಾರಂಭಿಸಿದನು. "ರಾತ್ರಿ ಹಗಲೆನ್ನದೆ ನಾನು ಕಷ್ಟಪಟ್ಟು ಸಂಪಾದಿಸುವುದು ನನ್ನೊಬ್ಬನಿಗೋಸ್ಕರನಾ? ತಾನು, ತನಗೆ ಹುಟ್ಟುವ ಮಕ್ಕಳು ಅನುಭವಿಸುವು ದಿಲ್ಲವೆ? ಬದಲಾದ ಸಮಾಜದಲ್ಲಿ ಹಣವಿಲ್ಲದಿದ್ದರೆ ನಮ್ಮನ್ನು ಮನುಷ್ಯರನ್ನಾಗಿ ಗುರುತಿಸುತ್ತಾರಾ?" ಅಂದನು.

ನಿರ್ಮಲ ಅಣ್ಣನ ಕಡೆ ತಿರುಗಿ "ಸಮಾಜ ಆತನೊಬ್ಬನಿಗೇ ಬದಲಾಗಿದೆಯಾ? ಅಣ್ಣಾ-ಮತ್ತೆ ನೀನ್ಯಾಕೆ ಬದಲಾಗಿಲ್ಲ? ಬದಲಾಯಿಸಬೇಕಿರುವುದು ಸಮಾಜವನ್ನಲ್ಲವೆ? ಸಂಜೀವ್ ಆಗ ನನಗೆ ಕಲಿಸಿದ್ದು ಅದೇ ಅಲ್ಲವಾ! ಸಮಾಜವನ್ನು ಬದಲಾಯಿಸುವ ಕೆಲಸವನ್ನು ಗಾಳಿಗೆ ತೂರಿ, ದಗಲ್ಬಾಜಿ ಸಮಾಜಕ್ಕೆ ಅನುಗುಣವಾಗಿ ನಾವೇ ಬದಲಾಗಿ ಹೋದರೆ ಅದನ್ನು ಏನೆನ್ನಬೇಕು? ಈತನು ರಿಯಲ್ಟರ್ ಆಗಿ ಬದಲಾದ ನಂತರ ಸಂಪಾದಿಸಿದ ಏನನ್ನೂ ನಾನಿಲ್ಲೀವರೆಗೂ ಉಪಯೋಗಿಸಿಲ್ಲ. ಕೊನೆಗೆ ಕಾರನ್ನೂ ಸಹ! 'ಮುಂದಿರುವ ಮನುಷ್ಯನಿಗೆ ತಿನ್ನಲು ರೊಟ್ಟಿಯೂ ಇಲ್ಲದಿದ್ದಾಗ, ಕೇಕು ತಿನ್ನುವವನು ಅಪರಾಧಿ' ಅನ್ನುವ ಲೆನಿನ್ ಸೂಕ್ತಿಯನ್ನು ಪದೇಪದೇ ನೆನಪು ಮಾಡುತ್ತಿದ್ದ ಆ ಸಂಜೀವ್, ಹಸಿವಿನ ಕೂಗಿನಲ್ಲೆ ಮುಳುಗಿರುವ ಈ ಲೋಕದಲ್ಲಿ ಅತಿ ಬೆಲೆಬಾಳುವ ಕಾರಿನಲ್ಲಿ ಶಿಕಾರಿ ಮಾಡುತ್ತಾನೆಂದು ನಾನಂದುಕೊಂಡಿರಲಿಲ್ಲ" ಅಂದಳು.

ಸಂಜೀವರಾವ್‌ಗೆ ಆಕೆಯ ಪ್ರತಿ ಮಾತು ಗುರಿಯಿಟ್ಟು ಹೊಡೆದ ಗುಂಡುಗಳಂತೆ ತಗಲುತ್ತಿವೆ. "ಮೋಹನ್! ಅವಳ ಹತ್ತಿರ ವಾದಿಸುವ ತಾಳ್ಮೆ, ಅಗತ್ಯ ನನಗೆ ಇಲ್ಲ. ನಮಗೆ ಮದುವೆಯಾಗಿ ಐದು ವರ್ಷಗಳಾಗುತ್ತಿವೆ. ಇಲ್ಲಿತನಕ ಬಹಳ ನಿರ್ಲಕ್ಷ್ಯ ಮಾಡಿದ್ದೇವೆ, ಬೇಗನೆ ಮಕ್ಕಳನ್ನು ಪಡೆಯೋಣ ಅಂದ್ರೆ, ಬಲ್‌ಕುಲ್ ಬೇಡ ಅಂತಿದ್ದಾಳೆ ನಿನ್ನ ತಂಗಿ. ಮಕ್ಕಳನ್ನು ಪಡೆಯುವ ಉದ್ದೇಶ ತನಗಿಲ್ಲದಿದ್ದರೆ ಆ ವಿಷಯವನ್ನು ಮದುವೆಗೆ ಮುಂಚೆಯೇ ನನಗೆ ಹೇಳಬೇಕಿತ್ತು. ಆಗ ನನ್ನ

...ರ್ಮಾನವನ್ನು ಬದಲಾಯಿಸಿಕೊಳ್ಳುತ್ತಿದ್ದನೇನೋ! ಒಂದು ಹುಡುಗ, ...ತಾಗಿ ಮದುವೆಯಾಗಿದ್ದಾರೆಂದರೆ ಅವರು ತಪ್ಪದೆ ಮಕ್ಕಳನ್ನು ...ಡೆಯುತ್ತಾರೆಂದು ಸಹಜವಾಗಿಯೇ ನಂಬುತ್ತೇವೆ. ಆದರೆ ಈತ ಮದುವೆಯ ...ನಂತರ ತನ್ನ ತೀರ್ಮಾನವನ್ನು ಬದಲಾಯಿಸಿಕೊಳ್ಳುತ್ತಾನೆಂತ ಊಹಿಸಲೂ ...ಗಲಿಲ್ಲವಲ್ಲಾ!" ಅಂದನು.

ಈ ಸಾರಿ ನಿರ್ಮಲ ನಿಧಾನವಾಗಿ ಸಂಜೀವರಾವ್ ಕಡೆಗೇ ತಿರುಗಿ ...ಪ್ರಸ್ತುತ ಸಮಾಜದಲ್ಲಿ ಎಲ್ಲ ಅಸಹಜವಾಗಿಯೇ ನಡೆಯುತ್ತಿವೆಯಲ್ಲವೆ! ...ಗೆ ನಾನು ಸಂಜೀವನನ್ನು ಯಾಕೆ ಪ್ರೀತಿಸಿದೆನು? ಆತನ ಭಾವನೆಗಳನ್ನು ...ಚ್ಚಿಯಲ್ಲವೆ! ಆತನಿಗೆ ಹೀಗೆ ಕೀಳುಮಟ್ಟಕ್ಕೆ ಇಳಿಯುವ ಉದ್ದೇಶವಿದ್ದರೆ, ...ಮದುವೆಗೆ ಮುಂಚೆಯೆ ನನಗೆ ಹೇಳಬೇಕಿತ್ತು. ಆಗ ನಾನೇನು ತೀರ್ಮಾನ ...ಗೆದುಕೊಳ್ಳುತ್ತಿದ್ದೆನೊ? ಅಭ್ಯುದಯ ಭಾವನೆಗಳಿರುವ ಸ್ತ್ರೀ-ಪುರುಷರಿಬ್ಬರು ...ಮದುವೆ ಮಾಡಿಕೊಂಡಿದ್ದಾರೆಂದರೆ ಅದಕ್ಕಿಂತ ಉನ್ನತ ಭಾವನೆಗಳನ್ನು ...ಳೆಸಿಕೊಳ್ಳದೆ ಹೋದರೂ, ಅವೇ ಭಾವನೆಗಳಿಂದ ಮುನ್ನಡೆಯುತ್ತಾರೆಂದು ...ಹಜವಾಗಿಯೇ ನಂಬುತ್ತೇವೆ. ಆದರೆ ಈತ ಮದುವೆಯ ನಂತರ ಇಂತಹ ...ಧಃಪತನಗೊಳ್ಳುತ್ತಾನೆಂದು ಊಹಿಸಲೂ ಆಗಲಿಲ್ಲವಲ್ಲಾ!" ಅಂದಳು.

ಸಂಜೀವರಾವ್ ಕೋಪವನ್ನು ಬಲವಂತವಾಗಿ ಅದುಮಿಟ್ಟುಕೊಳ್ಳುತ್ತಾ ...ನೋಡಿದೆಯಾ ಮೋಹನ್.... ಮಾತಿಗೆ ಮಾತು ಕೊಡುತ್ತಿದ್ದಾಳೆ. ಆ ...ಪೇಪರ್ ಜಾಹೀರಾತನ್ನು ಯಾವುದೋ ಕ್ರೂರ ಚೇಷ್ಟೆಯೆಂದು ಭಾವಿಸಿ ...ಟ್ಟು ಬಿಡು, ಆದರೆ ಕೂಡಲೇ ಮಕ್ಕಳನ್ನು ಪಡೆಯಲು ಒಪ್ಪಿಕೊಳ್ಳುತ್ತಾಳೊ ...ಲ್ಲವೋ ಎಂದು ಆಕೆ ಒಂದು ಮಾತಲ್ಲಿ ಹೇಳಲೇಳು" ಅಂದನು.

ನಿರ್ಮಲ ಪ್ರಶಾಂತವಾಗಿಯೆ "ಭಾವೈಕ್ಯತೆಯುಳ್ಳ ಸ್ತ್ರೀ-ಪುರುಷರ ಮಧ್ಯೆ ...ಗುರಿದ ಸ್ನೇಹ, ಪ್ರೇಮಗಳ ಸಹಜ ಪರಿಣಾಮವೇ ಮಕ್ಕಳು. ಯಾವಾಗ ...ತನು ಪೂರ್ತಿಯಾಗಿ ಹಣದ ಮನುಷ್ಯನಾಗಿ ಬದಲಾಗಿ ಹೋದನೊ, ...ಂದಿನಿಂದ ಆತ ನನಗೆ ಪರ ಮನುಷ್ಯನಾಗಿಯೇ ಅನ್ನಿಸುತ್ತಿದ್ದಾನೆ. ಆ ...ನದಿಂದ ನಾನು ಮಾನಸಿಕವಾಗಿಯೂ, ಶಾರೀರಿಕವಾಗಿಯೂ ಆತನಿಂದ ...ದೂರವೇ ಇದ್ದೇನೆ. ಈಗ ಈತನಿಂದ ಮಕ್ಕಳನ್ನು ಪಡೆದರೆ ನಾನು ...ವ್ಯಭಿಚಾರಿಯಾದಂತೆಯೇ! ಈತನಿಗೆ ಮಕ್ಕಳ ಮೇಲಿನ ಪ್ರೇಮ ಈ ಹಿಂದೆ ...ರಲಿಲ್ಲ. ಈ ಮಧ್ಯೆ ಅಡ್ಡಾದಿಡ್ಡಿ ಹಣ ಸಂಪಾದಿಸಿರುವುದಕ್ಕೆ ತನ್ನ ಆಸ್ತಿಗೆ ...ವಾರಸುದಾರ ಬೇಕೆನ್ನುವ ತುರ್ತು ಪ್ರಾರಂಭವಾಗಿದೆ" ಅಂದಳು.

ಸಂಜೀವರಾವ್‌ನ ಕೋಪದ ಕಟ್ಟೆ ಒಡೆಯಿತು. "ಬುದ್ಧಿ ಇದೆ ಎಂದು ...ವಕ್ರವಾಗಿ ಆಲೋಚಿಸಬಾರದು. ಏನು ಮಾತನಾಡುತ್ತಿದ್ದೀಯಾ ಎಂದು ...ನನಗೆ ಗೊತ್ತಿದೆಯಾ?" ಅಂತ ಅರಚಿದನು.

ನಿರ್ಮಲ ಅಣ್ಣನ ಕಡೆ ತಿರುಗಿ "ಈತನ ಆಲೋಚನೆಗಳು ಸರಿಯಿಲ್ಲವೆಂದು ...ಳಿಸಿ ಹೇಳುವಲ್ಲಿ ನಾನು ಮಾಡಿದ ಪ್ರಯತ್ನಗಳಲ್ಲಿ ವಿಫಲವಾಗಿದ್ದೇನೆ. ...ನಮ್ಮ ಆಲೋಚನೆಗಳ ನಡುವೆ ಇಷ್ಟು ಅಂತರ ಇದ್ದಾಗ, ನಮ್ಮ ಭವಿಷ್ಯತ್ತಿನಲ್ಲಿ ...ಕೂಡಿ ಬಾಳುತ್ತೇವೆಂಬ ನಂಬಿಕೆ ನನಗಿಲ್ಲ. ಹಾಗಿದ್ದಾಗ ಈ ಪ್ರೇಮವಿಲ್ಲದ ...ಪ್ರಪಂಚಕ್ಕೆ ಮಕ್ಕಳನ್ನು ಆಹ್ವಾನಿಸುವುದು ಅಪರಾಧವೆಂದು ನನಗೆ ...ಅನಿಸುತ್ತಿದೆ...." ಅಂದಳು.

ಮೋಹನ್ ಮಧ್ಯ ಪ್ರವೇಶಿಸುತ್ತಾ "ಛೆ.... ಏನು ಮಾತುಗಳಿವು ...ನಿರ್ಮಲಾ? ಕಲ್ಲು-ಮುಳ್ಳುಗಳಲ್ಲೇ ಬದಲಾವಣೆ ಬರುತ್ತವೆ. ಅಂತಹದ್ದರಲ್ಲಿ ...ಮನುಷ್ಯರಲ್ಲೂ, ಮನಸ್ಸುಗಳಲ್ಲೂ ಬದಲಾವಣೆ ಬರದೆ ಹೇಗಿರುತ್ತದೆ? ...ಅದನ್ನು ಅರ್ಥ ಮಾಡಿಕೊಂಡು ನಡೆದುಕೊಂಡೋಗಬೇಕಷ್ಟೆ!" ಅಂದನು.

ನಿರ್ಮಲಳ ಮುಖದಲ್ಲಿ ಅಸಹನೆ ಕಾಣಿಸಿತು. "ಅಣ್ಣಾ..... ಗಂಡ-ಹೆಂಡತಿ ...ಮಧ್ಯದ ವಿವಾದ ಪರಿಹರಿಸಲು ಮಧ್ಯವರ್ತಿಯಾಗಿ ಬಂದ ನೀನು ಕೂಡ ...ವ್ಯರ್ಥ ಮಾತಾಡುತ್ತಿದ್ದೀಯೆ. ನಾನು ಸಂಜೀವ್‌ನಲ್ಲಿ ಏನು ನೋಡಿ ಪ್ರೀತಿಸಿ...ದೆನೊ, ಅದ್ಯಾವುದೂ ಈಗ ಆತನಲ್ಲಿಲ್ಲ. ಹಾಗಿದ್ದರೂ ನಾವು ಕೂಡಿ ಬಾಳ...ಬೇಕೆಂಬುದರಲ್ಲಿ ಅರ್ಥವಿಲ್ಲ. ಈತನಲ್ಲಿ ಮೊದಲಿದ್ದಂತಹ ಸಂಸ್ಕಾರವೇನಾದರೂ ...ಉಳಿದಿದ್ದಲ್ಲಿ ಪಶ್ಚಾತ್ತಾಪ ಪಡಬಹುದೆಂಬ ಆಸೆಯಿಂದ ಈ ಪತ್ರಿಕಾ ...ಜಾಹೀರಾತೆನ್ನುವ ಕೊನೆ ಅಸ್ತ್ರವನ್ನು ಪ್ರಯೋಗಿಸಿದ್ದೇನೆ. ಇದರಿಂದ ಈತನು ...ಕೊನೆ ಹಂತದವರೆಗೂ ಇಳಿದುಬಿಟ್ಟಿದ್ದಾನೆಂದು ಅರ್ಥವಾಯಿತು" ಅಂದಳು.

ಮಾತುಕತೆ ವಿಫಲವಾಗುತ್ತದೆಂದು ಮೊದಲೆ ತಿಳಿದೂ, ರಾಯಭಾರಿಯಾಗಿ ...ಬಂದಿದ್ದ ಕೃಷ್ಣನ ಸಂದರ್ಭದಂತಾಯಿತು ಮೋಹನ್‌ನ ಪರಿಸ್ಥಿತಿ.

ಕಾಲಿಂಗ್‌ಬೆಲ್ ಮೊಳಗಿದಾಗ ನಿರ್ಮಲ ಬಾಗಿಲು ತೆರೆದಳು. ಎದುರಿಗೆ ...ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಕಾಣಿಸಿದನು. ಆತನನ್ನು ನೋಡಿದ ಕೂಡಲೆ ...ಸಂಜೀವರಾವ್‌ಗೆ ಮೈಯೆಲ್ಲ ಬೆವರಲಾರಂಭಿಸಿತು.

ಕಾನ್‌ಸ್ಟೇಬಲ್ ಟೋಪಿ ತೆಗೆದು ಎಸೆಯುತ್ತಾ, "ಅಮ್ಮಾ ನಿರ್ಮಲ ...ಅಂದ್ರೆ ನೀವೇ ಅಲ್ಲವಾ. ನಿಮ್ಮ ಅದೃಷ್ಟ ಚೆನ್ನಾಗಿದೆ, ನಿಮ್ಮ ಗಂಡನ ...ಕೊಲೆಗೆ ಕೋಲಿಕೆಯಿರುವ ವ್ಯಕ್ತಿ ದೊರಕಿದ್ದಾನೆ. ಪೊಲೀಸ್ ಸ್ಟೇಷನ್‌ಗೆ ಬಂದು ...ಆತನನ್ನು ಗುರುತಿಸಬೇಕೆಂದು ನಮ್ಮ ಎಸ್ಸೈ ಸಾಹೇಬರು ಹೇಳಿದ್ದಾರೆ" ...ಅಂದನು.

ಕೋಪದಿಂದ ಸಂಜೀವರಾವ್ ಮಾತುಗಳು ತಡಬಡಿಸುತ್ತಿವೆ. "ನೋಡಿ...ದೆಯಾ... ಮೋಹನ್, ನಿನ್ನ ತಂಗಿಯ ಕಾರ್ಯ ಪತ್ರಿಕೆಯನ್ನೂ ಬಿಡದೆ, ...ಪೊಲೀಸ್ ಸ್ಟೇಷನ್‌ವರೆಗೂ ಹೋಗಿರುವ ಮಾತು! ಇದು ಕೂಡ ತಮಾಷೆಯೆ...ಂದುಕೊಳ್ಳುವಾ ಅಂತಿಯಾ?" ಅಂದನು.

ಮೋಹನ್ ಶಾಕ್‌ನಿಂದ ಇನ್ನೂ ಹೊರಬರದಿದ್ದರಿಂದ ಏನು ಉತ್ತರ ...ಹೇಳಬೇಕೆಂದು ಆತನಿಗೆ ತೋಚಲಿಲ್ಲ.

ನಿರ್ಮಲ ಕಾನ್‌ಸ್ಟೇಬಲ್ ಕಡೆ ತಿರುಗಿ "ಸಾರಿ..... ನೀವು, ನಿಮ್ಮ ...ಎಸ್ಸೈ ತಪ್ಪು ತಿಳಿದುಕೊಂಡಿದ್ದೀರಿ. ಆತನು ನಮ್ಮ ಯಜಮಾನನಾಗಿರುವುದಕ್ಕೆ, ...ಧನ್ಯವಿಲ್ಲ. ನಮ್ಮ ಯಜಮಾನ ಯಾವಾಗಲೋ ಸತ್ತುಹೋಗಿದ್ದಾನೆಂದು ...ನನಗೀಗ ಬಲವಾದ ಸಾಕ್ಷ್ಯಾಧಾರಗಳು ದೊರಕಿವೆ. ಸಾಯಂಕಾಲ ಸ್ಟೇಷನ್‌ಗೆ [illegible] ಅಂದಳು.

ಸಂಜೀವರಾವ್ ಕಾಲಕೆಳಗಿನ ನೆಲ ಅದುರಿತು. ■


ಭಾವಸಮೀಕರಣದ ವಿಶಿಷ್ಟ ಸಾಧ್ಯತೆಗಳು

'ಪುಟ್ಟ ಪಾದದ ಗುರುತು'ನಿಂದ ಕಥಾಸಾಹಿತ್ಯದಲ್ಲಿ ಭರವಸೆಯ ಹೆಜ್ಜೆಗಳನ್ನು ಮೂಡಿಸಿದ್ದ ಸುನಂದಾ ಪ್ರಕಾಶ ಕಡಮೆ 'ಗಾಂಧಿ ಚಿತ್ರದ ನೋಟು' ಪ್ರಕಟಿಸಿ ಮತ್ತೊಮ್ಮೆ ಓದುಗರ ಮುಂದಿದ್ದಾರೆ.

ಸಮಕಾಲೀನ ಸಂದರ್ಭದ ಸ್ತ್ರೀಸಾಹಿತ್ಯದ ಸ್ಪಷ್ಟ ಅವಲೋಕನ ಸಾಧ್ಯವಾಗುವುದಾದರೆ 'ಗಾಂಧಿ ಚಿತ್ರದ ನೋಟು' ಕೆಲವು ಉಪಯುಕ್ತ ಉದಾಹರಣೆಗಳನ್ನು ನೀಡುತ್ತದೆ. ಆಧುನಿಕ ಸ್ತ್ರೀ ಕಂಡುಕೊಳ್ಳುತ್ತಿರುವ 'ಮತ್ತೊಂದು ಲೋಕ'ದಲ್ಲಿ ಒಳಗೊಳಗೆ ಕುದಿವ ಬೇಗುದಿಗಳು, ಸಾಂದರ್ಭಿಕ ಅನಿವಾರ್ಯದ ಬದುಕಿನ ಒತ್ತಡದ ಸ್ಥಿತಿ, ಹೆಣ್ಣಾದ ಕಾರಣಕ್ಕೆ ತನ್ನೊಡನೆಯೇ ಹುಟ್ಟುವ ಅಥವಾ ಪುರುಷನ ಸಾಮಾಜಿಕ ಪ್ರಾಧಾನ್ಯತೆಯ ಕಾರಣದಿಂದ ಹುಟ್ಟುವ ತಳ್ಳಂಕಗಳು, ಸಹಿಸಲೇಬೇಕಾದ ಸವಾಲುಗಳು, ಯಾರದೋ ಮರ್ಜಿಗೆ ಮಾಡಿಕೊಳ್ಳಬೇಕಾದ ರಾಜಿಗಳು, ಪುರುಷನ ಪೌರುಷದ ಯಾತನೆಗಳನ್ನು ಭರಿಸುವ, ಸಂಕಟಗಳನ್ನು ಅನುಭವಿಸುವ ಇಂದಿನ ಹೆಂಡತಿ, ತಾಯಿ, ತಂಗಿಯರ ಕುರಿತಾದ ವಿಶಿಷ್ಟ ಒಳನೋಟಗಳನ್ನು ದಾಖಲಿಸುವ, ಪ್ರಾಮಾಣಿಕ ಅಭಿವ್ಯಕ್ತಿ ಸಾಧ್ಯತೆಯನ್ನು ಸುನಂದಾ 'ಗಾಂಧಿ ಚಿತ್ರದ ನೋಟ'ನ ಮೂಲಕ ಕಂಡುಕೊಳ್ಳಲೆತ್ನಿಸಿದ್ದಾರೆ.

ಪುಸ್ತಕ ವಿಮರ್ಶೆ

ಮನುಷ್ಯರ ಒಟ್ಟು ಚಿತ್ರ ಕಟ್ಟಿಕೊಡುವಲ್ಲಿ 'ನೋಟ' ಒಂದು ಪ್ರಭಾವಿ ಮಾಧ್ಯಮ. ವಿವಿಧ ಮುಖದ 'ನೋಟ' ಗಳನ್ನು ಬಹು ಆಸಕ್ತಿದಾಯಕವಾಗಿ ಚಿತ್ರಿಸುವ ಸುನಂದಾ, ಆ ನೋಟ ತಂದೊಡ್ಡುವ ತಣ್ಣನೆಯ ಕ್ರೌರ್ಯವನ್ನು ಪರಿಣಾಮಕಾರಿ ಯಾಗಿ ದಾಖಲಿಸುತ್ತಾರೆ. "ನನ್ನ ಪೆನ್ನಿ ಉಳಿದವರಿಗಿಂತ ನನ್ನನ್ನು ಬೀದಿ ಕಾಮಣ್ಣನ ಹಾಗೆ ದಿಟ್ಟಿಸುವುದಿಲ್ಲವೆಂದೇ ಅವನು ನನಗಿಷ್ಟವಾಗುತ್ತಾನೆ," "ತಟ್ಟೆಯಲ್ಲಿ ತಣಿಯ ಲಿಟ್ಟ ಅನ್ನ ತಂದು ಬಾಳೆಲೆಗೆ ಸುರಿಯಲು ಬಗ್ಗಿದಾಗ ಶಾಲಿನಿಗೆ ಭಟ್ಟರ್‍ಯಾಕೋ ಒಂದು ಥರಾ ನೋಡಿದಂತೆನಿಸಿತು" "ಅಧಿಕಾರಿಗಳ ದೃಷ್ಟಿಗಳು ಹೊಸದಾಗಿ ಕೊಂಡ ಬ್ಲೇಡಿನಷ್ಟೇ ಹರಿತವಾಗಿದ್ದವು." ದಿನದ ಜೀವನದ ಬಹಳ ಸಂದರ್ಭಗಳಲ್ಲಿ ಮೊದಲ ಅಸ್ತ್ರವಾಗಿ ಹುಟ್ಟುವುದೇ ಈ ಪುರುಷನ ನೋಟ. ಆ ಮೂಲಕ ತನ್ನ ಲಾಲಸೆ, ಚಪಲವನ್ನು ಹರಿಯಬಿಡುವ ಪುರುಷ, ಕ್ರೋಧ ಹುಟ್ಟಿದರೂ ಹೊರಹಾಕಲಾರದ ಹೇಳಿಕೊಳ್ಳಲಾರದ 'ಸ್ತ್ರೀ'ಯ ಚಿತ್ರ ಸಾರ್ವತ್ರಿಕ ಗುಣ ಹೊಂದಿದೆ. ಇಂಥ ಅನೇಕ ಸಮಸ್ಯೆಗಳ ಒಳಹೊರಗಿನ ಅರಿವನ್ನು ನೀಡುತ್ತಾ ಸುನಂದಾ ಈ ಸವಾಲುಗಳನ್ನು ಮೀರುವ ದಿಟ್ಟತನವನ್ನು ಹುಟ್ಟಿಸುವ ಯತ್ನ ಮಾಡಿದ್ದಾರೆ.



'ಗಾಂಧಿ ಚಿತ್ರದ ನೋಟು'
ಸುನಂದಾ ಪ್ರಕಾಶ ಕಡಮೆ

ಪ್ರಕಾಶಕ : ಅಕ್ಷರಪ್ರಕಾಶನ ಹೆಗ್ಗೋಡು
ಬೆಲೆ : 70 ರೂಪಾಯಿ
ಪುಟಗಳು : 96

'ಮೀರುವಿಕೆ' ಇಂದಿನ ಸ್ತ್ರೀ ಜೀವನ ಕಥನದ ಅನಿವಾರ್ಯ ತುರ್ತಾಗಿದೆ. ಹಾಗಾಗದೇ ಹೋದರೆ ಡಾಂಭಿಕ ಪೌರುಷದ ಗಂಡಸಿನ ಅಲ್ಪಸ್ವಲ್ಪ ಮೈಮನಮರೆಸುವ ಕಾಳಜಿಗೆ ಸೋತು ಮತ್ತದೇ ಒತ್ತಡದ ಸ್ಥಿತಿಯಲ್ಲಿ ಏಗಬೇಕಾದ ಅನಿವಾರ್ಯತೆ ಮುಂದುವರೆಯುತ್ತದೆ. ಆದರೆ ಸುನಂದಾರ 'ಕಾಯದೊಳಗಿನ ಆತ್ಮ' ಕಥೆಯಲ್ಲಿ 'ಮೀರುವಿಕೆ'ಯ ಕುರುಹು ಕಾಣಿಸುತ್ತದಾದರೂ ಬೇರೆ ಕಥೆಗಳ ಬಹುತೇಕ ಪಾತ್ರ ಸನ್ನಿವೇಶಗಳಲ್ಲಿ ಇದನ್ನು ಬುದ್ಧಿಪೂರ್ವಕ ಎಚ್ಚರದಲ್ಲಿ ಸಾಧಿಸುವ ಪ್ರಯತ್ನ ಮಾಡಿಲ್ಲದಿರುವುದು ಒಟ್ಟು ಬರಹದ ಮಿತಿ.

ಬಾಲ್ಯವೆಂಬ ಪೇಯ ತಣ್ಣಗಾದಷ್ಟೂ ರುಚಿ ಹೆಚ್ಚುವ ಅನುಭವ ನೀಡುವ ಸುನಂದಾ 'ಚಿನ್ನಿದಾಂಡು' 'ಮಳೆ ಹೊಯ್ದು ನಿಂತ ಕ್ಷಣ' ಕಥೆಗಳ ಮೂಲಕ ಓದುಗರ ಕಳೆದುಹೋದ ಬಾಲ್ಯವನ್ನು ಮತ್ತೆ ಹುಟ್ಟಿಸುತ್ತಾರೆ. ಇಲ್ಲಿನ ಮನುಷ್ಯ ಸಹಜ ಅಸೂಯೆ, ಬೆರಗುಗೊಳಿಸುವ ಸನ್ನಿವೇಶಗಳು, ಪುಳಕಗೊಳಿಸುವ ವಿವರಣೆ, ಊಹಿಸದ ತಿರುವುಗಳನ್ನು ಅನುಭವಿಸುವಾಗ ತೃಪ್ತಿಯ ಗರಿಮೆ ಮೂಡದಿರಲು ಸಾಧ್ಯವಿಲ್ಲ.

ಬದುಕಿನ ಸಂವಿಧಾನವನ್ನು ವಿಸ್ತರಿಸುವ, ಬದಲಾಯಿಸುವ ಅಗತ್ಯ ಇಂದಿನ ಸ್ತ್ರೀಮತದ ಬಹುದರ್ಶಿನ ಸಂಗತಿ. 'ಹೀಗೆಯೇ ಬದುಕು' ಎನ್ನುವ ಪುರುಷ ಪ್ರಧಾನತೆಯನ್ನು ನಿರಾಕರಿಸಿ, ಕೌಟುಂಬಿಕ ಹೆಣ್ಣು ಅನುಭವಿಸುವ ಸಾಮಾಜಿಕ ಸಂಕಟಗಳನ್ನು ತೆರೆದಿಡುವುದರ ಜೊತೆಗೆ ಮಾನಸಿಕ ವರ್ಗಗಳನ್ನು ಸೃಷ್ಟಿಸಿರುವ ಪ್ರತಿಮನೆಯ ಸಂಪ್ರದಾಯವಾದಿಗಳ ಮೂಲಭೂತತೆಯ ಚರ್ವಿತ-ಚರ್ವಣಗಳನ್ನು ಬಯಲಿಗೆಳೆಯುವ, ಆರೋಗ್ಯಕರ ಜೀವನದಲ್ಲಿ ಆರ್ಥಿಕ, ಸಾಮಾಜಿಕ ಗಟ್ಟಿತನವನ್ನು ಗಳಿಸುವ ಸ್ತ್ರೀ, ಮುಖ್ಯವಾಗಿ ಪುರುಷನ ಹಂಗು ರಹಿತತೆಯನ್ನು ಅವಲಂಬಿತತೆಯನ್ನು [illegible] ಇದಾಗಿರಬಹುದೇನೊ? ಈ ತಿಳಿವಿನಲ್ಲಿ ಎಲ್ಲೂ ಕೂಡ ಪುರುಷ ದ್ವೇಷ ಹುಟ್ಟುವ ಹುಸಿಕಲ್ಪನೆಗಳ ಸುಳಿವಿಲ್ಲ, ಬದಲಾಗಿ ದುರಂತಮಯ ತಳ್ಳಂಕಗಳಲ್ಲಿ ಕಳೆದುಹೋಗುವ ಹೆಣ್ಣುಮಕ್ಕಳಿಗೆ ಸ್ವಾಭಿಮಾನದ ಬದುಕಿಗೆ ಈ ಅರಿವು ಅಗತ್ಯ. ಕಥೆಗಾರ್ತಿಯರ ಪ್ರಯತ್ನಗಳು ಈ ದೂರಗಾಮಿ ಒಳಿತಿನ ವಿಷಯಗಳನ್ನು ಕೇಂದ್ರೀಕರಿಸುವ ಸಾಧ್ಯತೆಗಳಿಗೆ ಗಂಭೀರ ಗಮನ ನೀಡಬೇಕಿದೆಯೇನೋ?

'ಗಾಂಧಿ ಚಿತ್ರದ ನೋಟು' 'ಜೀಡ ಬಲೆ ನೇಯುತಿದೆ' ಕಥೆಗಳು ಅಷ್ಟೇನೂ ಪ್ರಭಾವಿಸುವುದಿಲ್ಲ. ವಿಭಿನ್ನವೆನಿಸಿದರೂ ಸಹಜ ಬಲಹೀನತೆಯೇ ಮುಖ್ಯವೆನ್ನಿಸುವ ಕಥಾವಸ್ತು ಆಸಕ್ತಿಯನ್ನು ಕಳೆಗುಂದುವಂತೆ ಮಾಡುತ್ತವೆ. ಬರೆಯುವ ಉತ್ಸಾಹ ಮತ್ತು ಕಾರ್ಯಗತಗೊಳಿಸುವ ನಿಷ್ಠೆಯ ಜೊತೆಗೆ ಕಥೆಗಾರ್ತಿಯಾಗಿ ಮಾಡಬಹುದಾದ ಮೌಲಿಕ ಹಾಗೂ ತಾತ್ವಿಕ ಚಿಂತನೆಗಳ ಗಂಭೀರ ಅವಲೋಕನವೂ ಸಾಧ್ಯವಾಗಬೇಕು. ಅಪರೂಪವೆನ್ನಿಸುವ ಕೆಲವೇ ಕಥೆಗಾರ್ತಿಯರಲ್ಲಿ ಸುನಂದಾ ತಮ್ಮದೇ ಆದ ಪ್ರೌಢಿಮೆಯನ್ನು ಗಳಿಸುತ್ತಿರುವಾಗ ಈ ತಿಳಿವು ಅಗತ್ಯವಿದೆಯೆನಿಸುತ್ತದೆ.

ಕೊರತೆ ಅದರಲ್ಲೂ ತಂದೆ ಅಥವಾ ತಾಯಿಯ ಗೈರನ್ನು ಅನುಭವಿಸುವ ಮಗ ಅಥವಾ ಮಗಳಯಾತನೆ ಮನಸ್ಸು ಕರಗಿಸುವಂಥದ್ದು. 'ನನ್ನ ಪೊರೆವ ತೊಟ್ಟಿಲು' ಕಥೆಯ ಸುಜೀ, 'ನಿನ್ನದೊಂದು ನೋಟ ಬೇಕು' ಎನ್ನುವ ಚಿನ್ನು ನಮ್ಮಲ್ಲಿ ಮಾನವೀಯತೆಯ ಅಂತಃಕರಣವನ್ನು ಮೂಡಿಸಿ ಮನದಲ್ಲಿ ತಮ್ಮ ಅಚ್ಚನೊತ್ತುತ್ತಾರೆ. ಆದರೆ ಚಿನ್ನುವಿನ ತುಡಿತವನ್ನು ಕಥೆಗಾರ್ತಿ ಸಿನಿಮೀಯವಾಗಿ ಕೊನೆಗೊಳಿಸುತ್ತಾರೆ. ಆದರೂ ಈ ಕಥೆಗಳು ನಿರೂಪಣೆಯ ಪರಿಮಳದಲ್ಲಿ ಮೀಯಿಸಿ, ರಾಶಿ ತೃಪ್ತತೆಯನ್ನು ನೀಡಲು ಸಾಧ್ಯವಿದೆ.

ಸುನಂದಾ 'ತಂಕಿ'ಯ ಶಂಕರನ ಜೀವನದ ಅಂತ್ಯಕಾಲದಲ್ಲೂ ಹುಟ್ಟುವ ಜೀವನ್ಮುಖತೆಯನ್ನು ಸ್ಪಷ್ಟವಾಗಿ ಚಿತ್ರಿಸುತ್ತಾರೆ. 'ತಂಕಿ'ಯ ಬದುಕಿನ ಕ್ಷಣಕ್ಷಣದ ವಿವರ, ರೋಗಿಯಾಗಿ ಹೊಂದಿರುವ ಮಾನಸಿಕ ಸ್ಥಿತಿಯ ಗ್ರಹಿಕೆ, ಅಕ್ಕ ಮತ್ತು ತಾಯಿಯ ಹೇಳಿಕೊಳ್ಳಲಾಗದ ಸಂಕಟಗಳನ್ನು ಪದಗಳ ಸೋಜಿಗವೆನ್ನುವಂತೆ ಕಟ್ಟಿಕೊಡುವ ಕಥೆಗಾರ್ತಿಯ ಪರಿಸರದ ಸೂಕ್ಷ್ಮ ಹುಡುಕಾಟ, ಕೇವಲ ಅವಲೋಕನದಿಂದ ಮಾತ್ರ ಸಾಧ್ಯವಾಗಿಲ್ಲ. 'ಜರಿಯಂಚಿನ ಫ್ರಾಕಿನ' ಗುರ್‍ರ್ಯಾನ ವ್ಯಕ್ತಿಚಿತ್ರವೇ ಆಗಲಿ, ಅವನ ಮಿಷನ್, ದಿಢೀರ್ ಬಂದೆರಗುವ ರಸ್ತೆ ಅಗಲೀಕರಣದ ಚಿತ್ರಣಗಳು ಕಥೆಗಾರ್ತಿಯ ಬುದ್ಧಿಮತ್ತೆಯ ಜೊತೆಗೆ ಕೌಶಲಕ್ಕಿಂತ ಹೆಚ್ಚಿನದಾದ ಮೌಲಿಕ ಗುಣವನ್ನು ಸುನಂದಾರಲ್ಲಿ ತೆರೆದಿಡುತ್ತವೆ.

ಬದುಕನ್ನೂ ಸಹ ಸೃಜನಶೀಲವಾಗಿ ನೋಡುವ ಸುನಂದಾ ಪ್ರಕಾಶ ಕಡಮೆ 'ಪುಟ್ಟ ಪಾದದ ಗುರುತು' ಕೃತಿಗೆ ತೋರಿಸಿದ ತಾಂತ್ರಿಕ ಆಸಕ್ತಿಯನ್ನು ಈ ಕೃತಿಗೆ ತೋರಿಸಿಲ್ಲವೆಂಬ ಭಾವ ಮೊದಲ ನೋಟಕ್ಕೆ ಸುಳಿಯುತ್ತದೆ. ನೋಡಿದೊಡನೆ ಕೈಗೆತ್ತಿಕೊಳ್ಳುವಂತೆ ಮಾಡುವ ಮೊದಲ ಪುಸ್ತಕದ ಆಕರ್ಷಕ ಮುಖಪುಟ, ಅರ್ಥಸಾಧ್ಯತೆಗಳನ್ನು ಹೆಚ್ಚಿಸಿದ ಪ್ರತಿಕಥೆಯ ಚಿತ್ರಗಳು ಗಾಂಧಿ ಚಿತ್ರದ ನೋಟನಲ್ಲಿಲ್ಲ. 'ಬ್ಲರ್' ಎನಿಸುವ ಗಾಂಧಿ, ಒಳಗಡೆ ಒಪ್ಪ ಓರಣವಾಗಿರುವ ಕಥೆಗಳಿಗೆ ಚಿತ್ರಗಳ ಸಾಂಗತ್ಯವಿಲ್ಲದೆ ಥಾಳವೆನಿಸುತ್ತವೆ. ಈ ಕೆಲವು ತೆಳುವಾದ ಅಗತ್ಯಗಳೂ ಸಹ ಒಂದು ಕೃತಿಯನ್ನು ಪ್ರಭಾವಿಸಬಲ್ಲ ಮುಖ್ಯ ಸಂಗತಿಗಳೆನ್ನುವುದಕ್ಕೆ ಈ ಮಾತು. 'ಗಾಂಧಿ ಚಿತ್ರದ ನೋಟಿನ' ಕಥೆಗಳ ಅಸ್ಮಿಯಲ್ಲಿ ಭಾವಸಮೀಕರಣದ ವಿಶಿಷ್ಟ ಸಾಧ್ಯತೆಗಳು ಯಶಸ್ವಿ ಪ್ರಯೋಗಗಳೆನಿಸುತ್ತವೆ.

ಒಂದೇ ಗುಕ್ಕಿನಲ್ಲಿ ಓದಿಕೊಂಡರೂ ಮತ್ತೆಮತ್ತೆ ಓದುವ ಕುತೂಹಲ ಉಳಿಸಿಕೊಳ್ಳುವ ಕಲಕ್ಕ, ದೊಡ್ಡಮ್ಮ, ಗುಲ್ಯಾ, ತಂಕಿ, ಚಿನ್ನು, [illegible] ಯಮುನಕ್ಕ, [illegible] ಕಾಡುತ್ತಾರೆನ್ನುವುದು ಸಹಜ ಸತ್ಯ. [illegible] ಸಹಜವೇನೋ?

■ [illegible]

ಜಗ್ಗೇಸನೂ ಚೆನ್ನಿಗಪ್ಪನೂ ರಿಲೇಸನ್ನಂತೆ ನಿಜವೆ!

ಊರ ಸುತ್ತ ಹಸಿರು ಮುಕ್ಕಳಿಸುವ ಹೊಲಗಳನ್ನು ನೋಡಿ ಬರುವುದೇ ಕಾಳಮಾವನಿಗೆ ಸಂಭ್ರಮದ ಕೆಲಸವಾಗಿತ್ತು. ಮ್ಯಾರೆ ಎದ್ದವನೆ ಕಣದಹೊಲ, ಧರೆ ಹೊಲ, ಇತ್ಯಾದಿ ಐತಿಹಾಸಿಕ ಹೊಲಗಳ ಬದುವಿನ ಮೇಲೆ ತೆಳ್ಗೆ ನಡೆದಾಡಿಕೊಂಡು ಬಂದರೆ ಸಾಕು, ಮನಸ್ಸಿಗೆ ಹರ್ಷವಾಗುತ್ತಿತ್ತು. ಕೂಡಲೇ ಆತಂಕವೂ ಆಗುತ್ತಿತ್ತು. ಏಕೆಂದರೆ ಇಷ್ಟು ಚಂದಾಗಾನಾಗಿ ಬ್ಯಳಿತಾಯಿರೊ ಹೊಲಗಳು ಉದ್ಧಾರಾಗಬೇಕಾದ್ರೆ ಮಳೆಗಾಲ ನಡೆಸಬೇಕು. ಮಧ್ಯದಲ್ಲಿ

ಕಟ್ಟೆಪುರಾಣ

ಬಿ. ಚಂದ್ರೇಗೌಡ

ಮಳೆ ಕೈ ಕೊಟ್ಟರೆ ಕತೆ ಮುಗಿದಂತೆಯೇ ಎಂಬ ಅನುಮಾನ ಅವನ ದುಗುಡಕ್ಕೆ ಕಾರಣವಾಗಿತ್ತು. ಇಂತ ಮನಸ್ಥಿತಿಯಲ್ಲಿ ಬಂದ ಕಾಳಮಾವ ಸೀರನನ್ನು ನೋಡಿದ ಕೂಡಲೇ,

"ನೀನು ಅರ್ತೆಯ ಬಗಿಯಾಗಿಡಿಬೇಕಾಗಿತ್ತು ಕಂಡ್ಯ, ನಿನ್ನಲ ದಟ್ಬಾದೊ" ಎಂದ.

"ದಟ್ಬಾದೊ ಅಂದ್ರೇನು ಮಾಡನಾ? ಈಗಿನ ಕಾಲ್ದ ಹುಡ್ರಿಗೆ ಅರ್ತೆ ವಡಿಯದು, ಕುಂಟೆ ವಡಿಯದು ಮರ್ತೋಯ್ತಾ ಅದೆ. ಅದ್ಕೆ ಅಂಗೆ ವಡದವೆ. ನಾನೇ ವಡಿಯನಾ ಅಂದ್ರೆ ಹಸಿನ ಜ್ವತೆ ಕಾಲಾಕಕ್ಯಾಗದಿಲ್ಲ" ಎಂದ.

"ನಾವು ಸತ್ತ ಮ್ಯಾಲೆ ಯಾವನೂ ಅರ್ತೆಕುಂಟೆ ವಡಿಯಂಗೆ ಕಾಣದಿಲ್ಲ ಕಂಡ್ಯ."

"ಯವಸಾಯದ ಕಸುಬೆ ಕ್ಯಟ್ಟ ಕಸುಬಿನಂಗೆ ಕಾಣ್ತ ಅದೆ. ಅಂತೆದ್ರಲ್ಲಿ ಇವೆಲ್ಲಿ ವಲ ಹುತ್ತವ್ರೂ" ಎಂದ ಸೀರ.

"ವಲಬ್ಯಳಿದೆಯಿದ್ರೂ ಸೊಸೈಟಿಗೆ ಅಕ್ಕಿ ರಾಗಿ ಬತ್ತವೆ ಕಣೊ ಸೀರ ಮಾವ" ಎಂದ ಉಗ್ರಿ.

"ತಗಳಕ್ಕೆ ದುಡ್ಡಬ್ಯಾಡವೆ?"

"ಕಾಯಿಮಾರ್ತಿವಿ ತಗತಿವಿ."

"ಕಾಯಿಕತೆ ಗೊತ್ತಿಲವೇನ್ಲ ನಿಂಗೆ? ಈ ತರಕಾರಿ ಬ್ಯಳಿಯೋರು ಹಾಕೊ ಗ್ವಬ್ಬರ, ಅವುಸ್ಥಿ ಕಾರಕೆ ಮಗ್ಗಲಲ್ಲಿರೊ ತೆಂಗಿನಮರ ಫಲಬುಡ್ತಾಯಿಲವಂತೆ" ಎಂದ ಸೀರ.

"ನಿಜವೇನೊ ಸೀರಮಾವ?" ಎಂದಳು ಜುಮ್ಮಿ.

"ಊ ಕಂಡ್ಯ, ನನ್ನ ಮಾತು ಸುಳ್ಳಾದ್ರೆ ನೀನೆ ಹೋಗಿ ನೋಡಕಂಡು ಬಾ. ಸೀಮೆಗ್ವಬ್ಬರ, ಅವುಸ್ಥಿ ಬಳಸೋರ ದ್ಯಸಿಂದ ನಮ್ಮಂತ ವಳ್ಳೆ ರೈತರು ಯವಸಾಯನೆ ಬುಡಂಗಾಗ್ಯದೆ" ಎಂದ ಸೀರ.

"ಅಂಗರಿದ್ವಳ್ಳೆ ಕತಿಯಾಯ್ತಲ್ಲಾ?"

"ಈ ಬೀಡಿ ಸಿಗರೇಟು ಸೇದೋರ ಅಕ್ಕಪಕ್ಕದಲ್ಲಿದ್ರೆ ನಮಿಗೂ ಕೆಮ್ಮು ಬರಕ್ಕುಲವೇನೆ, ಅಂಗಾಯ್ತಿದು" ಎಂದ ಉಗ್ರಿ.

"ಅದ್ಕೆ ಅಲವೆ, ವಳ್ಳೆ ನ್ಯರೆಲಿರಬೇಕು, ಅಪ್ಪಂತೋರ ಸವಾಸ ಮಾಡಬೇಕು ಅಂತ ಹೇಳಿರೋದು."

"ಕಾಳಮಾವನ ಮಾತ ಕೇಳತಾಯಿದ್ರೆ ಕುಮಾರಸ್ವಾಮಿ ನ್ಯನಪಾಯ್ತಾ ಅವುನೆ" ಎಂದ ಉಗ್ರಿ.

"ಅವುನಿಗೇನಾಗ್ಯದ್ಲ?" ಎಂದಳು ಜುಮ್ಮಿ.

"ಅವುನಿಗೇನೂ ಆಗಿಲ್ಲ ಮಾಡುಬಾರ್ದ ಮಾಡಿದ ಆಗಬಾರದ್ದಾಯ್ತಾ ಅದೆ."

"ಆಗ್ಲೆಬೇಕಲವೆ, ಉಪ್ಪು ತಿಂದೋಳು ನೀರು ಕುಡಿತಳೆ" ಎಂದ ಸೀರ.

"ಅವುನ್ನ ಹೊತಗಂಡು ಮ್ಯರದೋರು, ಕುಣದೋರ್ಯಲ್ಲ ಎಡೂರಪ್ಪನ ಕಡಿಕೋಯ್ತಾ ಅವುರೆ."

"ಯಾರ್ಲ ಹೋದೋರು?"

"ಚೆನ್ನಿಗಪ್ಪ ಕಣಮಾವ. ಮಗನ್ನ ಮುಂದು ಕಳಿಸಿ ತಾನು ಹಿಂದ್ಲಿಂದ ಹೋಯ್ತಾ ಅವುನೆ. ಹೋಗದೋಗ್ತ ಸುಮ್ಮನೋಗಲಿಲ್ಲ, ದ್ಯಾವೇಗೌಡ ಅವನ ಮಕ್ಕಳನ್ಯಲ್ಲ ಬಾಯಿಗೆ ಬಂದಂಗೆ ಬೋದು ಹೋಯ್ತಾ ಅವುನೆ" ಎಂದ ಉಗ್ರಿ.

"ಏನಂತ ಬೋದುನ್ಲ?" ಎಂದ ಸೀರ ಚೆನ್ನಿಗಪ್ಪನ ಬೈಗಳ ಬಗ್ಗೆ ಕುತೂಹಲಗೊಂಡು.

"ಏ, ಅವುನು ಹೆಚ್ಚುಕಮ್ಮಿ ನಿನ್ನ ಮಗ ರಾಮ ನಿನ್ನ ಬೈತನಲ್ಲೊ ಅದೇ ತರ ದ್ಯಾವೇಗೌಡುನ್ನ ಬೋದನಂತೆ. ದ್ಯಾವೇಗೌಡ್ನುವೆ, ಅವುನ ಮಕ್ಕಳುವೆ ನಿಜವಾದ ಮಣ್ಣಿನ ಮಕ್ಕಳಲ್ಲ, ನಕಲಿ ಮಣ್ಣಿನ ಮಕ್ಕಳು ಅಂತ ಬೋದನಂತೆ."



"ನಿಜವಾದ ಮಣ್ಣು ಅಂದ್ರೇನು, ನಕಲಿ ಮಣ್ಣು ಅಂದ್ರೇನ್ಲ?"

"ಏನಪ್ಪ ಚೆನ್ನಿಗಪ್ಪನ್ನೆ ಕೇಳಬೇಕು. ಬಹುಷಃ ನಿಜವಾದ ಮಣ್ಣು ಅಂದ್ರೆ ಬೆಳೆ ಬ್ಯಳಿಯೋ ಮಣ್ಣು ನಕಲಿ ಮಣ್ಣು ಅಂದ್ರೆ ಗಣಿ ಮಣ್ಣಿರಬೇಕು."

"ಗಣಿ ಧಣಿಗಳೆ ಅಂತಲ್ಲ ಈ ಚೆನ್ನಿಗ, ಅವುನ ಮಗ ಇಂಥೋರನ್ಯಲ್ಲ ಕೊಳ್ಳುತಾಯಿರೋರು" ಎಂದ ಸೀರ.

"ನಿಜ ಕಣಮಾವ. ಮದ್ಲು ಕುಮಾರಸ್ವಾಮಿ ಯಮ್ಮೆಲ್ಲೆಗಳನ್ಯಲ್ಲ ರೆಸಾರ್ಟಿಗೆ ಹೊತಗಂಡೋಗಿ ಸರ್ಕಾರ ಮಾಡಿದಾಗಲೇ ಈ ಗಣಿಧಣಿಗಳೇ ದುಡ್ಡು ಕೊಟ್ರೊರು. ಈಗ ಚೆನ್ನಿಗಪ್ಪನ ಕರಕಂಡೋರೂ ಅವುರೆಯ."

"ಚೆನ್ನಿಗನಂಥೋನ್ನ ಬಿಜೆಪಿಗಳು ಸೇರಿಸಿಗಂಡ್ರು ಅಂದ್ರೆ ಅವುರಂತ ಗತಿಗೆಟ್ರೊರೆ ಯಾರು ಇಲ್ಲ ಬುಡ್ಯ" ಎಂದ ಕಾಳಮಾವ.

"ಚೆನ್ನಿಗಪ್ಪನ್ನ ಅಷ್ಟು ಕಂಡೆಂ ಮಾಡಬ್ಯಾಡ ದ್ವಡಪ್ಪ" ಎಂದು ವಾಟಿಸ್ಸೆ ಬಂದ.

"ಅಲ್ಲಾ ಕಂಡ್ಯ, ಅವುನು ಹಗಲಾಡಿದ ಮಾತ ರಾತ್ರಿಕೆ ಇಲ್ಲ ಅಂದನಂತೆ. ಅಂತ ಮನ್ಸ ಯಾರಿಗೆ ಬ್ಯಳೆ ತಂದನೂ?"

"ಥೂ, ಥೂ, ಥೂ, ರಾತ್ರಿಗಂಟ ಹೋಗಬ್ಯಾಡ ದ್ವಡಪ್ಪ, ಈಗಾಡಿದ ಮಾತ್ನೆ ಈಗಿಲ್ಲ ಅಂತನೆ" ಎಂದ ವಾಟಿಸ್ಸೆ.

"ಮತ್ತೆ ಅಂಥೋನ್ನ ಈ ಬಿಜೆಪಿಗಳ್ಯಾಕ್ಲ ಸೇರಿಸ್ಕೊಂಡ್ರು?"

"ಇಸಿಸಿ, ಬಿಜೆಪಿಗಳು ಇರದೇ ಚೆನ್ನಿಗಪ್ಪನಂಗಲವೆ ದ್ವಡಪ್ಪ? ಅಕ್ಬುವಲಿ ಬಿಜೆಪಿ ಇವತ್ತಿರೊ ಕಂಡಿಷನ್ ನೋಡಿದ್ರೆ ಆ ಪಾರ್ಟಿಗೆ ಚನ್ನಿಗಪ್ಪನೆ ಅಧ್ಯಕ್ಷಾಗದು ವಳ್ಳೆದು!"

"ಅಂಗಾಗಿದ್ದತೆ ಬಿಜೆಪಿ?"

"ಅಂಗೆ ಅಂದ್ರೆ ತಪ್ಪು ತಿಳಕೊಬ್ಯಾಡಿ. ವಳ್ಳೆ ಪಾರ್ಟಿ ಆಗೊ ಕಡಿಕೆ ಹ್ಯಜ್ಜೆ ಹಾಕ್ತ ಅದೆ. ಆದ್ರೆ ಇವುರಿಗೋಲಿಸಿದ್ರೆ ಕಾಂಗ್ರೆಸ್ ಪಾರ್ಟಿನೆ ಇನ್ನು ಅಷ್ಟು ಇಷ್ಟು ಮರಿಯಾದಿ ಉಳಿಸಿಗಂಡಿರೊ ಪಾರ್ಟಿ ಅಂತ ನನಿಗನ್ಸುತ್ತಾಯಿದೆ."

"ಅನ್ಸದೇನು, ಇವತ್ತು ಯತ್ತಮುಂದಾಗಿ ನೋಡಿದ್ರೆ ಆದೇ ಪಾರ್ಟಿ ಪರವಾಗಿಲ್ಲ ಕಣೊ ವಾಟಿಸ್ಸೆ. ಏನಪ್ಪ ವ್ಯತ್ಯಾಸ ಅಂದ್ರೆ ಇವುರು ಗಭಗಭನೆ ತಿಂತರೆ, ಅವುರು ನಿಧಾನಕ್ಕೆ ತಿಂತರೆ, ಅಷ್ಟೆ ನೋಡು ಡಿಫರೆನ್ಸು."

"ನಿಧಾನಕ್ಕೆ ಯಾಕೆ ತಿಂದ್ರು ಗೊತ್ತೇನೊ ಉಗ್ರಿ? ಮುಂದ್ಯಲ್ಲ ನಾವೆ ಇರತಿವಿ ಅನ್ನಕಂಡು ಬುಟ್ರು ಅದ್ಕೆ.

ಹುಚ್ಚರ ಸಂತೆ

ಲಿಂಗಪತ್ತೆ!

'ಸೌತೆಕಾಯಿ ಹೆಣ್ಣೊ ಗಂಡೊ?'

ಮಿಕಮಿಕನೆ ನೋಡಬೇಡಿ.

ಹೋಗಲಿ ಇದನ್ನಾದರೂ ಹೇಳಿ– 'ಟೊಮೋಟೊ ಲಿಂಗ ಯಾವುದು?'

ಪೂರ್ತಾ ತಲೆ ಕೆಟ್ಟದೆ ಅನ್ನುತ್ತೀರಾ? ಗೊತ್ತಿಲ್ಲದಿದ್ದರೆ ಗೊತ್ತಿಲ್ಲ ಅಂತ ಹೇಳಿ. ಈ ತಲೆ ಹರಟೆ ಯಾಕೆ?

ಗೊತ್ತಿಲ್ಲವೆ? ಹಾಗಾದರೆ ಕೇಳಿ– 'ಸೌತೆಕಾಯಿ ಗಂಡು, ಟೊಮೋಟೊ ಹೆಣ್ಣು!'

ತಲೆಕೆಟ್ಟವನ ತೀರ್ಮಾನ ಇದು ಅನ್ನಬೇಡಿ. ಯಾಕೆಂದರೆ ಇದನ್ನು ಹೇಳಿದವರು ಸುನ್ನಿ ಮುಖಂಡರಲ್ಲೊಬ್ಬರಾದ ಶೇಖ್ ಹಮೀದ್ ಅಲ್‌ಹಯ್ಯಾಸ್!

ಹಾಳಾಗಿ ಹೋಗಲಿ ಬಿಡಿ ಅನ್ನಬೇಡಿ. ಅನ್ಬರ್‌ನಲ್ಲಿ ಹೊರಡಿಸಿರುವ ಫತ್ವಾ ಇದು!

ಮಹಿಳೆಯರು ಮಾರುಕಟ್ಟೆಗೆ ಹೋಗಬಹುದು. ಆದರೆ ಎಚ್ಚರ! ಅವರು ಸೌತೆಕಾಯಿಯಂತಹ ಪದಾರ್ಥಕೊಳ್ಳಬಾರದು!

ಯಾಕೆ ಖರೀದಿಸಬಾರದು?

ಅವು ಪುರುಷರ ಗುಪ್ತಾಂಗ ಸೂಚಕಗಳು! ಮಹಿಳೆಯರು ಇಂತಹ ಸೂಚಕಗಳ ಖರೀದಿಸುವುದು ಅಕ್ಷಮ್ಯ ಅಪರಾಧ!

ಈಗ ಹೇಳಬಲ್ಲಿರಾ? ಟೊಮೋಟೊದ ಲಿಂಗ? ಕರೆಕ್ಟ್, ಹೆಣ್ಣು!

ಹುಚ್ಚರ ಸಂತೆ ಎನ್ನುತ್ತೀರಾ? ಮುಂದಿನದನ್ನೂ ಕೇಳಿ ಸಂತೋಷ ಪಡಿ.

ಅನ್ಬರ್‌ನಲ್ಲಿ ಆಡುಗಳ ಮಾರಣಹೋಮ ನಡೆಯುತ್ತಿದೆ?

ಯಾತಕ್ಕಾಗಿ ಇದು? ಅಲ್ಲಿ ಯಾವುದಾದರೂ ಯಜ್ಞ ನಡೆಯುತ್ತಿದೆಯೆ?

ಇಲ್ಲ, ಅದಕ್ಕಲ್ಲ, ಮಾಂಸದ ಆಸೆಯಿಂದ ಅಲ್ಲ, ಅನೈತಿಕ ಕಾರಣಗಳಿಗಾಗಿ!

ಏನು ಮಾಡಿದವು ಆ ಮುಗ್ಧ ಪ್ರಾಣಿಗಳು!

ಅವು ಅಮಾಯಕ ಅಲ್ಲ, ಮಾಯಕಗಳು!

ಅವೇನು ಅಪರಾಧ ಮಾಡಿದವು?

ತಮ್ಮ ಗುಪ್ತಾಂಗಗಳನ್ನು ಪ್ರದರ್ಶಿಸುತ್ತಿವೆ! ಅವನ್ನು ಮರೆಮಾಚಿಸಬೇಕೆಂಬ ಕನಿಷ್ಠ ಪ್ರಜ್ಞೆಯೂ ಇಲ್ಲ! ಅಷ್ಟು ಮಾತ್ರ ಅಲ್ಲ, ಅವುಗಳ ಬಾಲ ಗಮನಿಸಿದ್ದೀರಾ? ಹೇಗಿವೆ ಅವು? ಮೇಲ್ಮುಖವಾಗಿ! ಅಶ್ಲೀಲ ಸೂಚಕವಾಗಿ!

ಇದೇ ಪ್ರಾಮಾಣ್ಯವಾದರೆ ವಿಶ್ವದ ಹಲವು ಪ್ರಾಣಿಗಳು ಬಲಿಯಾಗಬಹುದು!


ಇದನ್ನು ವಿರೋಧಿಸಿದವರಿಗೆ ತಲೆ ದಂಡ!

ಇಸ್ಲಾಂ ಅವನತಿಯ ಅಂಚಿನತ್ತ ಸರಿಯುತ್ತಿದೆ ಎನ್ನುವುದು ನಿಮ್ಮ ಅಭಿಪ್ರಾಯ ಇರಬಹುದು. ಮೂಲಭೂತವಾದಿಗಳಿಗಿಲ್ಲ!

ಚಿರ ಯೌವ್ವನೆ!

ಇದು ನಡೆದದ್ದು ನ್ಯೂಯಾರ್ಕ್ ನಗರದಲ್ಲಿ.

ಅಲ್ಲಿನ ಗೌರ್ನರ್ ಮಹಿಳೆ. ಸೌಂದರ್ಯದ



ಖಣಿಯಂತೆ. ನೋಡುವವರ ಕಣ್ಣಿಗೆ ಇನ್ನೂ ಚಂದ ಕಾಣಿಸುವಂತೆ ನಮ್ಮಲ್ಲಿನ ಆಂಟಿಗಳ ತರಹವೇನೆ ಸೌಂದರ್ಯವರ್ಧಕಗಳನ್ನು ಬಳಸಿಕೊಂಡಳಂತೆ. ತನ್ನ ಸಂಗಾತಿಯೊಂದಿಗೆ ರೆಸ್ಟೋರೆಂಟ್‌ಗೆ ಹೋದಳಂತೆ. ಇಂತಹ ಮಹಾಮಹಿಮರು ತಮ್ಮ ಪಾದಧೂಳಿನಿಂದ ರೆಸ್ಟೋರೆಂಟ್ ಪಾವನಗೊಳಿಸುತ್ತಿದ್ದಾರೆ ಎಂದು ಬಾಜಾ ಭಜಂತ್ರಿ ಬಾರಿಸಲು ಯಾವ ಚಮಚಾನೂ ಇರಲಿಲ್ಲವಂತೆ. ಅಧಿಕಾರನ ಹೇಗೆ ಅನುಭವಿಸಬೇಕು ಅನ್ನುವುದು ಗೊತ್ತಿಲ್ಲದ ಜಾತಿ ಜನ ಇರಬೇಕು. ಮಾಮೂಲಿ ಜನರಂತೆಯೇ ಕುಳಿತು ಹರಟೆ ಹೊಡೀತಾ ಕಾಫಿ ಸವಿದರಂತೆ. ಸ್ವಲ್ಪ ಹೊತ್ತು ಹೀಗೇ ಕಳೆದ ನಂತರ ಗೌರ್ನರಾಣಿಯ ಗಂಟಲು ಒಣಗಿದ ಹಾಗಾಯಿತಂತೆ. ದಾಹ ಪರಿಹರಿಸಿಕೊಳ್ಳೋಣ ಅಂತ ಬಾರ್ ಸೆಕ್ಷನ್ ಕಡೆಗೆ ತೆರಳಿದರಂತೆ. ಸಾಮಾನ್ಯವಾಗಿ ಇಂತಹ ದೊಡ್ಡ ಮನುಷ್ಯರು ಬರುವುದೇ ಒಂದು ಪುಣ್ಯ ಅಂತ ಮ್ಯಾನೇಜರ್‌ನಿಂದ ಹಿಡಿದು ಸಪ್ಲೈಯರ್‌ವರೆಗೆ ಅವರ ಬಾಲ ಹಿಡಿದು ಓಡಾಡೋದು ಸಂಪ್ರದಾಯ. ಅಲ್ಲಿ ಅದೇನೂ ನಡೆಯಲೇ ಇಲ್ಲವಂತೆ. ಬದಲಿಗೆ ಬಾಗಲಿನಲ್ಲಿಯೇ ಇದ್ದವನು ಕೈ ಮುಂದೆ ತಂದನಂತೆ. ಅಮಾಲು ಧುಮಾಲು ಆದ ನಂತರ ಹಿಂದಿರುಗುವಾಗ ಹೀಗೆ ಕೈಬಿಡ್ತಾರೆ, ಇಲ್ಲೇನು ಒಳಗೆ ಹೋಗುವಾಗಲೇ ಟಿಪ್ಸ್ ನೀಡಬೇಕಾ, ಇಲ್ಲೇ ಹಿಂಗಾದರೆ ಇನ್ನು ಒಳಕ್ಕೆ ಹೋದ ಮೇಲೆ ನೀರಿಲ್ಲದೆ ತಿರುಪತಿ ಮಾಡುತ್ತಾರೆ ಅನ್ನಿಸುವುದು ಸ್ವಾಭಾವಿಕ. ಆದರೆ ಅವ್ನು ಕೈಮುಂದೆ ತಂದದ್ದು ಅದಕ್ಕಲ್ಲವಂತೆ. ಮದ್ಯಪಾನ ಮಾಡಲು ಪರ್ಮಿಟ್ ಇದೆಯ ಅಂತ ಕೇಳೋದಕ್ಕಂತೆ. ಯಾಕಂದ್ರೆ ಅಲ್ಲಿ ಇಪ್ಪತ್ತೊಂದು ವರ್ಷದ ಒಳಗಿನವರಿಗೆ ಮದ್ಯ ಸರಬರಾಜು ಮಾಡುವುದಿಲ್ಲವಂತೆ.

ನಮ್ಮಲ್ಲಾಗಿದ್ದರೆ 'ನನ್ನೇ ಪರ್ಮಿಟ್ ಕೇಳುವಷ್ಟು ಧಿಮಾಕೇನೋ ನಿನ್ಗೆ' ಅಂತಾನೋ ಅಥವಾ ಇತ್ತೀಚಿನ ರಾಜಕೀಯ ಪರಿಭಾಷೆಯಲ್ಲಿ ಹೇಳುವುದಾದರೆ 'ಎತ್ತುರ್‍ಲ ಇವನ್ನ' ಎಂದೋ ಹೇಳುತ್ತಿದ್ದರು. ಏನು ಸೋಜಿಗ ಅಂತೀರಿ. ಅಂತಹದ್ದೇನೂ ನಡೆಯಲೇ ಇಲ್ಲವಂತೆ. ನಸುನಗುತ್ತಲೇ ಗೌರ್ನರ್ ಮಹಾರಾಣಿಯವರು 'ಪರ್ಮಿಟ್ ತಂದಿಲ್ಲ' ಅಂದರಂತೆ. ಅವಮಾನವಾಗುತ್ತಲೇ 'ಹಂಗಾದರೆ ಒಳಕ್ಕೆ ಬಿಡೋದಿಲ್ಲ' ಅಂದನಂತೆ.

ಆಸೆಯಿಂದ ಹೊಟ್ಟೆಗೆ ಹೆಂಡ ಸುರಿಕೊಳ್ಳೋಣ ಅಂತ ಬಂದವರಿಗೆ ಹೀಗೆ ಮಾಡಿದ್ರೆ ಸಿಟ್ಟು ಅನ್ನೋದು ನೆತ್ತಿಗೆ ಏರಬೇಡವಾ. ಉಹುಂ. ಆಕೆಗೆ ಅದು ಏನೂ ಅನ್ನಿಸಿರಲಿಲ್ಲವಂತೆ! ಬಹಳ ಸಂತೋಷ ಆಯಿತಂತೆ! ನಗುನಗುತ್ತಲೇ ಹಿಂತಿರುಗಿದರಂತೆ!

ಎಲಾ ಎಲಾ ಇದೇನು ಇಂತಹ ಅವಮಾನಕರ ಪ್ರಸಂಗಾನೂ ಸನ್ಮಾನ ಅನ್ನೋ ಹಂಗೆ ಬೀಗುತ್ತಿದೆಯಲ್ಲ ಈ ಅಮ್ಮ ಅಂತ ಕೊಂಚ ಜಾಸೂಸಿ ಕೆಲಸ ಮಾಡಿದಾಗ ತಿಳಿದುಬಂದದ್ದು ಏನು ಅಂದ್ರೆ... ಆ ಗೌರ್ನರಮ್ಮ ಆಗಲೇ ಅರವತ್ತೆರಡರ ಮುದುಕಿಯಂತೆ. ಇತರರ ಕಣ್ಣಿಗೆ ಇನ್ನೂ ಇಪ್ಪತ್ತರ ಹರೆಯದ ಹೆಣ್ಣಾಗಿ ಕಾಣಿಸಿದೆನಲ್ಲ ಅಂತ ಖುಷಿ ಅಂತೆ!

ಚಿರ ಯೌವ್ವನದ ಹಂಬಲ!

ಇದು ಯಾರಿಗೆ ಇರುವುದಿಲ್ಲ?

ಒಂದು ಪರೀಕ್ಷೆ ಮಾಡಿ ನೋಡಿ.

ವಯಸ್ಸಾದವರನ್ನು ಹಿಡಿದು 'ನಿಮ್ಮ ವಯಸ್ಸೆಷ್ಟು' ಅನ್ನಿ.

ಹೇಳ್ತಾರೆ.

'ಆ ತರಹ ಕಾಣಲ್ವಲ್ಲ' ಅನ್ನಿ.

'ಅಂದ್ರೆ ಏನ್ರಿ ನಿಮ್ಮ ಮಾತಿನ ಅರ್ಥ? ಸುಳ್ಳು ಹೇಳ್ತೀನಿ ಅಂತಾನ' ದುಮುಗುಟ್ಟುತ್ತಾರೆ.

'ಅಲ್ಲ ಯು ಲುಕ್ ಸೋ ಯಂಗ್, ಅದಕ್ಕೆ ಹೇಳಿದೆ' ಅನ್ನಿ.

'ಬನ್ನಿ ಒಂದೆರಡು ಪೆಗ್ ಹಾಕೋಣ' ಅನ್ನಾರೆ!

ಕೊರವಂಜಿಯಲ್ಲಿ ರಾಶಿ ಬರೆದದ್ದು ನೋಡಿ:

ಎಂಭತ್ತು ವರ್ಷದ ಹಳೇ ಸಂಪ್ರದಾಯದ ಮುದುಕ

ಅಣಕ

ಎಚ್.ಎಲ್. ಕೇಶವಮೂರ್ತಿ

ರೊಬ್ಬರು ಕರಿ ಅಂಗಿ ತೊಟ್ಟು, ಜರಿ ರುಮಾಲು ಹಾಕಿ, ಪಂಚೆಕಚ್ಚೆ ಉಟ್ಟು, ರಂಗಿನ ಧಡಾವು ಮೆಟ್ಟಿಕೊಂಡು, ಮರಿಮಗನನ್ನು ಮಕ್ಕಳಗಾಡಿಯಲ್ಲಿ ಕೂರಿಸಿಕೊಂಡು, ತರಕಾರಿ ಮಾರುಕಟ್ಟೆಗೆ ಬೆಳಗ್ಗೆ ಹೋಗುತ್ತಿದ್ದರು.

ಹಾದಿಯಲ್ಲಿ ಸಿಕ್ಕಿದ ಸ್ನೇಹಿತರೊಬ್ಬರು ಮಗುವನ್ನು ನೋಡಿ, ಮುದ್ದಾಡಿ "ನಿಮ್ಮ ಕೊನೆ ಮಗು ಅಂತ ಕಾಣುತ್ತೆ" ಎಂದರು.

"ಹಾಗೆ ಅನುಮಾನ ಬರುವಾಗೆ ಇದೀನಲ್ಲ ಅಷ್ಟೆ ಸಂತೋಷ ನನಗೆ" ಎಂದರು ಮುದುಕರು!

ಇದು ಮನುಷ್ಯನ ಸ್ವಭಾವ.

ಮುದುಕಿಗೆ 'ಆಂಟಿ' ಅಂದರೆ ಕೇಳಿದ್ದಕ್ಕೆಲ್ಲ 'ಅಸ್ತು!'. ಮುದುಕರನ್ನು 'ಅಂಕಲ್' ಅಂದರೆ ಮೀಸೆ ಮರೆಲೆ ನಗು!

ಗ ನೋಡಿದ್ರೆ ಕಾಂಗೆಸ್ಸು ಕರಗ್ತಾ ಅದೆ, ದಳನೂ ಕರಗ್ತಾ ಅದೆ, ಮುಂದೆ ಜೆಪಿನೆ ಇರಂಗೆ ಕಾಣ್ತಾ ಅದೆ."

"ವಿ, ಇವುರಾಡವ ನೋಡಿದ್ರೆ ಭಾಳದಿನ ಇರಂಗೆ ಕಾಣದಿಲ್ಲ."

"ನಿಜ ಬುಡು, ಪಾಪ ಆಡಳತ ನ್ಯಡಸಕ್ಕೇ ಬರದಿಲ್ಲ ಕಣೊ ಉಗ್ರಿ. ಅದ್ನೆ ಮ ಎಡೂರಪ್ಪ ಗುಡಿ ಗುಂಡಾರನ್ನಲ್ಲ ಮಠಗಳಿಗೆ ಕೊಡ್ತಾ ಅವುನೆ. ರಿ ಜಾಗನೂ ಕೊಡ್ತಾಯಿದ್ದನಂತೆ."

"ಕೊಡ್ತಾ ಅವುನೆ ಅಂದ್ರೆ ಯಿರೋದ ಪಕ್ಷ ಏನು ಮಾಡ್ತಯಿದ್ದವುಲ? ಕೊಳ್ತಿ ಅಂತ ಕೇಳಕ್ಕಾಗದಿಲವೆ?"

"ಇವತ್ತು ವಿರೋಧಪಕ್ಷ ಎಲ್ಲಿದ್ದವು ದ್ವಡಪ್ಪ? ಆ ಕಾಂಗ್ರೆಸ್ ಪಕ್ಷಕ್ಕೆ ರೋಧ ಮಾಡಿ ಗೊತ್ತೆಯಿಲ್ಲ, ಬಿಜೆಪಿಗೆ ಆಡಳಿತ ನ್ಯಡಿಸಿ ಗೊತ್ತಿಲ್ಲ, ಘೋರ ಕೈಗೆ ಸಿಗಾಯ್ಕಂಡು ಕುಂತಿದ್ವಿವಿ. ಇನ್ನ ದ್ಯಾವೇಗೌಡ ತರಡಪ್ಪಂಟ್ ಡಿಕ್ಕಂದೋಗ್ಯವುನೆ. ಅವುನು ಯಾವಾಗ್ಲು ಅಂಗೆ ಅಲವೆ?"

"ಅಂಗೆ ಅಲವೆ ಅಂದ್ರೆ?"

"ಅಂದ್ರೆ, ಅವುನ ಪಾರ್ಟಿ ಜನ ಬಿಜೆಪಿಗೆ ಹೋಗದ ನೋಡಕ್ಯಾಗದೆ ಆ ಮಲ್ಲಿ ಬ್ಯಾರ ಇನ್ನೆನೊ ಮಾಡ್ತನೆ. ಪರೆಗ್ ಜಾಂಪಲ್ ಈಗ ಅವುನ ಮಾನಸಪುತ್ರ ಚೆನ್ನಿಗಪ್ಪ ಬಿಜೆಪಿಗೋಗದ ನೋಡಕ್ಯಾಗ್ದೆ ಡೆಲ್ಲಿಗೋದ."

"ಅಂಗರೆ ಚೆನ್ನಿಗಪ್ಪ ದ್ಯಾವೇಗೌಡ ಮಾನಸ ಪುತ್ರನೆ?"

"ಊ ಕಣೊ ಉಗ್ರಿ. ಮಾನಸಪುತ್ರ ಅಂದ್ರೆ ದ್ಯಾವೇಗೌಡನ ಮನಸು ಂಗದೋ ಅಂಗವುನೆ ಈ ಚೆನ್ನಿಗ."

"ಜಗ್ಗೇಸ ಚೆನ್ನಿಗಪ್ಪನ ಸಮಂದಿಯಂತಲ್ಲಾ?" ಎಂದಳು ಜಮ್ಮಿ.

"ಯಾರಕ್ಕ ನಿನಿಗೇಳಿದೋರು ಇಂತ ತಮಾಸಿಯಾ?"

"ಪಂಚಾತಿಲಿ ಅಂಗಂತ ಮಾತಾಡತಿದ್ರು, ಕಂಡ್ರ."

"ಊ ಕಣಕ್ಕ, ಜಗ್ಗೇಸನ ಸಿಸ್ಟರ್ರ ಚೆನ್ನಿಗಪ್ಪನಿಗೆ ಕೊಟ್ಟದೆ. ಅದ್ಕೆ ನೋಡು ನ್ನಿಗಪ್ಪನ ಮಗನ ಮಕನು, ಜಗ್ಗೇಸನ ಮಕನು ಒಂದೇ ತರ ಕಾಣ್ತದೆ."

"ಸ್ವಾದರ ಮಾವನ ಹೊತಗಂಡು ಹುಟ್ಟದೆ ಅನ್ನು."

"ಏ, ನೀನು ವಾಟಿಸ್ಸೆ ಹೇಳ್ತನೆ ಅಂತ ಅದ್ನೆ ನಂಬುತಿಯಲ್ಲೇ? ಚೆನ್ನಿಗಪ್ಪ ಡದೂ, ಜಗ್ಗೇಸಾಡದೂ ಒಂದೇ ತರ ಅಂತ ಯಾರೊ ಸಮಂದಿ ಡುಬುಟ್ಟವುರೆ ಕಣೆ" ಎಂದ ಉಗ್ರಿ.

"ನಿಜವೇನ್ಲ ವಾಟಿಸ್ಸೆ?" ಎಂದಳು ಜುಮ್ಮಿ.

"ಇಂತ ಮ್ಯಾಟ್ರು ನಿಜ ಇರತದೆ ಕಣಕ್ಕ. ಜಗ್ಗೇಸ ಬಿಜೆಪಿ ಸೇರಿಕಂಡು ಎಸ್ಆರ್‌ಟಿಸಿ ಗ್ಯಾರೇಜಿಗೆ ಮ್ಯಾನೇಜರ್ ಆದ. ಅದನ್ನ ನೋಡಿ ಚೆನ್ನಿಗಪ್ಪನ ಗನೂ ಬಿಜೆಪಿಗೋಯ್ತನೆ ಅಂದ್ರೆ ಏನರ್ಥ. ದೆ ಆರ್ ಆಲ್ ರಿಲೇಸನ್!"

" ?!"

■

ಎಲ್ಲರಿಗೂ ಚಿರಯೌವ್ವನದ ಹಂಬಲ! ಕ್ಯಾತರೀನ್‌ಗೂ ಅದೇ ಹಂಬಲ, ತಮ್ಮನಿಗೂ ಅದೇ ತುಡಿತ!

ಸುದ್ದಿ ವ್ಯಭಿಚಾರ

ಮಾಧ್ಯಮಗಳು ಸುಳ್ಳನ್ನು ಸತ್ಯವೆಂದು ಬಿಂಬಿಸುತ್ತಿರುವುದಕ್ಕೆ ಎರಡು ಉದಾಹರಣೆಗಳು.

ಅಮರ್‌ನಾಥ್ ಭೂವಿವಾದ ಇದೆಯ?

ಇಲ್ಲ. ಅಲ್ಲಿ ಯಾವ ಭೂಮಿಯೂ ವಿವಾದದಲ್ಲಿ ಇಲ್ಲ. ಯಾವುದೇ ಭೂಮಿಯನ್ನು ಸರ್ಕಾರ ಟ್ರಸ್ಟ್‌ಗೆ ನೀಡಿಲ್ಲ. ನೀಡಿರುವುದು ಆಡಳಿತಾತ್ಮಕ ಅಧಿಕಾರ ಮಾತ್ರ.

ಮತ್ತೆ ಯಾಕೆ ಈ ಗಲಭೆ?

ಇದುವರೆವಿಗೂ ಯಾತ್ರಿಗಳಿಗೆ ಸೌಲಭ್ಯವನ್ನು ಸರ್ಕಾರ ಹಾಗೂ ಸ್ಥಳೀಯರು ನಿರ್ವಹಿಸುತ್ತಿದ್ದರು. ಈಗ ಈ ಸೌಲಭ್ಯ ನೀಡಲು ಅಮರನಾಥ್ ಟ್ರಸ್ಟ್‌ಗೆ ವಹಿಸಲಾಗಿದೆ. ಅದಕ್ಕಾಗಿ 40 ಹೆಕ್ಟೇರ್ ಪ್ರದೇಶದ ಆಡಳಿತಾತ್ಮಕ ಹೊಣೆಯನ್ನು ಅವರಿಗೆ ಹೊರಿಸಲಾಗಿದೆ. ವಹಿಸಿ ಕೊಟ್ಟಿರುವುದು ಆಡಳಿತಾತ್ಮಕ ಹೊಣೆಯನ್ನು ಮಾತ್ರ, ಭೂಮಿಯ ಹಕ್ಕನ್ನಲ್ಲ. ಸರ್ಕಾರದ ಆಜ್ಞೆ ಇದನ್ನು ಸ್ಪಷ್ಟಪಡಿಸಿದೆ. ಆದರೆ ಇಲ್ಲದ ಅಧಿಕಾರವನ್ನು ಇದೆ ಎಂದು ಟ್ರಸ್ಟ್ ಮೊಂಡು ವಾದ ಮಾಡುತ್ತಿದೆ. ಹಿಂದೂ ಸಂಘಟನೆಗಳು ಇದನ್ನೇ ಹಿಡಿದು ಹಿಂದೂ-ಮುಸ್ಲಿಂ ಗಲಭೆಯನ್ನಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿವೆ. ಮಾಧ್ಯಮಗಳು ಇದಕ್ಕೆ ತುಪ್ಪ ಸುರಿಯುತ್ತಿವೆ.

ಈಗಾಗಲೇ ಯಾತ್ರೆಗೆ ಹೋಗಿರುವವರ ಸ್ಥಿತಿ ಏನು?

ಯಾತ್ರಾರ್ಥಿಗಳಿಗೆ ಕಷ್ಟಗಳ ಸರಮಾಲೆಯೇ ಎದುರಾಗಿದೆ. ಅವರಿಗೆ ಈಗ ರಕ್ಷಣೆ, ನೆರವು ನೀಡುತ್ತಿರುವವರು ಸ್ಥಳೀಯ ಮುಸಲ್ಮಾನರು!

ಈ ವಿವಾದದಲ್ಲಿ ಅರ್ಜಿದಾರರ ಪರ ವಕೀಲರಾದ ಕೆ. ವಿಲಾಸರನ್ ಪವಿತ್ರಗ್ರಂಥವನ್ನು ಉದ್ಧರಿಸಿ ಈ ಪವಿತ್ರ ಸೇತುವನ್ನು ಶ್ರೀರಾಮನು ಲಂಕೆಯ ರಾವಣನ ವಿರುದ್ಧ ನಡೆಸುವ ಯುದ್ಧದ ಮುನ್ನ ಕಟ್ಟಿಸಿದ; ಲಕ್ಷಾಂತರ ಜನರ ನಂಬಿಕೆ ಹಾಗೂ ಪೂಜಾರ್ಹವಾದ ಈ ಸೇತುವೆಯನ್ನು ಒಡೆಯುವುದು ಸಲ್ಲ ಎಂದರು. ಇದಕ್ಕೆ ಉತ್ತರಿಸಿದ ಸರ್ಕಾರಿ ಪರ ವಕೀಲರಾದ ಫಾಲಿನಾರಿಮನ್ ಅವರು 'ಯಾವುದಾದರೂ ಗ್ರಂಥವನ್ನು ಉದ್ಧರಿಸುವಾಗ ಅದರ ಪೂರ್ಣ ಪಾಠವನ್ನು ಉದಾಹರಿಸಬೇಕು. ಹೀಗೆ ಮಾಡಿದ್ದರೆ ಅವರೇ ಉದ್ಧರಿಸಿದ ಗ್ರಂಥ ರಾಮಾಯಣದಲ್ಲಿ ಶ್ರೀರಾಮ ನಿರ್ಮಿಸಿದ ಸೇತುವನ್ನು ಯುದ್ಧಾನಂತರ ಮೂರು ಭಾಗಗಳಾಗಿ ಒಡೆದು ಅದನ್ನು ಕೆಡುಪಲಾಯಿತು ಎಂದಿದೆ' ಎಂದರು.

ಇದು ನಡೆದ ವಾದ ವಿವಾದ. ಆದರೆ ಸುದ್ದಿ ಮಾಧ್ಯಮದವರು ಇದನ್ನೂ ತಿರುಚಿ 'ಸರ್ಕಾರ ತಾನು ನೀಡಿದ್ದ ಅಫಿಡವಿಟ್‌ಗೆ ತಿದ್ದುಪಡಿ ಮಾಡಿ, ಸೇತುವನ್ನು ಒಡೆಯದೆ ಬೇರೆ ಮಾರ್ಗದ ಬಗ್ಗೆ ಯೋಚಿಸುತ್ತಿದೆ' ಎಂದು ಬರೆದರು!

ಈ ಸಂಗತಿಗಳನ್ನು ಖ್ಯಾತ ಪತ್ರಕರ್ತ ಬಿ.ಜಿ. ವರ್ಗೀಸ್ ಅವರು ಬಯಲು ಮಾಡಿದ್ದಾರೆ.

ಈಗಿನ ಸಮಸ್ಯೆ, ಎಂದರೆ-ವಾಸ್ತವತೆಯನ್ನು ತಿಳಿಯುವ ಬಗೆ ಹೇಗೆ? ■

ಸಂಕ್ಷಿಪ್ತ ಪತ್ರ ವ್ಯವಹಾರ

ಮರೆಯುವ ಮುನ್ನ




■ ಪಿ. ಲಂಕೇಶ್ ನವೆಂಬರ್ 25, 1990

ಜಗತ್ತಿನ ಅತೀ ಚಿಕ್ಕ ಪತ್ರವ್ಯವಹಾರ ಯಾವುದು ಗೊತ್ತೆ? ಮೊನ್ನೆ 'ಗಿನ್ನೆಸ್' ದಾಖಲೆಯ ಪುಸ್ತಕ ತರಿಸಿ ಸುಮ್ಮನೆ ಹಾಳೆ ತಿರುವಿ ಹಾಕುತ್ತಿದ್ದೆ... ವಿಕ್ಟರ್ ಹ್ಯೂಗೋ ಹೆಸರು ಕಾಣಿಸಿತು. ಈತ ಹತ್ತೊಂಬತ್ತನೆ ಶತಮಾನದ ಪ್ರಚಂಡ ಕಾದಂಬರಿಕಾರ, ಕವಿ. ಈತನ ಕಾದಂಬರಿ 'ಲೆ ಮಿಜರಬಲ್ಸ್' ಹೆಸರನ್ನು ನೀವು ಕೇಳಿರಬಹುದು. ಜಗತಿನ ಜನಪ್ರಿಯ ಕಾದಂಬರಿಗಳಲ್ಲೊಂದು. ಈ ಕಾದಂಬರಿಯನ್ನು ಬರೆಯುವ ಹೊತ್ತಿಗೆ ವಿಕ್ಟರ್ ಹ್ಯೂಗೋ ಹೆಸರು ಗಳಿಸಿದ್ದ; ಅವನ ಪುಸ್ತಕವೊಂದು ಪ್ರಕಟವಾದೊಡನೆ ಸಾವಿರಾರು ಪ್ರತಿಗಳು ಮಾರಾಟವಾಗುತ್ತಿತ್ತು. 'ಲೆ ಮಿಸರಬಲ್ಸ್' ಕಾದಂಬರಿಯನ್ನು ಪ್ರಕಟಿಸಲು ಪ್ರಕಾಶಕರಿಗೆ ನೀಡಿ ಹ್ಯೂಗೋ ದೂರದೂರಿಗೆ ರಜೆ ಮೇಲೆ ಹೋದ. ಕಾದಂಬರಿ ಹೇಗೆ ಮಾರಾಟವಾಗುತ್ತಿದೆ ಎಂಬ ಬಗ್ಗೆ ಕುತೂಹಲವಾಯಿತು. ಕೂಡಲೆ ಪ್ರಕಾಶಕರಿಗೆ "?" ಎಂಬ ಪ್ರಶ್ನಾರ್ಥಕ ಚಿಹ್ನೆಯನ್ನು ಮಾತ್ರ ಬರೆದು ಕಳಿಸಿದ. ಪ್ರಕಾಶಕ ಕೂಡ ಖಾಟಿ. ಆತನ ಉತ್ತರ "!" ಇದರರ್ಥ ಪುಸ್ತಕ ಅದ್ಭುತವಾಗಿ ಮಾರಾಟವಾಗುತ್ತಿದೆ!

?!


ವಿಷಯ ಇಬ್ಬರಿಗೂ ತಿಳಿದಿದ್ದಾಗ ಮಾತುಗಳನ್ನು ಬಳಸಿ ವೇಳೆ, ಕಾಗದ ಪೋಲು ಮಾಡುವುದು ತಪ್ಪು ಎಂಬುದು ಇಬ್ಬರಿಗೂ ಗೊತ್ತಿತ್ತು.

ಗಿರೀಶ್ ಮನೆಗೆ ಕಲ್ಲು



ಗಿರೀಶ್ ಕಾರ್ನಾಡ್ ಮನೆಗೆ ಕಲ್ಲೆಸೆದಿದ್ದಾರೆ. ಗಿರೀಶ್ ಬೆಳಗ್ಗೆ ವಾಕ್ ಮಾಡುತ್ತಿದ್ದರೆ ಜಯನಗರದ ಜಾತೀಯ ಮುದಿಹದ್ದುಗಳು ಘೇರಾವ್ ಮಾಡಿವೆ.

ಸಂಕೋಚದ ಮನುಷ್ಯ ಗಿರೀಶ್ ಇದನ್ನು ಸುದ್ದಿ ಮಾಡಿಲ್ಲ. 29 ನೇ ತಾರೀಖು ಕೋಮುಕಾಗೆಗಳ ವಿರುದ್ಧ ನಾವೆಲ್ಲ ಪ್ರತಿಭಟಿಸಿದ್ದು ನಿಮಗೆ ನೆನಪಿರಬಹುದು. ರಾಜಕೀಯದಿಂದ ದೂರವಿದ್ದ ಗಿರೀಶ್ ಮೊತ್ತಮೊದಲ ಬಾರಿಗೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು; ಜಾತೀಯತೆಯ ಅಪಾಯವನ್ನು ಮನಗಂಡು ಎಲ್ಲರಿಗೆ ವಿವರಿಸತೊಡಗಿದರು. 29 ರಂದು ದಿಲ್ಲಿಗೆ ಹೋಗಬೇಕಾಗಿದ್ದ ಗಿರೀಶ್ ದಸ್ತಗಿರಿ ಆಗಲಾಗಲಿಲ್ಲ. ಆದರೂ ಆರೆಸ್ಸೆಸ್, ಬಿಜೆಪಿಗಳು ಸುಮ್ಮನಾಗಲಿಲ್ಲ. 29 ರ ರಾತ್ರಿಯೇ ಗಿರೀಶ್ ಮನೆಯ ಮೇಲೆ ಕಲ್ಲುಬೀಳತೊಡಗಿದವು. ಕಿಟಕಿಯ ಗಾಜು ಒಡೆದವು. ದಿಲ್ಲಿಯಿಂದ ಬಂದಮೇಲೆ ಒಂದು ಬೆಳಗ್ಗೆ ಗಿರೀಶ್ ವಾಕ್ ಮಾಡುತ್ತಿದ್ದಾಗ ಘೇರಾವು ಮಾಡಿದರು. ರೇಗಿದ ಗಿರೀಶ್ ಹೇಳಿದರು: "ಇದು ತಪ್ಪು. ನಮಗನ್ನಿಸಿದ್ದನ್ನು ನಾವು ಹೇಳುತ್ತೇವೆ, ನಿಮಗೆ ತೋಚಿದ್ದನ್ನು ನೀವು ಮಾಡಿ. ಹೀಗೆ ಮುತ್ತಿಗೆ ಹಾಕಿದರೆ ನೀವು ಅಪಾಯ ಎದುರಿಸುತ್ತೀರಿ".



ಪ್ರೇಮಕ್ಕಾಗಿ ಪ್ರತಿಭಟನೆ

ಒಬ್ಬಳು ಹುಡುಗಿ ಮೈಸೂರಿನಿಂದ ಒಂದು ಸುದ್ದಿ ತಂದಳು. ಅಲ್ಲಿ ಒಂದು ಪ್ರೇಮ ಪ್ರಕರಣ, ಒಬ್ಬ ಹುಡುಗ ಒಬ್ಬಳು ಹುಡುಗಿಯನ್ನು ಪ್ರೇಮಿಸಿ ಅವಳಿಗೆ ಕೈಕೊಟ್ಟು ಬೇರೊಬ್ಬರನ್ನು ಮದುವೆಯಾಗಲು ತೀರ್ಮಾನಿಸಿದ್ದಾನೆ. ಇದರಿಂದ ಮೈಸೂರಿನ ಮಹಿಳಾ ಸಂಘಟನೆಯೊಂದಕ್ಕೆ ರೇಗಿಹೋಗಿದೆ. ಪ್ರೇಮಿಸಿ ಮೋಸ ಮಾಡುವುದೆಂದರೇನು? ಆದ್ದರಿಂದ ಅವರು ಪ್ರತಿಭಟಿಸಲು, ಹುಡುಗ ತಾನು ಮೊದಲು ಪ್ರೇಮಿಸಿದ ಹುಡುಗಿಯನ್ನೇ ಮದುವೆಯಾಗಬೇಕೆಂದು ಒತ್ತಾಯಿಸಿ ಧರಣಿ ಮಾಡಲು ತೀರ್ಮಾನಿಸಿದ್ದಾರಂತೆ.

ಈ ವಿಷಯ ಹೇಳಿದ ಹುಡುಗಿ ಜೋರಾಗಿ ನಗತೊಡಗಿದಳು. "ಯಾಕೆ?" ಅಂದೆ. "ಇದು ವಿಚಿತ್ರ ಅನ್ನಿಸೋಲ್ಲವಾ?" ಅಂದಳು. "ಹೇಗೆ ವಿಚಿತ್ರ? ಅವನು ಹಾಗೆ ಮೋಸ ಮಾಡಬಹುದೆ?" ಅಂದೆ. "ಅದೆಲ್ಲ ಸರಿ, ಈ ಮಹಿಳಾಮಣಿಗಳು ಸೇರಿ ಬಲಾತ್ಕಾರ ಮಾಡಿ ಮದುವೆ ಮಾಡಬಹುದು. ಆದರೆ ಅವರು ಪ್ರೇಮಿಸುವಂತೆ ಮಾಡಲು ಸಾಧ್ಯವೆ? ಹೊಂದಿಕೊಂಡು ಸಂಸಾರ ಮಾಡುವಂತೆ ಮಾಡಲು ಸಾಧ್ಯವೆ?" ಅಂದಳು.

ಆಕೆ ನಗೆ ನಿಲ್ಲಿಸಲಿಲ್ಲ. "ಅವರಿಬ್ಬರೂ ಮದುವೆಯಾಗೋದು, ಮತ್ತೆ ಪ್ರೇಮಿಸೋದು, ಈ ಮಹಿಳಾಮಣಿಗಳ ಇನ್‌ಸ್ಪೆಕ್ಷನ್‌ನಲ್ಲಿ ಆದರ್ಶ ದಂಪತಿಗಳಾಗೋದು - ಎಲ್ಲಾ ಒಂದು ಕಾದಂಬರಿಗೆ ವಸ್ತುವಾಗಬಲ್ಲವು ಅಲ್ಲವಾ" ಅಂದಳು.

"ನನಗೆ ಗೊತ್ತಿಲ್ಲ, ಇವೆಲ್ಲ ವಿವಾದಾತ್ಮಕ ವಿಷಯಗಳು," ಎಂದು ತಪ್ಪಿಸಿಕೊಳ್ಳಲು ಯತ್ನಿಸಿ ಹೇಳಿದೆ, "ನನ್ನ ಪ್ರಕಾರ ಪ್ರೇಮಿಸಲು ಬಲಾತ್ಕರಿಸುವವರ, ಮದುವೆ ಏರ್ಪಡಿಸುವವರ ಜೀವನಚರಿತ್ರೆ ಎಷ್ಟು ಅರ್ಥ ಪೂರ್ಣವಾಗಬಲ್ಲದು....." ಅಂದೆ.

"ಪಕ್ಕದ ಮನೆ ಜಗಳ ಬಿಡಿಸೋಕೆ ಹೋಗಿ ಪ್ರೇಮದಲ್ಲಿ ಸಿಕ್ಕಿಹಾಕಿಕೊಂಡ ಒಂದು ಕತೆ ಹೇಳ್ಲಾ....?" ಎಂದು ಕುಲುಕುಲು ನಕ್ಕಳು.

ಮತ್ಸ್ಯ ಕನ್ಯೆ ಮತ್ತು ಕುಡುಕರ ಕಲ್ಪಿತ ಕತೆ


ಸ್ಪಾನಿಷ್ ಮೂಲ : ಪಬ್ಲೊ ನೆರುಡಾ

ಕನ್ನಡಕ್ಕೆ : ಸಾವಂತ್ರಿ

ಇವರೆಲ್ಲಾ ಗಂಡಸರು ಒಳಗಿದ್ದರು.
ಆಕೆ ಬಂದಳು, ಸಂಪೂರ್ಣ ನಗ್ನಳಾಗಿ.
ಕುಡಿಯುತ್ತಾ ಕೂತಿದ್ದ ಅವರೆಲ್ಲ ಅವಳ ನಗ್ನತೆಯತ್ತ ಉಗಿಯಲಾರಂಭಿಸಿದರು.
ಆಗ ತಾನೇ ನದಿಯಿಂದ ಬಂದಿದ್ದ ಆಕೆಗೆ ಏನೂ ಅರ್ಥವಾಗಲಿಲ್ಲ.
ದಾರಿತಪ್ಪಿದ್ದ ಮತ್ಸ್ಯಕನ್ಯೆಯಾಗಿದ್ದಳವಳು.
ಅವರ ಮೂದಲಿಕೆಗಳು ಮಿನುಗುತ್ತಿದ್ದ ಆಕೆಯ ದೇಹದ ಮೇಲೆ ಹರಿದವು.
ಬಂಗಾರದಂತಹ ಅವಳ ಮೊಲೆಗಳನ್ನೂ ತೋಯಿಸಿದವು.
ಕಣ್ಣೀರಿಗೆ ಅಪರಿಚಿತಳಾದ ಆಕೆ ಅಳಲಿಲ್ಲ.
ಬಟ್ಟೆಗಳ ಬಗ್ಗೆ ಗೊತ್ತಿರದಿದ್ದ ಆಕೆ ವಸ್ತ್ರಗಳನ್ನು ಧರಿಸಲಿಲ್ಲ.
ಉರಿಯುತ್ತಿದ್ದ ಸಿಗರೇಟ್ ತುಂಡುಗಳಿಂದ ಅವಳನ್ನು ಚುಚ್ಚಿದರು,
ಸುಡುತ್ತಿದ್ದ ಬೆಂಡುಗಳಿಂದ ಸುಟ್ಟರು,
ನಗುತ್ತಾ ಹೋಟೆಲ್ ನೆಲದ ಮೇಲೆ ಉರುಳಾಡಿದರು.
ಆದರೆ ಆಕೆ ಸೊಲ್ಲೆತ್ತಲಿಲ್ಲ, ಯಾಕೆಂದರೆ ಆಕೆಗೆ ಮಾತು ಬರುತ್ತಿರಲಿಲ್ಲ.
ದೂರದ ಪ್ರೀತಿಯಂತಿತ್ತು ಅವಳ ಕಣ್ಣುಗಳ ಬಣ್ಣ,
ಜೋಡಿ ಟೋಪ್ಯಾಸ್‌ನಂತಿದ್ದವು ಆಕೆಯ ಕೈಗಳು.
ಹವಳದ ಬೆಳಕಿನಲ್ಲಿ ಆಕೆಯ ತುಟಿಗಳು ಸದ್ದು ಮಾಡದೆ ಅಲುಗಾಡಿದವು,
ಕೊನೆಗೂ ಆಕೆ ಆ ಬಾಗಿಲನ್ನು ದಾಟಿ ಹೊರನಡೆದಳು.
ನದಿಯನ್ನು ಸೇರುತ್ತಿದ್ದಂತೆ ಆಕೆ ಪಾವನವಾದಳು,
ಮಳೆಯಲ್ಲಿ ಮಿನುಗುವ ಬಿಳಿ ಕಲ್ಲಿನಂತೆ ಮಿಂಚಿದಳು,
ಹಿಂದೆ ನೋಡದೆಯೇ ಆಕೆ ಮತ್ತೆ ಈಜಲಾರಂಭಿಸಿದಳು
ಈಜಿದಳು ಶೂನ್ಯದತ್ತ, ತನ್ನ ಸಾವಿನತ್ತ



ಒಂದು ಕಾಲಿನ್ ಹತ್ಯೆಗೆ ಸಿಕ್ಕಷ್ಟು ಪ್ರಚಾರ....!



ಒಂದಿದೀ ವಾರ ಜಗತ್ತಿನೆಲ್ಲೆಡೆ, ಮುಖ್ಯವಾಗಿ ಆಸ್ಟ್ರೇಲಿಯಾದಲ್ಲಿ ಭಾರಿ ಸುದ್ದಿ ಮಾಡಿದ್ದ 'ಕಾಲಿನ್' ಈಗತಾನೆ ಹತ್ಯೆಗೊಳಗಾಗಿದೆ.

ದಯಾ ಮರಣ, ಅಂದರೆ mercy killing ಅನ್ನುತ್ತಾರಲ್ಲ ಅಂತ ಸಾವನ್ನು ಈ ಕಾಲಿನ್‌ಗೆ ನೀಡಲಾಯಿತು.

ಅಂದಹಾಗೆ ಈ ಕಾಲಿನ್ ಒಂದು ವೇಲ್. ಹುಟ್ಟಿದ ಒಂದೆರಡು ವಾರಗಳಲ್ಲೇ ತಾಯಿಯಿಂದ ತಪ್ಪಿಸಿಕೊಂಡು ಅಲೆಯುತ್ತಿದ್ದ ತಿಮಿಂಗಿಲ ಜಾತಿಗೆ ಸೇರಿದ ಪ್ರಾಣಿ.

ಅಂಟಾರ್ಟಿಕಾ ಹಾಗೂ ಆಸ್ಟ್ರೇಲಿಯಾದ ಪೂರ್ವ ಸಮುದ್ರದಲ್ಲಿ ಬೃಹತ್ ಗಾತ್ರದ ವೇಲ್ ಮೀನುಗಳಿಗೆ ಇದು ವಲಸೆ ಹಾಗೂ ಪ್ರಣಯಕಾಲ. ಪ್ರತಿ ವರ್ಷ ಹೊಸ ಸಂಗಾತಿಯೊಂದಿಗೆ ಅಂಟಾರ್ಟಿಕದಿಂದ ಹೊರಟು (ಅಂದಹಾಗೆ ಪೆಂಗ್ವಿನ್‌ಗಳು ಮಾತ್ರ ತಮ್ಮ ಹಳೇ ಸಂಗಾತಿಗಳನ್ನೇ ಪತ್ತೆಹಚ್ಚಿ ಸೀಜನಲ್ ಸಂಸಾರ ಹೂಡುತ್ತವಂತೆ ನಿಜವೆ?) ಹನಿಮೂನ್ ಆಚರಿಸಿಕೊಳ್ಳುತ್ತಾ ಜಪಾನ್ ಸಮುದ್ರ ಹಾದು ಆಸ್ಟ್ರೇಲಿಯಾದತ್ತ ಬರುವ ಈ ವೇಲ್‌ಗಳು ಅಲ್ಲಿ ಮರಿ ಹಾಕುತ್ತವೆ. ನಂತರ ತಕ್ಷಣ ಅಂಟಾರ್ಟಿಕಾದತ್ತ ಮರು ಪಯಣ ಆರಂಭ.

ಅಂಥ ಒಂದು ಯಾತ್ರೆ ಹೊರಟಾಗಲೇ ಇರಬೇಕು ಒಂದು ಪುಟ್ಟ ವೇಲ್ ಮರಿ ಅಮ್ಮನಿಂದ ತಪ್ಪಿಸಿಕೊಂಡಿದೆ. ಸಾವಿರಾರು ಕಿಲೋಮೀಟರ್ ವಿಸ್ತಾರದ ಸಮುದ್ರದಲ್ಲಿ ಈ ಮರಿ ಜೀವ ಅದ್ಹೇಗೆ ತಾನೆ ಅಮ್ಮನನ್ನು ಹುಡುಕೀತು? ಈ ನಡುವೆ ಅದಕ್ಕೆ ಹಸಿವಾಯಿತೇನೊ, ಸಿಡ್ನಿ ಬಂದರಿನ ಬಳಿ ತೇಲುತ್ತಿದ್ದ ಒಂದು ದೊಡ್ಡ ದೋಣಿಯ ಬಳಿ ಬಂದು ಹಾಲು ಕುಡಿಯಲು ಪ್ರಯತ್ನಿಸುವಂತೆ ವರ್ತಿಸಿತು. ಆ ಹಡಗು ಅದಕ್ಕೆ ಅಮ್ಮನಂತೆ ಕಾಣಿಸಿರಬೇಕು. ಕೂಡಲೆ ಇದು ಸುದ್ದಿಯಾಯಿತು. ಎಲ್ಲಾ ತರದ ತಜ್ಞರು, ಪರಿಸರವಾದಿಗಳು, ಮೀಡಿಯಾದವರೆಲ್ಲಾ ಸೇರಿಕೊಂಡು ಹಾಹಾಕಾರ ವೆಬ್ಬಿಸಿದರು. ಅದಕ್ಕೆ ಕಾಲಿನ್ ಅಂತ ಹೆಸರೂ ಇಟ್ಟರು. ಕೆಲವರು ಹತ್ತಿರ ಹೋಗಿ ನೋಡಿದಾಗ ಆ ವೇಲ್ ಮರಿಗೆ ಶಾರ್ಕ್ ಮೀನುಗಳು ಕಚ್ಚಿ ಗಾಯ ಮಾಡಿರುವುದು ಕಾಣಿಸಿತು. ಅಮ್ಮ ಕಳೆದು ಹೋಗಿದ್ದಾಳೆ. ಜೊತೆಗೆ ಹಾಲಿಲ್ಲ, ಕಣ್ಣುಬಿಟ್ಟ ತಕ್ಷಣ ಶತ್ರುಗಳ ಕಾಟ ಬೇರೆ... ಪಾಪ ಕಾಲಿನ್ ಪರಿಸ್ಥಿತಿ ಹೇಗಿರಬೇಡ ಯೋಚಿಸಿ.

ಮೊನ್ನೆಯ ಹೊತ್ತಿಗೆ ಕಾಲಿನ್ ಜಾಗತಿಕ ಸುದ್ದಿಯಾಗಿ ಹೋಗಿತ್ತು, ಆದರೆ ಅದನ್ನು ಆಳ ಸಮುದ್ರದತ್ತ ತಳ್ಳುವ ಪ್ರಯತ್ನಕ್ಕೆ ಯಶ ಸಿಗಲಿಲ್ಲ, ಹುಟ್ಟಿದಾಗಲೇ ಎರಡು ಸಾವಿರ ಕೇಜಿ ತೂಕವಿದ್ದ ಕಾಲಿನ್ ಊಟವಿರದೆ, ನಿತ್ರಾಣಗೊಂಡು ಉಸಿರಾಡಲೂ ಕಷ್ಟಪಡುತ್ತಿತ್ತು, ಅದರ ಸಾವು ಖಚಿತವೆಂಬಂತಿತ್ತು.

ಆಗ ಕೆಲ ತಜ್ಞರು ಕಾಲಿನ್‌ಗೆ ಮರಣದಂಡನೆ ವಿಧಿಸಿ ಅದರ ಸಂಕಟ ಕೊನೆಗಾಣಿಸುವ ತೀರ್ಮಾನಕ್ಕೆ ಬಂದರು. ಆದರೆ ಜನ ಜಗಳಕ್ಕಿಳಿದರು. ಇದೊಂದು ಕ್ರೌರ್ಯ ಎಂದು ವಾದಿಸಿದರು. ಯಾರೇನೇ ಹೇಳಿದರೂ ಕಿವಿಗೊಡದೆ ಮೊನ್ನೆ ಕಾಲಿನ್‌ಗೆ ದೂರದಿಂದಲೇ ಅನಸ್ತೇಷಿಯಾ ಇಂಜಕ್ಟ್ ಮಾಡಿ ಹತ್ಯೆ ನಡೆಸಲಾಗಿದೆ.

ನೀವಿದನ್ನು ಮಾನವೀಯತೆ ಅನ್ನುತ್ತೀರಾ ಅಥವಾ ಅದರಲ್ಲಿ ಕ್ರೌರ್ಯ ಕಾಣಿಸುತ್ತದೆಯಾ ಹೇಳಬಲ್ಲಿರಾ?

ಜೊತೆಗೆ ಇನ್ನೊಂದು ಪ್ರಶ್ನೆ : ಇದೇ ಆಸ್ಟ್ರೇಲಿಯಾ ದೇಶದ ಸೇನೆ ಇರಾಕ್ ಮೇಲೆ ದಾಳಿ ಮಾಡಿ ಈಗ ಲಕ್ಷಾಂತರ ಇರಾಕಿ ಮಕ್ಕಳಿಗೆ ಸಾವು ತರುತ್ತಿದೆ.

ಒಂದೇ ಒಂದು ತಬ್ಬಲಿ ಮೀನಿನ ಮರಿ ಇಷ್ಟೆಲ್ಲಾ ಸುದ್ದಿ ಮಾಡಿ ಜನರ ಗಮನ ಸೆಳೆಯಬಲ್ಲದಾದರೂ ಅದೇ ಲಕ್ಷಾಂತರ ಇರಾಕಿ ಮಕ್ಕಳ ತಬ್ಬಲಿತನ ಯಾರ ಗಮನವನ್ನು ಸೆಳೆಯುವುದಿಲ್ಲ ಯಾಕೆ?

ಪೊಲೀಸರ ಅಮೆರಿಕನ್ ಗುಲಾಮಗಿರಿ



ಸ್ವತಂತ್ರ ಭಾರತದ ಪೊಲೀಸು ಇವತ್ತು ಹೇಗೆ ಬೇಕಾದರೂ ವರ್ತಿಸಬಲ್ಲರು. ಗೋಲಿಬಾರು, ಲಾಕಪ್ ಡೆತ್, ಅಮಾಯಕರಿಗೆ ಹಿಂಸೆ ಕೊಡುವುದೆಲ್ಲಾ ಅವರಿಗೆ ಮಾಮೂಲು. ಮೊನ್ನಿನ ಬೆಂಗಳೂರು ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಇದುವರೆಗೂ 400 ಮಂದಿಯನ್ನು ಅನುಮಾನದ ಮೇಲೆ ಎಳೆದುಕೊಂಡು ಹೋಗಿ ವಿಚಾರಣೆ ಮಾಡಿದ್ದಾರೆ.

ಅವರೆಲ್ಲರೂ ಮುಸ್ಲಿಂ ಯುವಕರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ ಬಿಡಿ.

ಆದರೆ ಅಹಮದಾಬಾದ್ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಮುಂಬೈ ವಾಸಿ ಕೆನ್ನೆತ್ ಹೇವುಡ್‌ನನ್ನು ಇತ್ತೀಚೆಗೆ ಭಯೋತ್ಪಾದನಾ ನಿಗ್ರಹ ದಳದವರು ಬಂಧಿಸಿ ವಿಚಾರಣೆ ನಡೆಸಿದ್ದರು.

ಈ ಹೇವುಡ್ ಒಬ್ಬ ಅಮೆರಿಕನ್.

ಅಹಮದಾಬಾದ್‌ನಲ್ಲಿ ಬಾಂಬ್ ಸ್ಫೋಟಗೊಳ್ಳುವ ಕೆಲವೇ ನಿಮಿಷಗಳಿಗೂ ಮುನ್ನ ದೇಶದ ಪ್ರಮುಖ ಸುದ್ದಿ ಸಂಸ್ಥೆಗಳಿಗೆ 'ಸ್ಫೋಟವಾಗಲಿದೆ' ಎಂಬ ಈ-ಮೇಲ್ ಹೋಗಿತ್ತಲ್ಲ, ಅದು ಹೊರಟದ್ದೇ ಈ ಕೆನ್ನೆತ್‌ನ ಲ್ಯಾಪ್‌ಟಾಪ್‌ನಿಂದ ಎಂದು ಪತ್ತೆಯಾಗಿತ್ತು, ಆದರೆ ಮಹದಾಶ್ಚರ್ಯ ಏನೆಂದರೆ ಅವನು 'ಶಂಕಿತ'ನೆಂದು ತೀರ್ಮಾನವಾದ ಮೇಲೆ ಹೇವುಡ್ ಭಾರತ ಬಿಟ್ಟು ಮೊನ್ನೆ ಅಮೆರಿಕಗೆ ಹೋಗಲು ಬಿಟ್ಟುಕೊಟ್ಟಿದ್ದಾರೆ ನಮ್ಮ ಪೊಲೀಸರು. ಅಮೆರಿಕಾ ಮೂಲದ ಕ್ಯಾಂಬಲ್ ವೈಟ್ ಎಂಬ ಕಂಪನಿಯ ಮುಂಬೈ ಬ್ರಾಂಚಿನಲ್ಲಿ ಈ ಹೇವುಡ್ ಕೆಲಸ ಮಾಡುತ್ತಿದ್ದ.

ಇಂಡಿಯನ್ ಮುಜಾಹಿದ್ದೀನ್ ಹೆಸರಲ್ಲಿ ಹೇವುಡ್ ಈಮೇಲ್ ಕಳಿಸಿರುವುದು ಸಾಬೀತಾದ ಮೇಲೂ ಪೊಲೀಸರು ಅವನನ್ನು ಹಿಡಿದು ಕೂರಿಸದೆ ಅದು ಹೇಗೆ ದೇಶಬಿಟ್ಟು ಹೋಗಲು ಅವಕಾಶ ಕೊಟ್ಟರು?

ಅಮೆರಿಕಾ ಪ್ರಜೆ ನಮ್ಮ ದೇಶದ ಕಾನೂನಿಗಿಂತ ದೊಡ್ಡವನಾ?

ಕೆಲತಿಂಗಳ ಹಿಂದೆ ಬೆಂಗಳೂರಿನ ಫೈವ್‌ಸ್ಟಾರ್ ಹೋಟೆಲ್‌ನಲ್ಲಿ ಅಮೆರಿಕಾದ ಆಲ್‌ಫ್ರೆಡ್ ಲ್ಯಾರಿ ಎಂಬುವನು ಯಾರ ಮೇಲೊ ಅತ್ಯಾಚಾರಕ್ಕೆ ಯತ್ನಿಸಿ ಸಿಕ್ಕಿಬಿದ್ದಿದ್ದ. ಆದರೆ ಏನೂ ನಡೆದೇ ಇಲ್ಲವೆಂಬಂತೆ ಆತನೂ ವಿಮಾನವೇರಿ ಅಮೆರಿಕಾಗೆ ಹೋಗಲು ಪೊಲೀಸರು ಬಿಟ್ಟುಕೊಟ್ಟಿದ್ದರು.

ಒಂದು ವೇಳೆ ಈ ಬಾಂಬ್ ಸ್ಫೋಟದ ಈಮೇಲ್ ಅನ್ನು ಮುಸ್ಲಿಂ ಒಬ್ಬ ಕಳಿಸಿದ್ದನೆಂದು ಸಾಬೀತಾಗಿದಿದ್ದರೆ ಪೊಲೀಸರು ಇದೇರೀತಿ ನಿಷ್ಕ್ರಿಯರಾಗುತ್ತಿದ್ದರಾ ಅಂತ?

ಬಾಂಬ್ ಸ್ಫೋಟ, ಸಿಮಿ ಸಂಚು, ಐಎಸ್‌ಐ... ಹೀಗೆ ನೂರೆಂಟು ಊಹಾಪೋಹದ ವರದಿ ಬರೆಯುತ್ತಿರುವ ನಮ್ಮ ಕನ್ನಡ ಮೀಡಿಯಾಗಳು ಹೇವುಡ್ ಸಿಕ್ಕಿಬಿದ್ದ ಸುದ್ದಿಯನ್ನು ಮರೆಮಾಚಿದ್ದೇಕೆ?

ಅವರಿಗೂ ಸತ್ಯ ಬೇಕಿಲ್ಲವೆ?

ಬಿಡಿ ಚಿತ್ರಗಳು

• ಈಶ

ಒಂದು ಪತ್ರ

ಗಣಿಗಾರಿಕೆಯಿಂದ ನಾಡಿನ ಸಂಪತ್ತು ಕಬಳಿಕೆ

ಗಣಿಗಾರಿಕೆ ಎಂಬುದು ನಿನ್ನೆ ಮೊನ್ನೆಯಿಂದ ನಡೆಯುತ್ತಿರುವ ಉದ್ಯಮವಲ್ಲ, ಅದಕ್ಕೆ ದಶಕಗಳ ಇತಿಹಾಸವಿದೆ.

ಕಬ್ಬಿಣ, ಮ್ಯಾಂಗನೀಸ್, ಬಾಕ್ಸೈಟ್, ಮ್ಯಾಗ್ನಾಸೈಟ್, ಕ್ರೋಮೈಟ್, ಸುಣ್ಣದಕಲ್ಲು, ಪಿರೈಡ್, ಆಂಟಿಮೋನಿ, ತಾಮ್ರ, ಸೀಸ, ಸತು, ಬೆಳ್ಳಿ, ಆಸ್ಬೇಸ್ಟಸ್, ಜೇಡಿಮಣ್ಣು ಮುಂತಾದ ಬಗೆಯ ಖನಿಜ ಸಂಪತ್ತುಗಳು ಕರ್ನಾಟಕದಲ್ಲಿವೆ. ಆದರೆ ಈ ಹೇರಳ ಸಂಪತ್ತನ್ನು ಸಂಪೂರ್ಣವಾಗಿ ಬಗೆಯಲು ಗಣಿಗಾರಿಕೆಗಳು ಎದ್ದು ನಿಂತಿವೆ.

ಹಿಂದೆ ಅತ್ಯಲ್ಪ ಪ್ರಮಾಣದಲ್ಲಿ ಗಣಿಗಾರಿಕೆಗಳು ನಡೆಯುತ್ತಿದ್ದವು. ಕತ್ತೆಗಳ ಬೆನ್ನಮೇಲೆ ಅದಿರುಗಳನ್ನು ಹೊರಿಸಿ ಮಾರುಕಟ್ಟೆಗೆ ಸಾಗಿಸಲಾಗುತ್ತಿತ್ತು, ಆಗ ಅದಿರುಗಳಿಗೆ ಅಂಥ ಬೇಡಿಕೆಯೂ ಇರಲಿಲ್ಲ, ಕಾಲಾಂತರದಲ್ಲಿ ಅದಿರುಗಳು ವಿದೇಶಗಳಿಗೆ ರಫ್ತಾಗತೊಡಗಿದಾಗ ಶ್ರೀಮಂತರ ಕಣ್ಣುಗಳು ಗಣಿಗಾರಿಕೆಗಳತ್ತ ಹೊರಳಿದವು. ಅಗತ್ಯಕ್ಕಿಂತ ಹೆಚ್ಚಾಗಿ ಭೂಮಿಯನ್ನು ಬಗೆಯುವ ಕೆಲಸ ಪ್ರಾರಂಭವಾಯಿತು. ಎಲ್ಲ ಕಡೆಗಳಲ್ಲೂ ದೊಡ್ಡ ದೊಡ್ಡ ಗಣಿಗಾರಿಕೆ ಎದ್ದು ನಿಲ್ಲತೊಡಗಿದವು. ಈ ಗಣಿಗಾರಿಕೆ ನಡೆಯುವ ಪ್ರದೇಶಗಳ ಸುತ್ತಮುತ್ತಲು ವಾಸಿಸುವ ಜನರ ಬದುಕು ಹೇಳತೀರದಾಗಿದೆ. ಬರೀ ಮಲಿನ ವಾತಾವರಣದಿಂದ ಕಲುಷಿತಗೊಂಡ ಆಮ್ಲಜನಕದ ಸೇವನೆಯಿಂದ ಶ್ವಾಸಕೋಶದ ತೊಂದರೆಗಳಿಂದ ಹಿಡಿದು, ಕ್ಯಾನ್ಸರ್, ಕ್ಷಯ, ರಕ್ತಹೀನತೆಯಂಥ ಭಯಂಕರ ಕಾಯಿಲೆಗಳು ಆ ಪ್ರದೇಶಗಳಲ್ಲಿ ಹರಡುತ್ತವೆ.

ಅಲ್ಲದೆ ಈ ಪ್ರದೇಶಗಳಲ್ಲಿ ಸರಿಯಾದ ರಸ್ತೆಗಳಿರುವುದಿಲ್ಲ, ನಿತ್ಯವೂ ಅದಿರು ಸಾಗಿಸುವ ಲಾರಿಗಳ ಹಾವಳಿಯಿಂದ ರಸ್ತೆಗಳೆಲ್ಲವೂ ಹದಗೆಟ್ಟು ಹೋಗಿರುತ್ತವೆ. ಉದಾಹರಣೆಗೆ ಬಳ್ಳಾರಿ ನಗರ ಹಾಗೂ ಸಂಡೂರು ಪಟ್ಟಣಗಳ ಮೂಲಕ ಪ್ರತಿನಿತ್ಯ 5 ಸಾವಿರಕ್ಕೂ ಹೆಚ್ಚು ಲಾರಿಗಳು ಅಪಾರ ಪ್ರಮಾಣದ ಅದಿರು ತುಂಬಿಕೊಂಡು ಹೋಗುತ್ತವೆಯೆಂದರೆ, ಅಲ್ಲಿನ ರಸ್ತೆಗಳ ಸ್ಥಿತಿ ಹೇಗಿರಬೇಡವೆಂದು ನೀವೇ ಊಹಿಸಿ. ಹೆಲಿಕಾಪ್ಟರ್‌ಗಳಲ್ಲಿ ಓಡಾಡುವ ಗಣಿಧಣಿಗಳಿಗೆ ಈ ಸಮಸ್ಯೆಗಳು ಹೇಗೆ ಕಾಣಿಸಬೇಕು?

ಈ ಗಣಿಗಾರಿಕೆಗಳು ಕಾನೂನಿನ ನಿಯಮಗಳನ್ನಾದರೂ ಪಾಲಿಸುತ್ತಿವೆಯಾ? ಇಲ್ಲ, ಕೆಲವೆಡೆಗಳಲ್ಲಿ ಪೊಲೀಸ್ ಇಲಾಖೆ ಹಾಗೂ ಗಣಿ ಇಲಾಖೆಗಳು ಕಾನೂನುಬಾಹಿರವೆಂದು ನೋಟೀಸ್ ನೀಡಿದ್ದರೂ ಅದನ್ನು ಲೆಕ್ಕಿಸದೆ ಹಗಲುರಾತ್ರಿ ಎನ್ನದೆ ಅಕ್ರಮ ಗಣಿಗಾರಿಕೆಗಳು ನಡೆಯುತ್ತಲೇ ಇವೆ.

ಇತ್ತೀಚೆಗೆ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಸುಮಾರು 20 ಕೋಟಿ ರೂ. ಮೌಲ್ಯದ 1 ಲಕ್ಷ ಟನ್ ಕಬ್ಬಿಣದ ಅದಿರನ್ನು ಗಣಿ ಇಲಾಖೆ ವಶಪಡಿಸಿಕೊಂಡಿತ್ತು, ಆದರೆ ಗಣಿ ಮಾಲೀಕರಿಂದ ಕಪ್ಪ ಪಡೆದು ಸುಮ್ಮನಾಗುವ ಇಲಾಖೆಗಳು ಅದೆಷ್ಟಿವೆಯೋ.

ಒಂದು ಕಡೆ ಅದಿರು ಗಣಿಗಾರಿಕೆಗಳು ಪರಿಸರಕ್ಕೆ ಮಾರಕವಾಗಿದ್ದರೆ, ಉತ್ತರ ಕರ್ನಾಟಕ ಹಾಗೂ ಪಶ್ಚಿಮ ಘಟ್ಟಗಳಲ್ಲಿ ದೊಡ್ಡ ದೊಡ್ಡ ಕಲ್ಲುಕ್ವಾರಿಗಳಲ್ಲಿ ಅನುಮತಿಯಿಲ್ಲದೆ ಬಾರೀ ಪ್ರಮಾಣದ ಸ್ಫೋಟಕಗಳಿಂದ ಬಂಡೆಗಳನ್ನು ಸಿಡಿಸಿ, ತುಂಡರಿಸಿ ಬೇಕಾದ ರೀತಿಯಲ್ಲಿ ಬಳಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಮೀಸಲು ಅರಣ್ಯದೊಳಗಿರುವ ಕಲ್ಲುಗಳನ್ನು ಸಿಡಿಸಬಾರದೆಂಬ ಕಾನೂನಿದ್ದರೂ ಈ ಕಲ್ಲುಗಣಿಗಾರಿಕೆ ಮೀಸಲು ಅರಣ್ಯಗಳಲ್ಲೇ ಹೆಚ್ಚಾಗಿ ನಡೆಯುತ್ತಿವೆ. ಇದರಿಂದ ಕಾಡುಗಳು ನಾಶವಾಗುವುದರೊಂದಿಗೆ, ಜೀವಸಂಕುಲವೂ ನಾಶವಾಗುತ್ತಿವೆ. ಕಲ್ಲು ಸಿಡಿಸುವ ಸ್ಫೋಟಕಗಳ ಶಬ್ದಕ್ಕೆ ವನ್ಯಜೀವಿಗಳು ಮಾಯವಾಗುತ್ತಿವೆ.

ಮೂರು ವರ್ಷಗಳ ಹಿಂದೆ ಕುದುರೆಮುಖ ನೆಲದ ಒಡಲು ಬಗೆದು ಕಬ್ಬಿಣದ ಅದಿರು ತೆಗೆಯುತ್ತಿದ್ದ ಕುದುರೆಮುಖ ಐರನ್ ಓರ್ ಕಂಪೆನಿ ಅಲ್ಲಿನ ಕಾಡನ್ನು ಕಬಳಿಸುವ ಹಂತಕ್ಕೆ ತಲುಪಿತ್ತು, ಆದರೆ ಅಲ್ಲಿನ ರೈತರು, ಜನಪರ ಹೋರಾಟಗಾರರು, ಪರಿಸರವಾದಿಗಳು ನಿರಂತರ ಪ್ರತಿರೋಧ ವ್ಯಕ್ತಪಡಿಸುತ್ತಿದ್ದರಿಂದ ಆ ಕಂಪನಿಯನ್ನೇ ಸರ್ಕಾರ ಸ್ಥಗಿತಗೊಳಿಸಬೇಕಾಯಿತು. ಇದು ಜನಸಂಘಟಿತ ಹೋರಾಟಕ್ಕೆ ಸಂದ ಜಯವೆಂದೇ ಹೇಳಬಹುದು.

ಇವತ್ತು ಗಣಿಗಾರಿಕೆಯನ್ನು ಉದ್ಯಮವನ್ನಾಗಿ ಆರಂಭಿಸಿಕೊಂಡ ವ್ಯಕ್ತಿಗಳು ಇಡೀ ರಾಜ್ಯದ ರಾಜಕೀಯ ವ್ಯವಸ್ಥೆಯನ್ನೇ ನಿಯಂತ್ರಿಸತೊಡಗಿದ್ದಾರೆ. ಕೆಲ ರಾಜಕಾರಣಿಗಳಂತೂ ಈ ಗಣಿಧಣಿಗಳು ನೀಡುವ ಹಣಕ್ಕೆ ಜೊಲ್ಲುಸುರಿಸುತ್ತಾ ಅವರ ಹಿಂದೆ ಹೋಗುತ್ತಿದ್ದಾರೆ. ಕೆಲವರು ತಮ್ಮ ಪಕ್ಷವನ್ನೇ ತೊರೆದು ಬಿಜೆಪಿ ಪಕ್ಷವನ್ನು ಸೇರುತ್ತಿದ್ದಾರೆ.

ಇಂತಹ ರಾಜಕೀಯಕ್ಕೆ ಬೇಕಿರುವುದು ಹಣವೇ ಹೊರತು ಪ್ರಜಾತಂತ್ರ ವ್ಯವಸ್ಥೆಯಲ್ಲ, ಈ ಗಣಿದಣಿಗಳಿಗೆ ಬರುವ ದಿನಗಳಲ್ಲಿ ಜನರೇ ಬುದ್ಧಿ ಕಲಿಸಬೇಕಿದೆ.

-ಕಿರುಗುಂದ ರಫೀಕ್,ಮೂಡಿಗೆರೆ

ಜೀನಿಬಿ ಕತೆ

ಬೆಳವಣಿಗೆ

ಖ್ಯಾತ ಅರ್ಥಶಾಸ್ತ್ರಜ್ಞರೊಬ್ಬರು ಬೆಳವಣಿಗೆ ಕುರಿತು ತಮ್ಮ ನೀಲನಕ್ಷೆಯನ್ನು ವಿವರಿಸುತ್ತಿದ್ದಾಗ ಗುರುಗಳು ಏಕಾಗ್ರತೆಯಿಂದ ಕೇಳಿಸಿಕೊಂಡರು.

ಅರ್ಥಶಾಸ್ತ್ರಜ್ಞರು ತಮ್ಮ ಮಾತನ್ನು ನಿಲ್ಲಿಸಿದಾಗ "ಬೆಳವಣಿಗೆಯೇ ಎಲ್ಲಾ ಅರ್ಥಶಾಸ್ತ್ರ ಸಿದ್ಧಾಂತದ ಎಣಿಕೆಯಾಗಬೇಕೆ?" ಎಂದು ಗುರುಗಳು ಕೇಳಿದರು.

"ಹೌದು. ಎಲ್ಲಾ ಬೆಳವಣಿಗೆಯೂ ಆಶಾದಾಯಕವೇ" ಎಂದು ಅರ್ಥಶಾಸ್ತ್ರಜ್ಞ ಉತ್ತರಿಸಿದರು.

"ಆದರೆ ಜೀವವನ್ನೇ ತೆಗೆದುಕೊಳ್ಳುವ ಕ್ಯಾನ್ಸರ್ ಜೀವಕೋಶದ ಸಿದ್ಧಾಂತವೂ ಬೆಳವಣಿಗೆಯೇ ಆಗಿದೆಯಲ್ಲವೆ?" ಎಂಬ ಗುರುಗಳ ಪ್ರಶ್ನೆಗೆ ಅರ್ಥಶಾಸ್ತ್ರಜ್ಞನಲ್ಲಿ ಉತ್ತರವಿರಲಿಲ್ಲ.



ಪೂಜಾಳ ಮುಂದೆ ಸೋತುಹೋಯಿತೇ ರಮ್ಯಾ?




ರಮ್ಯ ಮತ್ತು ಪೂಜಾ ಗಾಂಧಿ ನಡುವಿನ ಪರೋಕ್ಷ ಸ್ಟಾರ್ ವಾರ್ ಈಗ ಗಾಂಧಿನಗರದಲ್ಲಿ ಸುದ್ದಿ ಮಾಡುತ್ತಿದೆಯಲ್ಲದೆ ಈ ವಾರ್‌ನ ಮೊದಲ ಸುತ್ತಿನಲ್ಲಿ ಪೂಜಾ ಗಾಂಧಿ ಗೆದ್ದಿದ್ದಾಳೆ ಎಂದೇ ಕಾನಿಷ್ಠಾದ ಚಿತ್ರ ಬ್ರಹ್ಮರು ತರ್ಕಿಸುತ್ತಿದ್ದಾರೆ. ಅದಕ್ಕೆ ಕಾರಣ ಇವರಿಬ್ಬರು ನಟಿಸಿರುವ 'ತಾಜ್ ಮಹಲ್' ಮತ್ತು 'ಅಂತೂ ಇಂತೂ ಪ್ರೀತಿ ಬಂತೂ' ಎಂಬ ಎರಡು ಚಿತ್ರಗಳು.

ಪೂಜಾ ನಾಯಕಿಯಾದ 'ತಾಜ್ ಮಹಲ್' ಚಿತ್ರದ ನಾಯಕ ಅಜಯ್. ಆತ ಈ ಹಿಂದೆ ನಟಿಸಿದ್ದ 'ಎಕ್ಸ್‌ಕ್ಯೂಸ್ ಮಿ' ಚಿತ್ರ ಹಿಟ್ ಆಗಿದ್ದರೂ ಆತನಿಗೆ ಗಾಂಧಿನಗರದಲ್ಲಿ ದೊಡ್ಡ ಬೇಡಿಕೆ ಏನು ಬಂದಿರಲಿಲ್ಲ. ಅಷ್ಟೇ ಅಲ್ಲ, ಆತ ಆನಂತರ ನಟಿಸಿದ್ದ ನಾಲ್ಕೈದು ಚಿತ್ರಗಳೂ ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದ್ದವು. ಹೀಗಾಗಿ 'ತಾಜ್ ಮಹಲ್'ನ ಅಜಯ್ ಚಿತ್ರರಂಗಕ್ಕೆ ಒಂದು ರೀತಿಯಲ್ಲಿ ಹೊಸಬನೇ ಆಗಿದ್ದ. ಇನ್ನೊಂದು ಮುಖ್ಯ ಸಂಗತಿ ಯಾವುದೆಂದರೆ ಈ ಚಿತ್ರದ ನಿರ್ದೇಶಕ ಚಂದ್ರುಗೂ ಇದು ಚೊಚ್ಚಲ ಪ್ರಯತ್ನ. ಈ ಎಲ್ಲ ಕಾರಣಗಳಿಂದಾಗಿ ಬಿಡುಗಡೆಯ ಮುನ್ನ 'ತಾಜ್ ಮಹಲ್' ಚಿತ್ರದಲ್ಲಿ 'ಗಟ್ಟಿ' ಅಂಶ ಎಂಬುದಿದ್ದರೆ ಅದು ಪೂಜಾ ಗಾಂಧಿ ಮಾತ್ರವೇ ಎಂಬಂತಿತ್ತು. ಆ ಕಾರಣಕ್ಕಾಗಿ ಜಾಹೀರಾತುಗಳಲ್ಲಿ ಪೂಜಾಳನ್ನೇ ಹೈಲೈಟ್ ಮಾಡಲಾಗಿತ್ತು.

'ತಾಜ್ ಮಹಲ್' ಅಷ್ಟೇನೂ ಒಳ್ಳೆಯ ಚಿತ್ರವಲ್ಲವಾದರೂ ಅದು ಅನಿರೀಕ್ಷಿತವಾಗಿ ಬಾಕ್ಸಾಫೀಸಿನಲ್ಲಿ ಗೆದ್ದಿದೆ. ಗಾಂಧಿನಗರಿಗಳ ಪ್ರಕಾರ ಚಿತ್ರದ ಗೆಲುವಿಗೆ ಪೂಜಾಳ ತಾರಾ ಮೌಲ್ಯ ಸಾಕಷ್ಟು ಸಹಾಯ ಮಾಡಿದೆ.

'ತಾಜ್ ಮಹಲ್' ಹಿಂದೆಯೇ ರಮ್ಯಾ ನಟಿಸಿರುವ 'ಅಂತೂ ಇಂತೂ ಪ್ರೀತಿ ಬಂತು' ಬಿಡುಗಡೆಗೊಂಡಿತು. ಆ ಚಿತ್ರದ ನಾಯಕ ಆದಿತ್ಯನೂ ಚಿತ್ರರಂಗಕ್ಕೆ ಹೊಸಬನೇ. ಹೀಗಾಗಿ ಈ ಚಿತ್ರದ ಜಾಹೀರಾತುಗಳಲ್ಲಿ ರಮ್ಯಾಳೆ ರಾರಾಜಿಸಿದಳು. ಸಾಮಾನ್ಯವಾಗಿ ಟಿವಿ ಸಂದರ್ಶನ ನೀಡಲೂ ಖ್ಯಾತೆ ತೆಗೆಯುವ ರಮ್ಯಾ 'ಅಂತೂ ಇಂತೂ' ಚಿತ್ರದ ಬ್ರಾಂಡ್ ಅಂಬಾಸಿಡರ್ ತಾನೆಂಬಂತೆ ಎಲ್ಲಾ ಚಾನೆಲ್‌ಗಳಲ್ಲಿ ಕಾಣಿಸಿಕೊಂಡಳು. (ಅಂದಹಾಗೆ, ಅಪ್ಪಟ ಕನ್ನಡತಿಯಾದ ರಮ್ಯಾ ಈ ಎಲ್ಲ ಸಂದರ್ಶನಗಳಲ್ಲಿ ತನ್ನ ಎಂದಿನ ಕಾನ್ವೆಂಟ್ ಇಂಗ್ಲಿಷ್‌ಅನ್ನು ಬಿಟ್ಟು ಕನ್ನಡದಲ್ಲಿ ಮಾತನಾಡಿ ಎಲ್ಲರನ್ನು ಬೆಚ್ಚಿಬೀಳಿಸಿದಳು. ಪಂಜಾಬಿನ ಬೆಡಗಿ ಪೂಜಾಳೇ ಇವತ್ತು ಅಚ್ಚ ಕನ್ನಡದಲ್ಲಿ ಮಾತನಾಡುತ್ತಿರುವಾಗ ತಾನೂ ಕೂಡ ಕನ್ನಡದಲ್ಲೇ ಮಾತನಾಡುವ ಪ್ರತಿಜ್ಞೆಯನ್ನು ರಮ್ಯಾ ಕೈಗೊಂಡಿರಬಹುದೇ ಎಂದು ಹಲವರು ಕಾಮೆಂಟ್ ಮಾಡಿದ್ದೂ ಆಯಿತು.)



ಅಷ್ಟೇ ಅಲ್ಲ 'ಅಂತೂ ಇಂತೂ...' ಚಿತ್ರದ ನಿರ್ಮಾಪಕರು ಶ್ರೀಮಂತರು. ಆದ್ದರಿಂದ ಎಲ್ಲೂ ಕಾಂಪ್ರಮೈಸ್ ಮಾಡಿಕೊಳ್ಳದೆ ಚಿತ್ರವನ್ನು ಅದ್ದೂರಿಯಾಗಿ ನಿರ್ಮಿಸಿದ್ದಾರೆ. ಅಂದಹಾಗೆ ಈ ಚಿತ್ರದ ನಾಯಕ ನಟ, ನಿರ್ಮಾಪಕ, ನಿರ್ದೇಶಕ ಮತ್ತು ತಂತ್ರಜ್ಞರೆಲ್ಲರೂ ಆಂಧ್ರದವರು. ಅದಕ್ಕೆ ಹೋಲಿಸಿದರೆ 'ತಾಜ್ ಮಹಲ್' ಚಿತ್ರದ ನಿರ್ಮಾಪಕ, ನಿರ್ದೇಶಕ ಮತ್ತು ಛಾಯಾಗ್ರಾಹಕರೆಲ್ಲರೂ ಕನ್ನಡಿಗರು.

ಅದೆಲ್ಲ ಏನೇ ಇರಲಿ, ತನ್ನ ಹೊಸ ಚಿತ್ರದ ಯಶಸ್ಸಿಗೆ ರಮ್ಯಾ ಎಷ್ಟೆಲ್ಲಾ ಪ್ರಯತ್ನಿಸಿದರೂ ಈ ಚಿತ್ರ ಬಿಡುಗಡೆಗೊಂಡ ಎರಡು ದಿನಗಳಲ್ಲೇ ಥಿಯೇಟರ್‌ಗಳು ಖಾಲಿ ಹೊಡೆಯಲಾರಂಭಿಸಿದವು. 'ಅಂತೂ ಇಂತೂ' ಎನ್ನುವ ಮುನ್ನವೇ ಚಿತ್ರದ ರೀಲುಗಳು ಡಬ್ಬಾ ಸೇರಿದವು.

ಈ ಎರಡು ವಿಭಿನ್ನ ಫಲಿತಾಂಶಗಳಿಂದ ಯಾರು ಗೆದ್ದರು, ಯಾರು ಸೋತರು; ಕನ್ನಡಿಗರ ಚಿತ್ರ ಗೆದ್ದಿರುವುದಕ್ಕೆ ಕನ್ನಡತಿಯಲ್ಲದ ಪೂಜಾ ಕಾರಣವೋ, ಕನ್ನಡಿಗರಲ್ಲದವರ ಚಿತ್ರ ಸೋತಿರುವುದಕ್ಕೆ ಕನ್ನಡತಿ ರಮ್ಯಾ ಎಷ್ಟು ಹೊಣೆ; ಪೂಜಾ ಗಾಂಧಿ ಬೆಟರ್ರೋ, ರಮ್ಯಾಳೇ ವಾಸಿನೋ ಎಂಬಂತಹ ಹೈಸ್ಕೂಲ್ ಮಟ್ಟದ ಚರ್ಚೆ ಈಗ ನಡೆಯುತ್ತಿದೆ.

ಗಾಂಧಿನಗರದಲ್ಲಿ ಇಂತಹ ವಿಷಯಗಳಿಗೆ ಎಂದೂ ಕೊರತೆ ಇರುವುದಿಲ್ಲ ಬಿಡಿ.....


■ ಶೆಣೈ

ಸಿನಿ Bits

■ ಅರುಣ್.ಜಿ

ಮತ್ತೆ ಬಂದ ದರ್ಶೀಲ್

ಕಳೆದ ವರ್ಷ 'ತಾರೆ ಜಮೀನ್ ಪರ್' ಸಿನಿಮಾದ ಮೂಲಕ ದೊಡ್ಡ ಮಟ್ಟದಲ್ಲಿ ಹೆಸರು ಮಾಡಿದ್ದ ದರ್ಶೀಲ್ ಸಫಾರಿ ಎಂಬ ಪೋರ ಈಗ ತನ್ನ ಎರಡನೆ ಚಿತ್ರಕ್ಕೆ ಸಹಿ ಹಾಕಿದ್ದಾನೆ. 'ತಾರೆ...' ಬಿಡುಗಡೆಯಾದ ನಂತರ ಸಹಜವಾಗಿಯೇ ಈ ಬಾಲನಟನಿಗೆ ಸಾಕಷ್ಟು ಆಫರ್‌ಗಳು ಬಂದಿದ್ದವು. ಆದರೆ ಆತನ ಪೋಷಕರು ಅವನ ವಿದ್ಯಾಭ್ಯಾಸದ ದೃಷ್ಟಿಯಿಂದ ಹಲವು ಜಾಹೀರಾತುಗಳನ್ನು ಮಾತ್ರ ಒಪ್ಪಿಕೊಂಡು ಸಿನಿಮಾ ಆಹ್ವಾನಗಳನ್ನು ತಿರಸ್ಕರಿಸಿದ್ದರು.



ಆದರೆ ಈಗ ನಿರ್ದೇಶಕ ಪ್ರಿಯದರ್ಶನ್ ತಮ್ಮ ಹೊಸ ಚಿತ್ರದಲ್ಲಿ ಈ ಹುಬ್ಬುಹಲ್ಲಿನ ಚುರುಕು ಹುಡುಗ ನಟಿಸುವಂತೆ ಆತನ ತಂದೆ ತಾಯಂದಿರನ್ನು ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಲ್ಲಿಯತನಕ ದಕ್ಷಿಣ ಭಾರತದ ಹಿಟ್ ಸಿನಿಮಾಗಳನ್ನೇ ಹಿಂದಿಯಲ್ಲಿ ರೀಮೇಕ್ ಮಾಡಿ ಖ್ಯಾತಿ ಗಳಿಸಿರುವ ಪ್ರಿಯದರ್ಶನ್ ಈ ಬಾರಿ ಇರಾನಿಯನ್ ಸಿನಿಮಾವನ್ನು ಹಿಂದಿಯಲ್ಲಿ ರೀಮೇಕ್ ಮಾಡುತ್ತಿದ್ದಾರೆ. ಪ್ರಿಯದರ್ಶನ್ ಅವರ ಕಣ್ಣು ಈಗ ಬಿದ್ದಿರುವುದು ಮಜಿದ್ ಮಜೀದಿ ಎಂಬ ಇರಾನಿ ನಿರ್ದೇಶಕನ 'ಚಿಲ್ಡ್ರನ್ ಆಫ್ ಹೆವನ್' ಎಂಬ ಸಿನಿಮಾದ ಮೇಲೆ. ಬಡ ಸಂಸಾರದ ಅಣ್ಣಾ ಮತ್ತು ತಂಗಿ ಒಂದು ಜೊತೆ ಶೂಗಾಗಿ ನಡೆಸುವ ಪೈಪೋಟಿಯ ಕತೆ ಹೊಂದಿರುವ ಈ ಚಿತ್ರ ಮನಮುಟ್ಟುವಂತಿದ್ದು ಆಸ್ಕರ್ ಪ್ರಶಸ್ತಿಗೂ ನಾಮಕರಣಗೊಂಡಿತ್ತು.

ಚೆನ್ನೈಗೆ ಹಾರಿದವರು



ಇವತ್ತು ಕನ್ನಡ ಚಿತ್ರರಂಗದ ಗೋಲ್ಡನ್ ಸ್ಟಾರ್ ಗಣೇಶನಿಂದ ಹಿಡಿದು ನವರಸನಾಯಕ ಜಗ್ಗೇಶ್‌ತನಕ ಎಲ್ಲರೂ ತಮ್ಮ ಚಿತ್ರದ ಯಶಸ್ಸಿಗಾಗಿ ಪೂಜಾ ಗಾಂಧಿಯ ಸೆರಗು ಹಿಡಿದು ಓಡಾಡುತ್ತಿರುವಾಗಲೇ ಪಕ್ಕದ ತಮಿಳುನಾಡಿನ ಚಿತ್ರಬ್ರಹ್ಮ ಕೆ. ಬಾಲಚಂದರ್ ಸದ್ದಿಲ್ಲದೆ ಆಕೆಯನ್ನು ಹೈಜಾಕ್ ಮಾಡಿ ಚೆನ್ನೈಗೆ ಎಳೆದೊಯ್ದಿದ್ದಾರೆ.

ಬಾಲಚಂದರ್‌ರ ಕವಿತಾಲಯ ಬ್ಯಾನರ್‌ನಲ್ಲಿ ನಿರ್ಮಾಣವಾಗುತ್ತಿರುವ, ಪೇರರಸು ನಿರ್ದೇಶಿಸುತ್ತಿರುವ "ತಿರುವಣ್ಣಾ ಮಲ್ಲೈ" ಚಿತ್ರದಲ್ಲಿ ಮತ್ತೊಬ್ಬ ಕನ್ನಡಿಗ ಅರ್ಜುನ್ ಸರ್ಜಾ ನಾಯಕನಟರಾಗಿದ್ದಾರೆ.



ಪೂಜಾಳೊಂದಿಗೆ ಬಾಲಚಂದರ್ ಸಿನಿಮಾದಲ್ಲಿ ನಟಿಸಲು ಚೆನ್ನೈಗೆ ಹಾರಿರುವ ಮತ್ತೊಬ್ಬ ಕನ್ನಡತಿ ಸುಂದರ್ ರಾಜ್ ಮತ್ತು ಪ್ರಮೀಳಾ ಜೋಷಾಯ್ ಪುತ್ರಿ ಮೇಘನಾ ರಾಜ್‌ಗೆ ಕಳೆದ ಎರಡು ವರ್ಷಗಳಿಂದ ಕನ್ನಡ ಚಿತ್ರರಂಗದವರು ಹಲವಾರು ಬಾರಿ ಈಕೆಗೆ ನಾಯಕ ನಟಿಯಾಗಲು ಆಫರ್‌ಗಳನ್ನು ನೀಡಿದ್ದರೂ ಆಕೆಯ ಅರಂಗೇಟ್ರಂ ಪುನೀತ್ ರಾಜ್‌ಕುಮಾರ್ ಚಿತ್ರದಿಂದಲೇ ಆಗಬೇಕು ಎಂಬ ಹಠವನ್ನು ಆಕೆಯ ತಂದೆ-ತಾಯಿ ತೊಟ್ಟಿದ್ದರು.

ಆದರೆ ಈಗ ಸ್ವತಃ ಬಾಲಚಂದರ್ ಅವರಿಂದಲೇ ಬುಲಾವ್ ಬಂದ ಮೇಲೂ ಕಾಯೋದುಂಟಾ? ತಮ್ಮ ಹಳೆಯ ಹಠಕ್ಕೆ ಫುಲ್‌ಸ್ಟಾಪ್ ನೀಡಿದ ಸುಂದರ್ ರಾಜ್-ಜೋಷಾಯ್ ಜೋಡಿ ಈಗ ತಮ್ಮ ಮಗಳ ಕೈಗೆ ಗಂಟು ಮೂಟೆ ಕೊಟ್ಟು ಚೆನ್ನೈಗೆ ಹಾರಿಸಿದ್ದಾರೆ. ಸದ್ಯ ಈಕೆ 'ಕೃಷ್ಣಲೀಲೆ'ಯಲ್ಲಿ ನಾಯಕ ಜೀವನ್‌ಗೆ ಜೋಡಿಯಾಗಿದ್ದಾಳೆ.


ಕಂಗ್ರಾಟ್ಸ್ ಕಾರ್ನಾಡ್!



ಪದ್ಮಭೂಷಣ, ಪದ್ಮಶ್ರೀ, ಜ್ಞಾನಪೀಠ ಮುಂತಾದ ದೊಡ್ಡ ದೊಡ್ಡ ಪ್ರಶಸ್ತಿ ಸನ್ಮಾನಗಳಿಗೆ ಭಾಜನರಾಗಿರುವ ನಟ, ನಿರ್ದೇಶಕ, ನಾಟಕಕಾರ 'ಗಿರೀಶ್ ಕಾರ್ನಾಡ್' ಈಗ ಯುನೆಸ್ಕೋ ನಾಟಕ ಸಂಸ್ಥೆ ಆಯ್ಕೆ ಮಾಡಿರುವ ಅಂಬಾಸಿಡರ್‌ಗಳಲ್ಲಿ ಒಬ್ಬರಾಗಿದ್ದಾರೆ.

ಬ್ರಿಟಿಷ್ ನಾಟಕಕಾರ ಹಾಗೂ ಚಿತ್ರ ನಿರ್ದೇಶಕ ಪೀಟರ್ ಬ್ರೂಕ್, ಇಟಲಿಯ ಡಾರಿಯೋ ಫೋ, ಫ್ರಾನ್ಸ್‌ನ ಖ್ಯಾತ ನಾಟಕಕಾರ ಆರ್ನಿ ಮಾಂಚ್‌ಕೈನ್ ಮುಂತಾದವರು ಆಯ್ಕೆಗೊಂಡಿರುವ ಈ ಪಟ್ಟಿಯಲ್ಲಿ ಕನ್ನಡಿಗ ಕಾರ್ನಾಡರೂ ಸೇರಿರುವುದು ಸಂತೋಷದ ವಿಷಯವೇ ಅಲ್ಲವೇ?


ಈ ಸಂದರ್ಭದಲ್ಲಿ ಕಾರ್ನಾಡರಿಗೆ ಕಂಗ್ರಾಟ್ಸ್ ಹೇಳೋಣ.



'ಮಣಿ' ರಾಮಾಯಣ

ರಾಮಾಯಣದ ಕಥಾವಸ್ತುವನ್ನು ಹೊಂದಿರುವ ಚಿತ್ರವನ್ನು ಮಾಡಲು ಹೊರಟಿರುವ ಮಣಿರತ್ನಮ್ ಅವರ 120 ಕೋಟಿ ಬಜೆಟ್ ಚಿತ್ರಕ್ಕೆ ದಿನದಿಂದ ದಿನಕ್ಕೆ ಸ್ಟಾರ್‌ಗಳ ಸೇರ್ಪಡೆಯಾಗುತ್ತಲೇ ಇದೆ.

ಹಿಂದಿ ಮತ್ತು ತಮಿಳಿನಲ್ಲಿ ಒಟ್ಟಿಗೆ ನಿರ್ಮಾಣವಾಗುತ್ತಿರುವ ಈ ಚಿತ್ರದಲ್ಲಿ ಅಭಿಷೇಕ್ ಮತ್ತು ಐಶ್ವರ್ಯ ರೈ ರಾಮ-ಸೀತೆಯ ಪಾತ್ರದಲ್ಲಿ ನಟಿಸುತ್ತಿದ್ದರೆ ಮತ್ತೊಬ್ಬ ಖ್ಯಾತ ನಟ ಗೋವಿಂದ ಹನುಮನ ಪಾತ್ರಧಾರಿಯಾಗಿದ್ದಾರೆ.



ಇದರೊಂದಿಗೆ 'ಅನ್ನಿಯನ್' ಖ್ಯಾತಿಯ ತಮಿಳು ನಟ ವಿಕ್ರಮ್ ರಾವಣನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಈವರೆಗೆ ರಾಮಾಯಣದ ಎಳೆಯನ್ನಿಟ್ಟುಕೊಂಡು ಹಲವಾರು ಸಿನಿಮಾಗಳು ಬಂದಿದ್ದರೂ ಈ ಬಹುಕೋಟಿ ಬಜೆಟ್‌ನ ಬಹು ತಾರಾಗಣದ ಚಿತ್ರ ದಿನದಿಂದ ದಿನಕ್ಕೆ ಎಲ್ಲರ ಕುತೂಹಲವನ್ನು ಹೆಚ್ಚಿಸುತ್ತಿದೆ.

ಈ ಬಾರಿಯಾದರೂ ನಿರೀಕ್ಷೆಗಳು ಹುಸಿಯಾಗದೆ ಮಣಿರತ್ನಮ್ ಸೋಲಿನಿಂದ ಹೊರಬರುವಂತಾಗಲಿ.



ಕನ್ನಡದ ಮೇಲೆ ತೆಲುಗರ 'ಸವಾರಿ'


ತೆಲುಗಿನಲ್ಲಿ ಯಶಸ್ವಿಯಾಗಿದ್ದ 'ಗಮ್ಯಂ' ಚಿತ್ರವನ್ನು ಜೇಕಬ್ ಎಂಬ ನಿರ್ದೇಶಕ ಕನ್ನಡದಲ್ಲಿ ರೀಮೇಕಿಸಲು ಮುಂದಾಗಿದ್ದಾರೆ.

ನಾಗ್ತಿಹಳ್ಳಿಯವರ 'ಪ್ಯಾರಿಸ್ ಪ್ರಣಯ'ದಲ್ಲಿ ನಾಯಕನಾಗಿದ್ದ ರಘು ಮುಖರ್ಜಿ ಮತ್ತು ಶ್ರೀನಗರ ಕಿಟ್ಟಿ ಇಬ್ಬರ ಜಂಟಿ ನಾಯಕತ್ವದ ಈ ಚಿತ್ರಕ್ಕೆ 'ಸವಾರಿ' ಎಂಬ ಹೆಸರನ್ನೂ ಇಟ್ಟಿದ್ದಾರೆ.

ಈಟಿವಿಯ ಉಷಾಕಿರಣ ಬ್ಯಾನರ್‌ನವರು ನಿರ್ಮಿಸುತ್ತಿರುವ ಈ ಚಿತ್ರದಿಂದ ಕನ್ನಡಿಗರ ಮೇಲೆ ತೆಲುಗರ 'ಸವಾರಿ' ಮತ್ತೂ ಮುಂದುವರೆದಂತಾಗಿದೆ. ■

R B P LANKESH, Kannada Weekly Price Rs. 12/- 3-9-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore

ಜಗ್ಗೇಶ್ ಎಂಬ ಕೋಡಗನೂ ವಾಸು ಎಂಬ ಕೋಳಿಯೂ



ಸ್ವಮೇಕ್ ಎಂದು ಸುಳ್ಳು ಹೇಳಿಕೊಂಡು ಪರಭಾಷೆಯಿಂದ ಎತ್ತುವಳಿ ಮಾಡಿ ರೀಮೇಕ್ ಸಿನಿಮಾ ಮಾಡುವುದರಲ್ಲಿ ನಮ್ಮ ಕನ್ನಡಿಗರು ಅಗ್ರಸ್ಥಾನದಲ್ಲಿದ್ದಾರೆ.

ಹೀಗೆ ಭೋಂಗು ಬಿಡುತ್ತಾ ಸಿನಿಮಾ ಮಾಡಿದವರ ಪಟ್ಟಿಗೆ 'ಕೋಡಗನ ಕೋಳಿ ನುಂಗಿತ್ತಾ' ಚಿತ್ರದ ನಿರ್ದೇಶಕ ವಾಸು ಕೂಡಾ ಸೇರಿದ್ದಾರೆ.

ತೆಲುಗಿನಲ್ಲಿ ಕತ್ರಿನಾ ಕೈಫ್ ಮತ್ತು ವೆಂಕಟೇಶ್ ನಟಿಸಿದ್ದ 'ಮಲ್ಲೀಶ್ವರಿ' ಚಿತ್ರವನ್ನೇ ಕನ್ನಡೀಕರಿಸಿರುವ ವಾಸುಗೆ ಸರಿಯಾಗಿ ಕಾಪಿ ಮಾಡಲೂ ಬಾರದಿರುವುದೇ ದುರಂತ.

ಜಗ್ಗೇಶ್ ಅಭಿನಯ ಸಹನೀಯವಾಗಿ ಚಿತ್ರ ನೋಡುವಂತೆ ಮಾಡಿದರೂ ನೀರಸ ನಿರ್ದೇಶನದಿಂದ ಜಗ್ಗೇಶ್ ಎಂಬ ಕೋಡಗನನ್ನು ವಾಸು ಎಂಬ ಕೋಳಿ ನುಂಗಿಹಾಕಿದೆ. ಇವರ ನುಂಗಾಟದ ನಡುವೆ ಪೂಜಾಗಾಂಧಿ ಪರದೇಸಿಯಾಗಿದ್ದಾಳೆ.



ಪ್ರಿಯಾಂಕಾಳ 12 ಅವತಾರ

ಮಲ್ಟಿಪಲ್ ರೋಲ್‌ಗಳು ಎಂದಾಕ್ಷಣ ಇಷ್ಟು ದಿನ ನಮ್ಮ ನೆನಪಿಗೆ ಬರುತ್ತಿದ್ದದ್ದು ರಾಜ್‌ಕುಮಾರ್, ಎಂಜಿಆರ್, ರಜನಿಕಾಂತ್ ಮತ್ತು ಕಮಲ್‌ನಂಥವರು ಮಾತ್ರ. ಅದರಲ್ಲೂ ಇತ್ತೀಚೆಗಷ್ಟೇ 'ದಶಾವತಾರಂ' ಚಿತ್ರದಲ್ಲಿ ಕಮಲ್ ಹತ್ತು ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಂಡು ಭಾರೀ ಸುದ್ದಿ ಮಾಡಿದ್ದರು.

ಆದರೆ ಈಗ ಈ ಎಲ್ಲ ಪುರುಷರಿಗಿಂತಲೂ ತಾನೇನು ಕಮ್ಮಿ ಎನ್ನುವಂತೆ ಬಾಲಿವುಡ್ ನಟಿ ಪ್ರಿಯಾಂಕಾ ಚೋಪ್ರಾ ಒಂದೇ ಚಿತ್ರದಲ್ಲಿ ಒಂದು ಡಜನ್ ಪಾತ್ರಗಳನ್ನು ನಿಭಾಯಿಸಲು ರೆಡಿಯಾಗಿದ್ದಾಳೆ. ಇಷ್ಟು ದಿನ ಬರೀ ಸೀರಿಯಸ್ ಸಬ್ಜೆಕ್ಟ್‌ಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದ ನಿರ್ದೇಶಕ ಅಶುತೋಷ್ ಗೌರೀಕರ್ ಮೊದಲ ಬಾರಿಗೆ ರೊಮ್ಯಾಂಟಿಕ್ ಕಾಮಿಡಿ ಕಥಾವಸ್ತುವನ್ನು ತಮ್ಮ ಮುಂದಿನ ಚಿತ್ರಕ್ಕೆ ಆಯ್ಕೆಮಾಡಿಕೊಂಡಿದ್ದಾರೆ. ಆ ಚಿತ್ರದಲ್ಲಿ ಪ್ರಿಯಾಂಕಾಳಿಗೆ ಹನ್ನೆರಡು ಅವತಾರಗಳನ್ನು ನೀಡಿದ ಅವತಾರ ಪುರುಷನಾಗಿದ್ದಾರೆ.

ಚಿಲ್ಲೆ ಪಿಲ್ಲೆಗಳ ಎಂಟ್ರಿ!



ಎಸ್. ನಾರಾಯಣ್ ಮಗ ಪಂಕಜ್ ಮೊದಲ ಬಾರಿಗೆ ನಾಯಕನಟನಾಗಿ ನಟಿಸಿರುವ 'ಚೈತ್ರದ ಚಂದ್ರಮ' ಮುಂದಿನ ವಾರ ತೆರೆಗೆ ಬರುತ್ತಿದೆ.

ಆದರೆ ತಮಾಷೆಯ ಸಂಗತಿ ಯಾವುದೆಂದರೆ, ತನ್ನ ಮಗನ ಆರಂಗೇಟ್ರಂ ಹೇಗಾಗುತ್ತದೋ ಎಂಬ ಆತಂಕವೂ ಇಲ್ಲದೆ ಸ್ವತಃ ನಾಣಿ ಕೂಲಾಗಿದ್ದರೂ ಈ ಚಿತ್ರದ ಬಗ್ಗೆ ಹೆಚ್ಚು ಟೆನ್ಷನ್ ಮಾಡಿಕೊಂಡಿರುವವರು ಜಗ್ಗೇಶ್ ಎಂಬುದು.

ಅದಕ್ಕೆ ಕಾರಣ "ನನ್ನ ಮಗ ಗುರುರಾಜ ಹೀರೋ ಆಗೋದು ಯಾವಾಗ? ನಾರಾಯಣ್ ಮಗನಿಗಿಂತ ನನ್ನ ಮಗ ಏನು ಕಮ್ಮಿ ಆಗೋವ್ನೆ?" ಎಂಬ ಜಗ್ಗೇಶ್ ತಕರಾರು.

ಇಷ್ಟರಲ್ಲೇ ತಮ್ಮ ಮಗನನ್ನು ಹೀರೋ ಮಾಡುವ ಚಿತ್ರವನ್ನು ಜಗ್ಗೇಶ್ ಪ್ರಾರಂಭಿಸಲಿದ್ದು ಸದ್ಯಕ್ಕೆ ಆತನನ್ನು ಮುಂಬೈಗೆ ಕಳುಹಿಸಿ ನವೀನ್ ಕಪೂರ್ ಎಂಬಾತನ ಬಳಿ ನಟನೆಯ ಎಬಿಸಿಡಿ ಕಲಿಸುತ್ತಿದ್ದಾರಂತೆ.

ಒಂದು ವೇಳೆ 'ಚೈತ್ರದ ಚಂದ್ರಮ' ಹಿಟ್ ಆದರೆ ಕನ್ನಡ ಚಿತ್ರರಂಗದ ಇನ್ನಷ್ಟು ಕಲಾವಿದರು ತಮ್ಮ ಚಿಳ್ಳೆ ಪಿಳ್ಳೆ ಮಕ್ಕಳನ್ನೆಲ್ಲಾ ಹೀರೋ ಹೀರೋಯಿನ್ ಮಾಡೋದಂತೂ ಹಂಡ್ರೆಡ್ ಪರ್ಸೆಂಟ್ ಗ್ಯಾರೆಂಟಿ ಎಂಬಂತಾಗಿದೆ ಸದ್ಯದ ಪರಿಸ್ಥಿತಿ.



ಈ ಸಂಭಾಷಣೆ ಹರಿಪ್ರಿಯಾ, ಸಂದೇಶ್

ಸೋಲಿನ ಹೊಸ್ತಿಲಲ್ಲಿ



ಗೋಲ್ಡನ್ ಸ್ಟಾರ್ ಗಣೇಶ್ ಮತ್ತು ಛಾಲೆಂಜಿಂಗ್ ಸ್ಟಾರ್ ದರ್ಶನ್ ಇಬ್ಬರೂ ಈಗ ಒಂದೇ ದೋಣಿಯಲ್ಲಿದ್ದಾರೆ ಎಂದರೆ ನಿಮಗೆ ಅಚ್ಚರಿಯಾಗಬಹುದು. ಆದರೆ ಅದು ನಿಜ.

ಸದ್ಯಕ್ಕೆ ಗಣೇಶ್ ಅಭಿನಯದ 'ಬೊಂಬಾಟ್' ಮತ್ತು ದರ್ಶನ್ ಅಭಿನಯದ 'ಅರ್ಜುನ್' ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಸೋತಿವೆ. ಇದರಿಂದಾಗಿ ಗಾಂಧಿನಗರದ ಅರ್ಥವ್ಯವಸ್ಥೆಯೇ ಅಲ್ಲಾಡುತ್ತಿದೆ. ಯಾಕೆಂದರೆ ಇವರಿಬ್ಬರೂ ಪ್ರಸ್ತುತ ಕನ್ನಡ ಚಿತ್ರರಂಗದ ಬಾಕ್ಸಾಫೀಸ್ ಕಿಂಗ್‌ಗಳಂತಿದ್ದು ಇವರ ಚಿತ್ರಗಳು ಹೇಗೇ ಇದ್ದರೂ ನಿರ್ಮಾಪಕನಿಗೆ ಮಿನಿಮಮ್ ಗ್ಯಾರಂಟಿ ಎಂಬ ಮಾತು ಚಾಲ್ತಿಯಲ್ಲಿತ್ತು. ಆದರೆ ಅದು ಈಗ ಸುಳ್ಳಾಗಿದೆ.

ಹೀಗಾಗಿ ಸದ್ಯಕ್ಕೆ ಎಲ್ಲರ ಕಣ್ಣು ಮತ್ತೊಬ್ಬ ಯುವ ನಟ ಪವರ್ ಸ್ಟಾರ್ ಪುನೀತ್ ಮೇಲಿದೆ. ಪುನೀತ್ ನಟಿಸಿದ 'ಬಿಂದಾಸ್' ಸಾಧಾರಣವಾಗಿದ್ದರೂ 'ಮಿಲನ' ಚಿತ್ರದ ಯಶಸ್ಸು ಆತನ ಪರವಿದೆ. ಮುಂದಿನ ತಿಂಗಳು ಬಿಡುಗಡೆಯಾಗಲಿರುವ 'ವಂಶಿ' ಚಿತ್ರದ ಕಡೆ ಇಡೀ ಗಾಂಧಿನಗರ ಕುತೂಹಲದಿಂದ ನೋಡುತ್ತಿದೆ.

ಜಯದ ಸರಮಾಲೆಯನ್ನೇ ತಮ್ಮದಾಗಿಸಿಕೊಂಡಿದ್ದ ಗಣೇಶ್ ಮತ್ತು ದರ್ಶನ್ ಇಬ್ಬರೂ ಈಗ ಸೋಲಿನ ಹೊಸ್ತಿಲಲ್ಲಿ ಸಪ್ಪಗೆ ನಿಂತಿರುವುದು ವಿಪರ್ಯಾಸವಲ್ಲವೇ?



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26...
Fax : 26604536, E-mail :lankesh70@rediffmail.com, Printed at Rajhans Enterprises, # 134...